(ಶ್ರೀ ಕಾಗೋಡು ತಿಮ್ಮಪ್ಪ)

ಸರ್ಕಾರ ಗಮನದಲ್ಲಿಟ್ಟುಕೊಂಡು ಹೇಳಿಕೆಯನ್ನು ಸದನದ ಮುಂದೆ ಇಡಬೇಕಾಗಿತ್ತು, ಅದನ್ನು ನಿರೀಕ್ಷಣೆ ಮಾಡುವವರಿದ್ದೇವೆ. ಇದುವರೆಗೆ ಸರ್ಕಾರ ಆ ಕೆಲಸ ಮಾಡದೇ ಇರುವುದರಿಂದ ಇವತ್ತು ಅನೇಕ ಅನುಮಾನಗಳು ಬರುವುದಕ್ಕೆ ಕಾರಣವಾಗಿದೆ. ಯಾವ ಹಂತದವರೆಗೆ ತನಿಖೆ ನಡೆದಿದೆ, ಇದರ ಬಗ್ಗೆ ಸರ್ಕಾರ ಏನು ಕ್ರಮ ಕೈಕೊಂಡಿದೆ ಎನ್ನುವ ಬಗ್ಗೆ ಹೇಳಿಕೆಯನ್ನು ಕೊಡಬೇಕು, ನಾನು ಸೂಚನೆ ಕಳುಹಿಸಿಕೊಟ್ಟಿದ್ದೇನೆ. ಶ್ರೀಮಾನ್ ಚನ್ನಬಸಪ್ಪನವರು ಇಲ್ಲೇ ಇದ್ದಾರೆ. ತಮ್ಮ ಮುಖಾಂತರ ಅವರನ್ನು ಈ ಬಂದು ವರದಿಯನ್ನು ಒದಗಿಸಿಕೊಡಬೇಕು ಎಂದು ನಾನು ಕೇಳಿ ಕೊಳ್ಳುತ್ತೇನೆ.

Sri H. M. CHANNABASAPPA.—Madam Speaker, after I received the notice, I made enquiries and came to know that I report is received and we will make a statement tomorrow. I do not know whether the Chief Minister comes or not.

BUDGET ESTIMATES FOR 1974-75 DEMANDS FOR GRANTS DEMAND Nos. 33, 56 and 59.

Sri S. M. YAHA (Minister for Labour and Tourism).—On the recommendation of the Governor, I beg to move :

> "That a sum not exceeding Rs. 2,89,57,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1975 in respect of Demand No. 33 'Labour and Employment'."

Madam SPEAKER.—Motiton moved :

"That a sum not exceeding Rs. 2,89.57,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1975 in respect of Demand No. 33 'Labour and Employment'."

The other Demands *viz.*, Nos. 56 and 59 are deemed to have been moved.

† ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರಂ).—ಸನ್ಮಾನ್ಯ ಅಧ್ಯಕ್ಷರೇ, ಕಾರ್ಮಿಕ ಸಚಿವರು ಮಂಡಿಸಿರುವ ಬೇಡಿಕೆಯನ್ನು ವಿರೋಧಿಸುತ್ತಾ ಎರಡು ಮಾತುಗಳನ್ನು ಆಡಲಿಕ್ಕೆ ಇಚ್ಛಿಸುತ್ತೇನೆ. ಇವತ್ತು ಮಾನ್ಯ ಸಚಿವರು ಕಾರ್ಮಿಕ ಇಲಾಖೆ ಬಗ್ಗೆ ಬೇಡಿಕೆಯನ್ನು ಮಂಡಿಸಿದ್ದಾರೆ. ಒಂದು ವರದಿಯನ್ನೂ ಸಹ ಸಲ್ಲಿಸಿದ್ದಾರೆ. ಕಾರ್ಮಿಕರ ಪ್ರಶ್ನೆ ಬಂದಾಗ, ಮೊದಲನೆಯದಾಗಿ, ನಮ್ಮ ದೇಶದಲ್ಲಿ, ನಮ್ಮ ಸಮಾಜದಲ್ಲಿ ಬರುವ ಸಮಸ್ಯೆ ಏನು ಎಂದು ಹೇಳಿದರೆ, ಈಗಿನ ಸಂದರ್ಭದಲ್ಲಿ ಮತ್ತು ಈಗಿನ ವಾತಾವರಣದಲ್ಲಿ ಕೈಗಾರಿಕಾ ಸಂಬಂಧಗಳು ಯಾವ ರೀತಿ ಇದೆ, ಅಶಾಂತಿ ಕಡಿಮೆ ಯಾಗಿದೆಯೇ, ಜಾಸ್ತಿಯಾಗಿದೆಯೇ, ಅದು ಸರಿಯಾಗಿಲ್ಲದಿದ್ದರೆ, ಅದಕ್ಕೆ ಕಾರಣವೇನು ಎನ್ನುವ ಬಗ್ಗೆ ವಿವೇಚನೆ ಮಾಡಬೇಕು. ಕಾರ್ಮಿಕ ಮಂತ್ರಿಗಳ ಮುಖ್ಯ ಕರ್ತವ್ಯ, ಜವಾಬ್ದಾರಿ ನಾನು ತಿಳಿದು ಕೊಂಡಿರುವ ಮಟ್ಟಿಗೆ ನಮ್ಮ ರಾಜ್ಯದಲ್ಲಿ ಕೈಗಾರಿಕಾ ಸಂಬಂಧಗಳು ಸರಿಯಾಗಿರಬೇಕು, ಕೈಗಾರಿಕಾ ವಿವಾದಗಳು ಇತ್ಯರ್ಥವಾಗಬೇಕು, ಕಾರ್ಮಿಕರ ಸಮಸ್ಯೆಗಳನ್ನು ಬಗೆಹರಿಸಬೇಕು, ಉತ್ಪಾದನೆ ಜಾಸ್ತಿಯಾಗಬೇಕು, ಎಂದು ಅವರು ದೇಶದ ಹಿತದೃಷ್ಟಿಯಿಂದ ಕೆಲಸಮಾಡಬೇಕಾಗಿದೆ. ಈ ದಿಶೆ

ಯಲ್ಲಿ ಅವರು ಕೊಟ್ಟಿರುವಂಥ ಅಂಕಿ ಅಂಶಗಳನ್ನು ನೋಡಿದರೆ, ಈ ಕೈಗಾರಿಕಾ ಸಂಬಂಧಗಳ ಅಂಕಿ ಅಂಶ ನೋಡಿದರೆ, ಈ ವರ್ಷದ ಅವರ ವರದಿಯ ಪ್ರಕಾರ 73 ಮುಷ್ಕರಗಳು 31674 ಜನ ಕಾರ್ಮಿಕರು ಅದರಲ್ಲಿ ಭಾಗವಹಿಸಿದ್ದಾರೆ, 2,83,191 ಮಾನ್ಯಡೇಸ್ ಹೋಗಿದೆ, 20,61,684 ರೂಪಾಯಿ ಸಂಬಳ ಹೋಗಿದೆ, 7,39,93,217 ರೂಪಾಯಿ ಉತ್ಪಾದನೆ ಹೋಗಿದೆ ಎಂದು ಹೇಳಿದ್ದಾರೆ. ಹೋದ ವರ್ಷ ಕೂಡ ಇದೇ ರೀತಿ ವರದಿಯನ್ನು ಸಲ್ಲಿಸಿದರು. ಕಳೆದ ವರ್ಷ 1972-73ರಲ್ಲಿ ಸಲ್ಲಿಸಿದ ವರದಿಯನ್ನೂ, ಈ ವರ್ಷ ಸಲ್ಲಿಸಿರುವ ವರದಿಯನ್ನು ನೋಡಿದರೆ ಮೂಲಭೂತ ವ್ಯತ್ಯಾಸ ಏನೂ ಕಂಡುಬರುವುದಿಲ್ಲ. ನನ್ನ ಹತ್ತಿರ ಕಳೆದ ವರ್ಷದ ವರದಿ ಕೂಡ ಇದೆ. ಒಂದು ಕಡೆ ಲಿಮಿಟ್ ಆಗಿದ್ದಾರೆ ಇನ್ನೊಂದು ಕಡೆ ಜಾಸ್ತಿಯಾಗಿದೆ. ಏಕೆ ಹೀಗೆ ಆಗಿದೆಯೆಂದರೆ, ಕಾರ್ಮಿಕರ ಶಾಂತಿ ಅವಶ್ಯಕ ಎಂದು ಎಲ್ಲರೂ ಹೇಳುತ್ತಾರೆ. ಶ್ರೀಮತಿ ಇಂದಿರಾಗಾಂಧಿಯವರು ಹೇಳುತ್ತಾರೆ, ಹಿಂಸೆ ಇರಕೂಡದು, ಕಾರ್ಮಿಕರು ಹಿಂಸಾಕೃತ್ಯಗಳಿಗೆ ಹೋಗಕೂಡದು, ಕಾರ್ಮಿಕರು ಮುಷ್ಕರ ನಡೆಸ ಕೂಡದು, ಮಾಲೀಕರು ಲಾಕೌಟ್ ಮಾಡಕೂಡದು ಎಂದು ಹೇಳುತ್ತಾರೆ. ಇದೇ ರೀತಿ ರಾಷ್ಟ್ರಾಧ್ಯಕ್ಷರು ಮಾತನಾಡಿ, ಕಾರ್ಮಿಕರ ಶಾಂತಿಯ ಬಗ್ಗೆ, ಸ್ಟ್ರೈಕ್, ಲಾಕೌಟ್ ಬಗ್ಗೆ ಮೊರಟೋರಿಯಂ ಇರಬೇಕು ಎಂದು ಅವರೆಲ್ಲಾ ದೊಡ್ಡ ದೊಡ್ಡ ಭಾಷಣಗಳನ್ನು ಮಾಡಿದ್ದಾರೆ. ಈ ರೀತಿ ಹೇಳಿದರೂ ಸಹ ನಮ್ಮ ರಾಜ್ಯದಲ್ಲಿ ಕಂಡು ಬರುವುದು ತದ್ವಿರುದ್ಧವಾಗಿದೆ. ಮೂಲಭೂತವಾಗಿ ಕಾರ್ಮಿಕ ಇಲಾಖೆ ಮತ್ತು ಸರ್ಕಾರದ ನೀತಿಯಿಂದ ನಮ್ಮ ರಾಜ್ಯದಲ್ಲಿರುವ ಬಂಡವಾಳಗಾರರು ಏನು ಅಶಾಂತಿಯನ್ನು ಉಂಟುಮಾಡುತ್ತಿದ್ದಾರೆ ಅಂಥವರನ್ನು ಹದ್ದುಬಸ್ತಿನಲ್ಲಿಡುವುದಕ್ಕೆ ಅಸಮರ್ಥತೆಯನ್ನು ತೋರಿಸುತ್ತಾ ಇದೆ ಎಂದು ನನ್ನ ಆರೋಪಣೆ. ಯಾವ ರೀತಿ ಅಸಮರ್ಥತೆಯನ್ನು ತೋರಿಸುತ್ತಾ ಇದೆ ಎನ್ನುವುದರ ಬಗ್ಗೆ 2-3 ನಿದರ್ಶನಗಳನ್ನು ಹೇಳಬಲ್ಲೆ. ಅದರ ಬಗ್ಗೆ ಕಾರ್ಯಕ್ರಮ ತೆಗೆದುಕೊಳ್ಳುವುದಕ್ಕೆ ತಯಾರಿದ್ದೇವೆ, ಇಚ್ಛೆ ಇದೆ ಎಂದು ಹೇಳಬೇಕು. ಇಚ್ಛೆ ಮಾತ್ರವಲ್ಲ ಕಾರ್ಯಕ್ರಮ ಏನು ತೆಗೆದುಕೊಂಡಿದ್ದೀರಿ ಆ ಕಾರ್ಯಕ್ರಮದ ಆಧಾರದ ಮೇಲೆ ಫಲಿತಾಂಶ ಏನಾಯಿತು ಎನುವುದು ಮುಖ್ಯ. ಇವತ್ತಿನ ದಿವಸ ನಮ್ಮ ರಾಜ್ಯದಲ್ಲಿ ಬೇರೆ ಬೇರೆ ದೊಡ್ಡ ದೊಡ್ಡ ಮಾಲೀಕರು, ಸಣ್ಣ ಮಾಲೀಕರು ಸೇರಿ, ಕಾನೂನು ಕಟ್ಟಳೆಗಳಿಗೆ ಮರ್ಯಾದೆ ಕೊಡದೆ ಸರ್ಕಾರದ ಹೇಳಿಕೆಗಳನ್ನು ಉಲ್ಲಂಘನೆಮಾಡಿ, ಲೇಬರ್ ಡಿಪಾರ್ಟ್‌ಮೆಂಟ್ ಹೇಳಿದ ಮಾತನ್ನು ಉಲ್ಲಂಘನೆಮಾಡಿ, ಸ್ವೇಚ್ಛಾ ರೀತಿಯ ಮನೋಭಾವ ಹೆಚ್ಚಾಗಿ ತೋರಿಸುತ್ತಿದ್ದಾರೆ. 2-3 ಉದಾಹರಣೆ ಕೊಡುವುದಾದರೆ, ಬೆಂಗಳೂರು ತುಮಕೂರು ರಸ್ತೆಯಲ್ಲಿ ಮಂಗಾರಾಂ ಬಿಸ್ಕೆಟ್ ಫ್ಯಾಕ್ಟರಿ ಇದೆ. ಅಲ್ಲಿ ಸುಮಾರು 300 ಜನ ಕೆಲಸಮಾಡುತ್ತಾ ಇದ್ದಾರೆ. ಅದರಲ್ಲಿ ಹೆಣ್ಣುಮಕ್ಕಳು 200 ಜನ ಇದ್ದಾರೆ. ಅವರಿಗೆ ಸಂಬಳ 50-60 ರೂಪಾಯಿ ಕೊಡುತ್ತಾರೆ. ಡಿಯರ್ನೆಸ್ ಅಲೋಯನ್ಸ್ ಇಲ್ಲ. ಅಲ್ಲಿ ರಾಜಾಜಿನಗರ ಮೂಲೆ, ಬಸವನಗುಡಿ ಮೂಲೆಯಿಂದ, ಎಲ್ಲಾ ಕಡೆಯಿಂದ ಹೋಗುತ್ತಾರೆ. ನೌಕರರು ಅವರ ಆರ್ಥಿಕ ಪರಿಸ್ಥಿತಿಯಿಂದಾಗಿ, ಕೆಲಸಮಾಡುವುದಕ್ಕೆ ಹೋಗುತ್ತಿದ್ದಾರೆ. ಮಂಗಾರಾಂ ಬಿಸ್ಕೆಟ್ ಹೆಚ್ಚಾಗಿ ಮಾರಾಟವಾಗುತ್ತದೆ. ಆ ಬಿಸ್ಕೆಟ್‌ನ್ನು ಅಶೋಕ ಹೋಟಲಿನಲ್ಲಿ ತಿನ್ನುತ್ತಾರೆ, ಟೀ ಪಾರ್ಟಿಗೆ ಮಂಗಾರಾಂ ಕ್ವಾಲಿಟಿ ಬಿಸ್ಕೆಟನ್ನು ಉಪಯೋಗಿಸುತ್ತಾರೆ. ಅವರಿಗೆ 60-70 ರೂಪಾಯಿ ಸಂಬಳ ಕೊಟ್ಟರೆ ಅವರು ಅದರಲ್ಲಿ ಹೇಗೆ ಜೀವನಮಾಡಬೇಕು. ಅದಕ್ಕಾಗಿ ಹೆಣ್ಣುಮಕ್ಕಳು ಒಂದು ಯೂನಿಯನ್‌ಮಾಡಿ ತಮ್ಮ ಸಮಸ್ಯೆಯನ್ನು ಬಗೆಹರಿಸಿಕೊಳ್ಳಬೇಕು ಎಂದು ಪ್ರಯತ್ನಪಟ್ಟರೆ, ಅದೇ ದಿವಸವೇ ಅವರನ್ನು ಡಿಸ್‌ಮಿಸ್ ಮಾಡಿದರು. ಡಿಸ್‌ಮಿಸ್ ಮಾಡಿರುವುದನ್ನು ಪ್ರತಿಭಟಿಸಿ ಕೆಲಸದ ಮೇಲೆ ತೆಗೆದುಕೊಳ್ಳಿ ಎಂದು ಮುಷ್ಕರ ನಡೆಸಲು ಪ್ರಯತ್ನಪಟ್ಟಾಗ, ಮಾರನೇ ದಿವಸ ಎಲ್ಲರನ್ನೂ ಡಿಸ್‌ಮಿಸ್ ಮಾಡಿದರು. ಮಾಲೀಕರು ಎಲ್ಲಿಯವರೆಗೆ ಹೋಗುತ್ತಾರೆ ಎಂದರೆ ಯೂನಿಯನ್ ಮಾಡುವುದಕ್ಕೂ ಬಿಡುತ್ತಾ ಇಲ್ಲ. ಹೆಣ್ಣುಮಕ್ಕಳೆಲ್ಲರನ್ನೂ ಡಿಸ್‌ಮಿಸ್ ಮಾಡಿದ್ದಾರೆ. ಇದರ ಬಗ್ಗೆ ಸರ್ಕಾರದ ಮುಂದೆ ಚರ್ಚೆಯಾಯಿತು, ಮೆರವಣಿಗೆ ನಡೆಯಿತು. ಹಿಂದೆ ಮಾನ್ಯ ಅಜೀಜ್ ಸೇಠ್ ಅವರು ಕಾರ್ಮಿಕ ಮಂತ್ರಿಗಳಾಗಿದ್ದರು. ಸ್ವಲ್ಪ ದಿವಸ ಆದಮೇಲೆ ಶ್ರೀ ಯಾಹ್ಯಾ ಅವರು ಮಂತ್ರಿಗಳಾಗಿದ್ದಾರೆ. ಸರ್ಕಾರದ ನೀತಿ ಏನಿತ್ತು, ಮಾನ್ಯ ಅಜೀಜ್ ಸೇಠ್ ಅವರು ಮಂತ್ರಿಗಳಾಗಿದ್ದಾಗ, ಯಾರು ಮಾಲೀಕರು ಇವರ ಮಾತಿಗೆ ಮನ್ನಣೆ ಕೊಡದೇ ಇದ್ದರೋ ಅವರ ಬಗ್ಗೆ ದಿಟ್ಟತನದ ಕಾರ್ಯಕ್ರಮ ತೆಗೆದುಕೊಂಡರು. ಅದಕ್ಕೆ ಮಾನ್ಯ ಅಜೀಜ್ ಸೇಠ್‌ರು ಅಭಿನಂದನಾರ್ಹರು.

ಮೈತ್ರಿದಾನವನ್ನು ಕೊಡುವುದನ್ನು ನಿಲ್ಲಿಸುತ್ತೇವೆಂದು ಹೇಳಿದರು. ನಿಲ್ಲಿಸಿದ ಮೇಲೆ ಮಾಲೀಕ ಹುಡುಕಿಕೊಂಡು ಬಂದಿದ್ದ, ಕಾರಣ ಇದನ್ನು ಹೇಗಾದರೂ ಇತ್ಯರ್ಥ ಮಾಡೋಣವೆಂದು. ನಂತರ ಏನು ಆಯಿತು ಎಂದರೆ ಮಾನ್ಯ ಎಸ್. ಎಂ. ಯಾಹ್ಯಾರವರು ಬಂದರು ಅವರು ಪ್ರೊಫೆಸರ್‌ರವರು, ವಿಷಯವನ್ನು ತಿಳಿದುಕೊಂಡಿದ್ದಾರೆ, ಆದರೆ ಕಾರ್ಮಿಕ ವಿಷಯ ಅವರಿಗೆ ಅಷ್ಟು ಗೊತ್ತಿಲ್ಲ,

(ಶ್ರೀ ಎಂ. ಎಸ್ ಕೃಷ್ಣನ್)

ನಮ್ಮಷ್ಟು ಪರಿಶ್ರಮವನ್ನು ಪಡೆದಿಲ್ಲ. ನಾವು ದಿನಬೆಳಗಾದರೆ ಅದರಲ್ಲಿ ಮುಳುಗಿರುತ್ತೇವೆ. ಅವರ ಬಗ್ಗೆ ಹೇಳುವುದಕ್ಕೆ ಹೋಗುವುದಿಲ್ಲ. ಲೇಬರ್ ಡಿಪಾರ್ಟಮೆಂಟಿನವರು ಮೈದಾ ಕೊಡುವುದನ್ನು ನಿಲ್ಲಿಸಿ ಬಿಟ್ಟಿದ್ದರು, ಪುನಃ ಕೊಟ್ಟುಬಿಟ್ಟಿದ್ದಾರೆ. ಇದು ಯಾವಾಗ ಆಯಿತು ಎಂದರೆ ಮಂತ್ರಿಗಳು ಬದಲಾವಣೆಯಾಗುವ ಸಂದರ್ಭದಲ್ಲಿ, ಏತಕ್ಕೆ ಹಾಗೆ ಆಯಿತು ಎನ್ನುವುದು ಗೊತ್ತಾಗಲಿಲ್ಲ. ಇವತ್ತಿನ ದಿವಸ ಹೆಣ್ಣುಮಕ್ಕಳು ಕೆಲಸವಿಲ್ಲದೆ ಬೀದಿಯಲ್ಲಿ ಇದ್ದಾರೆ. ಇದು ಲೇಬರ್ ಕಮೀಷನರ್‌ರವರಿಗೆ ಗೊತ್ತಿರಲಿಲ್ಲ. ಡೈರೆಕ್ಟರ್ ಆಫ್ ಫುಡ್ ಅಂಡ್ ಸಿವಿಲ್ ಸಪ್ಲೈಸ್‌ನವರು ಮೈದಾ ಕೊಟ್ಟಿದ್ದು ಸರಿಯಾದದ್ದು ಅಲ್ಲ, ನಮ್ಮನ್ನು ಕೇಳದೆ ಹೇಗೆ ಮೈದಾವನ್ನು ಕೊಟ್ಟಿರಿ ಎಂದು ಕೇಳಿದರು. ಅಂತೂ ಮೈದಾ ಸಿಕ್ಕಿದ್ದರಿಂದ ಕಾರ್ಖಾನೆಯನ್ನು ಚಾಲು ಮಾಡಿಕೊಂಡು, ನಡೆಸಿಕೊಂಡು ಹೋಗುತ್ತಿದ್ದಾರೆ. ಕೆಲಸದಿಂದ ತೆಗೆದು ಹಾಕಿದವರನ್ನು ಬಿಟ್ಟು ಬೇರೆ ಯಾರ ಯಾರನ್ನೋ ಕೆಲಸಕ್ಕೆ ತೆಗೆದುಕೊಂಡರು, ಸರ್ಕಾರದವರನ್ನು ಒಂದು ಮಾತೂ ಕೇಳಲಿಲ್ಲ. ಸರ್ಕಾರದವರು ಕೇಸನ್ನು ಹಾಕುವುದಕ್ಕೆ ಪ್ರಯತ್ನಪಟ್ಟರು ಎಂದು ಕಾಣುತ್ತದೆ. ಕೇಸನ್ನು ಹಾಕಿದರೂ ಕೂಡ ಮಾಲೀಕ ತನ್ನ ಉದ್ಧಟತನವನ್ನು ಬಿಡಲಿಲ್ಲ. ಕಾರ್ಮಿಕ ವಿರೋಧಿನೀತಿಯನ್ನು ಬಿಡಲಿಲ್ಲ ಆ ಕಾರ್ಖಾನೆಯ ಹೊರಗಡೆ ಹೆಣ್ಣುಮಕ್ಕಳ ಸಂಘ ಒಂದು ತಯಾರು ಆಗಿದೆ. ಇದು ಒಂದು ನಿದರ್ಶನ. ಇವತ್ತಿನ ದಿವಸ ಸರ್ಕಾರದವರು ಹೇಳತಕ್ಕಂಥ ಮಾತನ್ನು ಕೇಳುವುದಕ್ಕೆ ಮಾಲೀಕರು ತಯಾರು ಆಗಿಲ್ಲ, ಇಂಥಪರಿಸ್ಥಿತಿ ಬಂದಿದೆ.

ಇನ್ನು ಆಂಧ್ರ ಸ್ಟೀಲ್ ಕಂಪನಿ ಇಲ್ಲೇ ಪಕ್ಕದಲ್ಲಿರುವ ವೈಟ್ ಫೀಲ್ಡ್‌ನಲ್ಲಿ ಇದೆ. ಯೂನಿಯನ್ ಮಾಡಬೇಕೆಂದು ಅಲ್ಲಿರುವ 400 ಜನ ಕಾರ್ಮಿಕರು ಸಂಘ ಮಾಡುವುದಕ್ಕೆ ಶುರು ಮಾಡಿದಾಗ ಅವರನ್ನು ಟರ್ಮಿನೇಟ್ ಮಾಡಿ ಡಿಸ್‌ಮಿಸ್ ಮಾಡಿದರು. ಅವರನ್ನು ಡಿಸ್‌ಮಿಸ್ ಮಾಡಿದ್ದು ಸರಿಯಲ್ಲವೆಂದು ಪ್ರತಿಭಟನೆ ಮಾಡುವುದಕ್ಕೆ ಹೋದವರೆಲ್ಲರನ್ನೂ ಡಿಸ್‌ಮಿಸ್ ಮಾಡಿದ್ದಾರೆ. ಸರ್ಕಾರದವರನ್ನು ಮಧ್ಯೆ ಪ್ರವೇಶ ಮಾಡಿ ಎಂದು ಕೇಳಿಕೊಂಡೆವು. ಇಂಥವರ ಬಗ್ಗೆ ಸರ್ಕಾರದವರು ಏನು ಕಾರ್ಯಕ್ರಮವನ್ನು ತೆಗೆದುಕೊಂಡಿದ್ದಾರೆ ? ಟ್ರೇಡ್ ಯೂನಿಯನ್ ಆಕ್ಟ್ ಪ್ರಕಾರ ಯೂನಿಯನ್ ಮಾಡುವುದಕ್ಕೆ ಹಕ್ಕು ಇದೆ. ಆ ರೀತಿ ಮಾಡದೇ ಹೋದರೆ ಕಾರ್ಮಿಕರಿಗೆ ಪ್ರಜಾಪ್ರಭುತ್ವದಲ್ಲಿ ಯಾವ ರೀತಿ ರಕ್ಷಣೆ ದೊರೆಯುತ್ತದೆ ? ಇದು ಸರಿಯಾದದ್ದು ಅಲ್ಲ. ಸರ್ಕಾರದವರು ಆಗಲೀ ನೋಡೋಣ, ಮಾಡೋಣ ಎನ್ನುವ ರೀತಿಯಲ್ಲಿ ಹೋಗಿದೆ. ಆಂಧ್ರ ಸ್ಟೀಲ್ ಕಾರ್ಪೊರೇಷನ್ನಿನ ಮಾಲೀಕ ಪೋಲೀಸರ ಕುಮ್ಮಕ್ಕು ಪಡೆದು ನೆರೆಯಲ್ಲಿರುವವರನ್ನು, ಬೇರೆ ಊರಿನಲ್ಲಿರುವ ಉದ್ಯೋಗಿಗಳನ್ನು ಕರೆದುಕೊಂಡು, ಪೋಲೀಸರ ರಕ್ಷಣೆಯಲ್ಲಿ ಕಾರ್ಖಾನೆಯೊಳಗೆ ಕರೆದುಕೊಂಡು ಹೋಗುತ್ತಾ ಇದ್ದಾರೆ. ಅಸಿಸ್ಟೆಂಟ್ ಕಮೀಷನರ್ ಆಫ್ ಪೋಲೀಸ್, ಮಲ್ಲಣ್ಣ ಗೌಡರು ಎನ್ನತಕ್ಕಂಥವರು ಮಾಲೀಕರ ಕಾರಿನಲ್ಲಿ ಕೂತು ಬೇರೆ ಕೆಲಸಗಾರರನ್ನು ಕರೆದುಕೊಂಡು ಹೋಗಿ ಒಳಗಡೆ ಬಿಡುತ್ತಿದ್ದಾರೆ. ನಾನು ಇವತ್ತು ಕೇಳುತ್ತೇನೆ, ಸರ್ಕಾರ ಇದೆಯೋ ಎಂದು ? ಅವರಿಗೆ ಕಾನೂನು ಪ್ರಕಾರ ಬಿಟ್ಟುಕೊಟ್ಟಹಾಗೆ ಆಗುವುದಿಲ್ಲವೇ ? ಯಾರು ನಿಮ್ಮ ಮಾತನ್ನು ಕೇಳುವುದಿಲ್ಲವೋ ಅಂಥವರ ಮೇಲೆ ಏತಕ್ಕೆ ಕಾರ್ಯಕ್ರಮವನ್ನು ತೆಗೆದುಕೊಳ್ಳುವುದಿಲ್ಲ ? ನನಗೆ ತಿಳಿದು ಬಂದಂಥ ವಿಷಯವನ್ನು ಇಲ್ಲಿ ಮಾತನಾಡುವಾಗ ದೊಡ್ಡ ದೊಡ್ಡವರ ವಿಷಯ, ಗೌವರ್ನರ್‌ರವರ ವಿಷಯಗಳ ಬಗ್ಗೆ ಮಾತನಾಡಬಾರದು ಎಂದು ಹೇಳುತ್ತಾರೆ. ಆದರೆ ಗೌವರ್ನರ್‌ರವರೇ, ರಾಜ್ಯಪಾಲರವರೇ ಇದರಲ್ಲಿ ಮಧ್ಯೆ ಪ್ರವೇಶಿಸಿ ಏನು ಬೇಕಾದರೂ ಮಾಡಿ ಅಂಥ ಪೋಲೀಸರಿಗೆ ಪರವಾನೆಯನ್ನು ಕೊಟ್ಟರು ಎಂದು ತಿಳಿದು ಬಂದಿದೆ. ಬೆಂಗಳೂರು ನಗರದ ಪಕ್ಕದಲ್ಲಿ, ಕೇವಲ 10 ಮೈಲಿಯೊಳಗೆ ಇರುವ ಒಂದು ಫ್ಯಾಕ್ಟರಿಯ ಮಾಲೀಕ ಆ ರೀತಿ ನಡೆದುಕೊಂಡರೆ ಪೋಲೀಸರು ಏನು ಬೇಕಾದರೂ ಮಾಡಬಹುದೆಂದು ಪರವಾನೆ ಕೊಟ್ಟರೆ, ಮಾಲೀಕ ಕೊಡುವ ಚಹಾ ಕುಡಿಯುಬಹುದು, ಬಿರಿಯಾನಿ ತಿನ್ನಬಹುದೆಂದು ಪರವಾನೆಯನ್ನು ಕೊಟ್ಟರೆ ಸರ್ಕಾರ ಏನೂ ಮಾಡುವುದಕ್ಕೆ ಆಗುವುದಿಲ್ಲ. ಡಿಪಾರ್ಟ್‌ಮೆಂಟ್ ಇದ್ದೂ ಏನು ಪ್ರಯೋಜನ ? ಆ ರೀತಿ ಒಬ್ಬ ಮಾಲೀಕ ನಡೆದುಕೊಂಡರೆ ಆತನನ್ನು ಹದ್ದುಬಸ್ತಿನಲ್ಲಿ ತರದೇ ಇದ್ದರೆ ಏನು ಪ್ರಯೋಜನ ? ಅಲ್ಲಿ ಇವತ್ತಿನ ದಿವಸ 400 ಜನ ಕಾರ್ಮಿಕರು ಹೊರಗಡೆ ಇದ್ದಾರೆ ಅಲ್ಲಿ ಇವತ್ತು ಆ ಒಂದು ಪರಿಸ್ಥಿತಿ ಇದೆ. ಆ ಪ್ರಶ್ನೆ ಇನ್ನೂ ಇತ್ಯರ್ಥವಾಗಿಲ್ಲ.

ಇನ್ನು ಮದನ್‌ಲಾಲ್ ಫ್ಯಾಕ್ಟರಿ ಇದೆ. ಇದಕ್ಕೆ ಕಾನೂನಿಲ್ಲ, ಫ್ಯಾಕ್ಟರಿ ಆಕ್ಟಿಲ್ಲ ಪೇಮೆಂಟ್ ಆಫ್ ವೇಜಸ್ ಇಲ್ಲವೆಂದು ಸರ್ಕಾರದವರ ಗಮನಕ್ಕೆ ತಂದಿದ್ದು ಆಯಿತು. ಡಿಪಾರ್ಟ್‌ಮೆಂಟಿನ ಅಧಿಕಾರಿ ಒಂದು ಸಾರಿ ಬಂದರು, ಅಲ್ಲಿಗೆ ಇನ್‌ಸ್ಪೆಕ್ಟರ್‌ರವರು ಹೋದಾಗ ಹೆಣ್ಣು ಮಕ್ಕಳನ್ನು

ಒಂದು ರೂಮಿನಲ್ಲಿ ಕೂಡಿ ಹಾಕಿ, ಇಲ್ಲಿ ಹೆಣ್ಣು ಮಕ್ಕಳು ಕೆಲಸ ಮಾಡುತ್ತಿಲ್ಲವೆಂದು ಹೇಳಿಬಿಟ್ಟರು. ಆ ಹೆಣ್ಣು ಮಕ್ಕಳಿಗೆ 20-25 ರೂಪಾಯಿ ಮಾತ್ರ ಕೊಡುತ್ತಿದ್ದಾರೆ. ಅವರು ಯಾವ ಕಾನೂನನ್ನು ಅನ್ವಯಿಸುವುದಿಲ್ಲ, ಇದು ನಮ್ಮ ಕಣ್ಣು ಮುಂದೆ ನಡೆಯಿತು. ಇವತ್ತಿನ ದಿವಸ ಅಲ್ಲೂ ನ್ಯಾಯ ದೊರಕಲಿಲ್ಲ, ಅದೇ ರೀತಿ ಷಹಬಾದ್ ಇಂಜಿನಿಯರಿಂಗ್, ಎ.ಸಿ.ಸಿ. ಇಂಜಿನಿಯರಿಂಗ್ ವರ್ಕ್ಸ್‌ನಲ್ಲೂ ಸಹ 58-59 ದಿನಗಳು ಆಯಿತೆಂದು ಕಾಣುತ್ತದೆ, ಅಲ್ಲೂ ಸಹ ಸ್ಟ್ರೈಕ್ ಷುರು ಮಾಡಿದ್ದಾರೆ. ಅಲ್ಲೂ ಸಹ ಕಾರ್ಮಿಕರಿಗೆ ನ್ಯಾಯವನ್ನು ದೊರಕಿಸಿಕೊಡಬೇಕಾಗಿದೆ. ಏತಕ್ಕೆ ಎಂದರೆ ಸಿಮೆಂಟ್ ಕಂಪನಿ ಕೆಲಸಗಾರರ ಉತ್ತಮ ಮಟ್ಟದ ಕೇಳಿಕೆಗಳನ್ನೂ, ನ್ಯಾಯಬದ್ಧವಾದ ಕೇಳಿಕೆಗಳನ್ನೂ ಪೂರೈಸುವುದಕ್ಕೆ ಆಗುವುದಿಲ್ಲವೆಂದು ಅಲ್ಲಿಯ ಮಾಲೀಕ ಹೇಳುತ್ತಿದ್ದಾರೆ. ಮಾನ್ಯ ಎಸ್. ಎಂ. ಯಾಹ್ಯಾರವರ ಕೂಡಿಯಲ್ಲ ಮಾತನಾಡುವಾಗ ಆ ಕಂಪನಿಯ ಮಾಲೀಕರು ಗುಲ್ಬರ್ಗಾ ಚುನಾವಣೆ ಆಗುವ ತನಕ ಮಾತನಾಡುವುದಿಲ್ಲ ಎಂದು ಧೈರ್ಯವಾಗಿ ಹೇಳಿದರು. ಈ ಕಂಪನಿಯೂ ಟಾಟಾ, ಬಿರ್ಲಾರವರ ಕಂಪನಿಗೆ ಸೇರಿದ್ದು. ಇವರಿಗೆ ಯಾರ ಮೇಲೆ ಪ್ರೀತಿ ಇದೆಯೋ ಅವರು ಗೆಲ್ಲಬೇಕು. ಕೆಲಸಗಾರರು ಸತ್ತರೂ ಚಿಂತೆಯಿಲ್ಲ ಅವರಿಗೆ ಚುನಾವಣೆ ಮುಖ್ಯ. ನೀವು ಇವತ್ತಿನ ದಿವಸ ಏತಕ್ಕೋಸ್ಕರವಾಗಿ ಕಾರ್ಮಿಕರ ಮೇಲೆ ಗೂಬೆಯನ್ನು ಕೂರಿಸುತ್ತಿದ್ದೀರಿ. ಒಬ್ಬ ಮಾಲೀಕರು ನಮ್ಮ ದೇಶದಲ್ಲಿ, ನಮ್ಮ ರಾಜ್ಯದಲ್ಲಿ ಉತ್ಪಾದನೆಗೆ ಧಕ್ಕೆ ತರುವ ರೀತಿಯಲ್ಲಿ ವರ್ತಿಸುತ್ತಿದ್ದಾರೆ ಅವರ ಮೇಲೆ ಏನು ಕಾರ್ಯಕ್ರಮವನ್ನು ತೆಗೆದುಕೊಂಡಿದ್ದೀರಿ ? ಆ ಪ್ರಶ್ನೆಯನು ಇತ್ಯರ್ಥ ಮಾಡುವುದಕ್ಕಾಗಿ ಸ್ಪೆಷಲ್ ಟ್ರಿಬ್ಯೂನಲ್ ಮಾಡುತ್ತೇವೆಂದು ಹೇಳಿದರು ಬಹಳ ಸಂತೋಷ. ಆದರೆ ಇನ್ನೂ ರಚನೆ ಆಗಲಿಲ್ಲ. ನನ್ನ ಅಭಿಪ್ರಾಯದಲ್ಲಿ, ಸರ್ಕಾರದ ಮಾತಿನ ವಿರುದ್ಧ ನಡೆಯುವಂಥವರನ್ನು ಸದೆಬಡೆಯುವಂತೆ ಸರ್ಕಾರದವರು ವರ್ತಿಸಬೇಕು. ಆದರೆ ಆ ದಿಟ್ಟತನವನ್ನು ದುರಾದೃಷ್ಟವಶಾತ್ ಇವತ್ತು ಸರ್ಕಾರದವರು ತೋರಿಸುತ್ತಾ ಇಲ್ಲ. ಈ ತರಹದ ನಿದರ್ಶನಗಳನ್ನು ಬೇಕಾದಷ್ಟು ಕೊಡಬಹುದು. ಕಾರ್ಮಿಕರು ಮುಷ್ಕರವನ್ನು ಮಾಡಬೇಕೇ, ಹೋರಾಟವನ್ನು ನಡೆಸಬೇಕೇ, ಅಜಿಟೇಷನ್ ಮಾಡಬೇಕೇ ಎಂದು ಹೇಳುವುದಕ್ಕೆ ಮುಂಚೆ, ಯಾರು ಯಾರು ನಮ್ಮ ರಾಜ್ಯದಲ್ಲಿ ಬಂಡವಾಳಗಾರರು ಇದ್ದಾರೆ, ಮಾಲೀಕರು ಇದ್ದಾರೆ, ತಾವು ಹೇಳುವ ಮಾತನ್ನು ಕೇಳದೇ ಇರತಕ್ಕಂಥವರಿಗೆ ಸರಿಯಾದ ಪಾಠವನ್ನು ಕಲಿಸಲು ದಿಟ್ಟತನದಿಂದ ವರ್ತಿಸಬೇಕು. ಆಗ ಕೈಗಾರಿಕೆ ಮುಂದುವರಿಯಲು ಸಾಧ್ಯವಾಗುತ್ತದೆ. ಕೆಲವು ಬಂಡವಾಳಗಾರರು, ಶ್ರೀಮಂತರು, ಮಾಲೀಕರು ಕಾನೂನುಗಳಿಗೆ ಮಾನ್ಯತೆ ಕೊಡದೇ ತಮ್ಮ ಇಷ್ಟಬಂದರೀತಿಯಲ್ಲಿ ವರ್ತಿಸುವಂಥ ಪ್ರವೃತ್ತಿ ಕಂಡುಬರುತ್ತಿದೆ. ದಿಟ್ಟತನದ ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ.

3-00 P.M.

ಈ ದಿಟ್ಟತನದ ಕಾರ್ಯಕ್ರಮ ಏನು ಎಂದು ಅವರನ್ನು ಕೇಳಿದಾಗ ನಾವು ಕೋರ್ಟಿಗೆ ಹೋಗುತ್ತೇವೆ ಎಂದು ಹೇಳುತ್ತಾರೆ ಕೋರ್ಟಿಗೆ ಹೋದರೆ ಅದು ಹೇಗೆ ನಡೆಯುತ್ತದೆ, ಯಾವ ರೀತಿ ನಡೆಯುತ್ತದೆ, ಅದು ಎಷ್ಟು ದಿವಸ ನಡೆಯುತ್ತದೆ ಎನ್ನುವುದು ನನಗೆ ಗೊತ್ತು. ಕೋರ್ಟಿನ ಬಗ್ಗೆ ಆಮೇಲೆ ಮಾತನಾಡೋಣ. ಕೋರ್ಟಿಗೆ ಹೋದರೆ ಈ ಪ್ರಶ್ನೆ ಬಗೆ ಹರಿಯುವುದಿಲ್ಲ. ಈವೊತ್ತಿನ ದಿವಸ ಮುಖ್ಯವಾಗಿ ಬೇಕಾಗಿರತಕ್ಕಂಥಾದ್ದು ನ್ಯಾಯ. ಆ ನ್ಯಾಯಕ್ಕೆ ಕಾರ್ಮಿಕರು ಒಪ್ಪಿಕೊಂಡರೂ ಕೂಡ ಮಾಲೀಕರು ಒಪ್ಪಿಕೊಳ್ಳುವುದಿಲ್ಲ. ಈ ಬಗ್ಗೆ ಕೆಲವು ನಿದರ್ಶನಗಳನ್ನು ನಾನು ವಿಮರ್ಶೆ ಮಾಡುವುದಾದರೆ ಅದರ ವಿಷಯ ಸರ್ಕಾರಕ್ಕೂ ಗೊತ್ತಿದೆ ಎಂದು ನಾನು ತಿಳಿದಿದ್ದೇನೆ. ಯಾವ ಸೂಚನೆಯನ್ನು ಅವರು ಕಾರ್ಮಿಕರಿಗೆ ಕೊಟ್ಟಿದ್ದರೋ ಆ ಸೂಚನೆಯನ್ನು ಕಾರ್ಮಿಕರು ಪೂರ್ತಿಯಾಗಿ ಒಪ್ಪಿಕೊಂಡಿದ್ದರೂ ಕೂಡ ಮಾಲೀಕರು ಒಪ್ಪಿಕೊಳ್ಳುವುದಿಲ್ಲ. ಆದುದರಿಂದ ಇಂಥಾದ್ದನ್ನು ಕೋರ್ಟಿಗೆ ಹಾಕದೆ ಬೇರೆ ರೀತಿಯಾಗಿ ಕಾರ್ಯಕ್ರಮ ತೆಗೆದುಕೊಳ್ಳಬೇಕು. ಅದು ಯಾವುದೆಂದರೆ ಅವರಿಗೆ ಎಲೆಕ್ಟ್ರಿಸಿಟಿ ನಿಲ್ಲಿಸಬೇಕು, ರಾಮೆಟೀರಿಯಲ್ಸ್ ಕೊಡುವುದನ್ನು ನಿಲ್ಲಿಸಬೇಕು ಮತ್ತು ಪೋಲೀಸರನ್ನು ಆ ಜಾಗದಲ್ಲಿ ಇಲ್ಲದೇ ಇರುವ ಹಾಗೆ ಹೊರಗೆ ಕಳುಹಿಸಬೇಕು. ಹಾಗಾದರೆ ಆ ಮಾಲೀಕ ತನ್ನಷ್ಟಕ್ಕೆ ತಾನೇ ಒಂದು ನ್ಯಾಯಕ್ಕೆ ಒಂದು ಸರ್ಕಾರ ಹೇಳಿದ ಹಾಗೆ ಕೇಳುತ್ತಾನೆ. ಆದರೆ ಒಂದು ಫ್ಯಾಕ್ಟರಿಯಲ್ಲಿ ಒಳ್ಳೆಯ ಕೆಲಸ ಮಾಡಿದ್ದಾರೆ. ಆ ಒಂದು ಉದಾಹರಣೆ ಹೇಳುವುದಾದರೆ ಅಲಂಬಿಕ್ ಗ್ಲಾಸ್ ಫ್ಯಾಕ್ಟರಿ 48 ದಿವಸದಿಂದ ಲಾಕ್‌ಔಟ್ ಆಗಿತ್ತು. ಆ ಮಾಲೀಕ ಸರ್ಕಾರ ಹೇಳಿದ ಮಾತನ್ನೂ ಕೇಳುತ್ತಿರಲಿಲ್ಲ, ಮತ್ತೆ ಯಾರು ಹೇಳಿದರೂ ಕೇಳುತ್ತಿರಲಿಲ್ಲ. ಆಗ ಅಲ್ಲಿ ಒಂದು ಕೆಲಸ ಮಾಡಿದರು. ನಿನ್ನೆ ದಿವಸ ಅಲ್ಲಿಗೆ ಇಟ್ಟಿದ್ದ ಪೋಲೀಸರನ್ನು ವಾಪಸ್ಸು ತೆಗೆದುಕೊಂಡರು. ನಂತರ ಅವನು

(ಶ್ರೀ ಎಂ. ಎಸ್. ಕೃಷ್ಣನ್)

ಬಂದು ಪೋಲೀಸರನ್ನು ಸಹಾಯ ಮಾಡಿ ಎಂದು ಕೇಳಿದ. ಇದು ಹೇಗೆ ಆಯಿತೋ ಗೊತ್ತಿಲ್ಲ. ಒಟ್ಟಿನಲ್ಲಿ ಈ ಮಾತನ್ನು ಕೇಳಿ ಬಹಳ ಸಂತೋಷವಾಯಿತು. ಕೆಲವು ಸಂದರ್ಭಗಳಲ್ಲಿ ಮಾಲೀಕರು ಏನು ಮಾಡುತ್ತಾರೆ ಎಂದರೆ ಪೋಲೀಸರಿಂದ ಸಹಾಯ ತೆಗೆದುಕೊಂಡು ಈ ಕಾರ್ಮಿಕರನ್ನು ನದೆಬಡಿಯುತ್ತಾರೆ. ಆ ರೀತಿ ಮಾಡಿ ಕೆಲವು ಸಂದರ್ಭಗಳಲ್ಲಿ ಗಲಭೆ ನಡೆಯುತ್ತದೆ. ಈ ಕಾರ್ಖಾನೆಯ ಮಾಲೀಕ ಮತ್ತೆ ಪೋಲೀಸ್ ಸ್ಟೇಷನ್‌ಗೆ ಹೋಗಿ ಗಲಭೆ ನಡೆಯುತ್ತದೆ ಬರಬೇಕು ಎಂದು ಕೇಳಿದಾಗ ಸುಮ್ಮಸುಮ್ಮನೆ ಬಾ ಎಂದರೆ ಬರುವುದಿಲ್ಲ ಎಂದು ಹೇಳಿದ್ದಕ್ಕೆ ಅವನು ವಾಪಸ್ಸು ಹೊರಟು ಹೋದ. ಹೀಗೆ ಆ ಮಾಲೀಕ ಯಾಹ್ಯಾರ ಮಾತನ್ನೂ ಕೇಳದೇ ಇರತಕ್ಕಥಾ ವನನ್ನು ಈ ಪೋಲೀಸ್ ಸಬ್‌ಇನ್‌ಸ್ಪೆಕ್ಟರ್ ಕೇಳಿದ. ಆದುದರಿಂದ ನಾನು ಹೇಳುವುದು ಇಂತಹ ಸಂದರ್ಭಗಳು ಬಂದಾಗ ಪೋಲೀಸರನ್ನು ವಾಪಸ್ಸು ತೆಗೆದುಕೊಂಡರೆ ಆ ಮಾಲೀಕರು ತಮ್ಮಿಷ್ಟಕ್ಕೆ ತಾವೇ ಬಂದು ನ್ಯಾಯವನ್ನು ಇತ್ಯರ್ಥ ಮಾಡುತ್ತಾರೆ. ಮತ್ತೆ ಆ ಮಾಲೀಕ ವಾಪಸ್ಸು ಪೋಲೀಸ್ ಸ್ಟೇಷನ್‌ಗೆ ಬಂದು ಹೇಗಾದರೂ ಮಾಡಿ ಇದನ್ನು ಇತ್ಯರ್ಥ ಮಾಡೋಣ, ಹೇಗಾದರೂ ಮಾಡಿ ರಾಜಿ ಮಾಡೋಣ, ಈ ಬಗ್ಗೆ ಕಾರ್ಮಿಕರ ನಾಯಕರನ್ನು ಕೇಳೋಣ ಎಂದು ಹೇಳಿದ. ನಿನ್ನೆ ದಿವಸ ಈ ಬಗ್ಗೆ ಎರಡು ಗಂಟೆ ಚರ್ಚೆ ಮಾಡಿದೆ. ನಾನು ಇದನ್ನು ಏತಕ್ಕೆ ಹೇಳುತ್ತೇನೆ ಎಂದರೆ ಇದರ ಬಗ್ಗೆ ನೀವು ಯಾವ ದಿಟ್ಟತನದ ಕಾರ್ಯಕ್ರಮ ತೆಗೆದುಕೊಂಡರೋ ಅದೇ ರೀತಿ ಬೇರೆದಕ್ಕೂ ತೆಗೆದುಕೊಂಡರೆ ಆವಾಗ ಅವರು ನಿಮಗೆ ಸರಿಯಾದ ಹತೋಟಿಗೆ ಬರುತ್ತಾರೆ. ಈ ಮಾತನ್ನು ನಾನು ಹೇಳುವುದು ಮುಷ್ಕರ ಕಾರ್ಮಿಕರು ನಡೆಸಬೇಕು ಎನ್ನುವ ದೃಷ್ಟಿಯಿಂದ ಹೇಳುತ್ತಾ ಇಲ್ಲ. ಯಾವ ಸಂದರ್ಭದಲ್ಲಾದರೂ ಮುಷ್ಕರವನ್ನು ಅನಿವಾರ್ಯವಾಗಿ ನಡೆಸಬೇಕಾಗುವ ಸಂದರ್ಭ ಬಂದರೆ ಅವರು ನಡೆಸೇ ನಡೆಸುತ್ತಾರೆ, ಯಾರ ಮಾತನ್ನೂ ಕೇಳುವುದಿಲ್ಲ, ಶ್ರೀಮತಿ ಇಂದಿರಾಗಾಂಧಿಯವರ ಮಾತನ್ನೂ ಕೇಳುವುದಿಲ್ಲ, ರಾಷ್ಟ್ರಾಧ್ಯಕ್ಷರು ಒಂದು ಕಾಲದಲ್ಲಿ ಲೇಬರ್ ಲೀಡರ್ ಆಗಿದ್ದರು, ಅವರ ಮಾತನ್ನೂ ಇಂದು ಕೇಳುವುದಿಲ್ಲ. ಈವಾಗ ಏನಾದರೂ ಅನ್ಯಾಯ ನಡೆದರೆ ಬಂಡವಾಳಶಾಹಿಗಾರರ ವಿರುದ್ಧ ಮುಷ್ಕರ ಮಾಡುವ ಹಕ್ಕು ಆ ಕಾರ್ಮಿಕರಿಗೆ ಇದ್ದೇ ಇದೆ. ಅದನ್ನು ಅವರು ಉಪಯೋಗಿಸುತ್ತಾರೆ, ಅವರು ಯಾರ ಮಾತನ್ನೂ ಕೇಳುವುದಿಲ್ಲ. ಆದುದರಿಂದ ನಾನು ಹೇಳುವುದು ನೀವು ಅಲಂಬಿಕ್ ಗ್ಲಾಸ್ ಫ್ಯಾಕ್ಟರಿ ಬಗ್ಗೆ ಯಾವ ಒಂದು ದಿಟ್ಟತನದ ಕಾರ್ಯಕ್ರಮ ತೆಗೆದುಕೊಂಡಿರೋ ಅದೇ ರೀತಿಯಲ್ಲಿ ಬೇರೆ ಎಲ್ಲಾದರೂ ನಡೆದರೂ ತೆಗೆದುಕೊಳ್ಳಬೇಕು ಎಂದು ಹೇಳುತ್ತೇನೆ.

ಇನ್ನು ಒಂದು ಉದಾಹರಣೆ ಹೇಳುತ್ತಿದ್ದೇನೆ. ಮಲ್ಲನಗೌಡ ಅಸಿಸ್ಟೆಂಟ್ ಕಮೀಷನರ್ ಆಫ್ ಪೋಲೀಸ್ ಅನ್ನುವವರು ಆಂಧ್ರ ಸ್ಟೀಲ್ ಫ್ಯಾಕ್ಟರಿ ಮಾಲೀಕರ ಜೊತೆಯಲ್ಲಿ ಬೇಕಾದಷ್ಟು ಸಲ ಓಡಾಡಿದ್ದಾರೆ, ಅವರ ಕಾರಿನಲ್ಲಿ ಎಷ್ಟೋ ಸಲ ಓಡಾಡಿದ್ದಾರೆ. ಅವರ ಮೇಲೆ ಆಕ್ಷನ್ ತೆಗೆದುಕೊಳ್ಳಬೇಕು. ಅವರು ಲೇಬರ್ ಲೀಡರ್ಸ್‌ನ್ನು ಕರೆದುಕೊಂಡು ಹೋಗಿ ಸಿಕ್ಕಾಪಟ್ಟೆ ಹೊಡೆದಿದ್ದಾರೆ. ಮೊನ್ನೆತಾನೆ ಶ್ರೀಮಾನ್ ಕಾಗೋಡು ತಿಮ್ಮಪ್ಪನವರು ಈ ಸಭೆಯಲ್ಲಿ ಒಂದು ವಿಷಯ ಪ್ರಸ್ತಾಪ ಮಾಡಿದರು, ಈ ರೀತಿ ಒಬ್ಬ ನಾಯಕನಿಗೆ ಚಿತ್ರಹಿಂಸೆ ಪೋಲೀಸರು ಕೊಟ್ಟಿದ್ದಾರೆ ಎಂದು. ಇಂಥಾ ಚಿತ್ರಹಿಂಸೆಗಳು ಕಾರ್ಮಿಕರ ನ್ಯಾಯದಲ್ಲಿ ಬೇಕಾದಷ್ಟು ಆಗಿವೆ. ಅವರನ್ನು ಚಿತ್ರಹಿಂಸೆ ಮಾಡುವುದು ಅದು ಪೋಲೀಸರ ಹಕ್ಕು ಎಂದು ವರ್ತಿಸಿದ್ದಾರೆ. ಕಾರ್ಮಿಕರ ವಿವಾದ ಬಂದಾಗಲೆಲ್ಲಾ ಇಂಥಾದ್ದು ಬೇಕಾದಷ್ಟು ಆಗುತ್ತದೆ. ಆಂಧ್ರ ಸ್ಟೀಲ್ ಫ್ಯಾಕ್ಟರಿಯ ಹತ್ತಿರ ಶ್ಯಾಮ ಸುಂದರ್ ಮತ್ತು ಗೋಪಿ ಇವರು ಹೋದಾಗ ಅವರನ್ನು ಹಿಡಿದುಕೊಂಡು ಹೊಡೆದಿದ್ದಾರೆ. ಈ ರೀತಿಯಾಗಿ ಒಂದು ಅಮಾನುಷ ಪ್ರವೃತ್ತಿಯಲ್ಲಿ ವರ್ತಿಸುವುದನ್ನು ನಿಲ್ಲಿಸಬೇಕು. ಈ ವಿಷಯ ಪೋಲೀಸರಿಗೆ ಸ್ಪಷ್ಟವಾಗಿ ಏನೂ ಹೇಳಬೇಕಾಗಿಲ್ಲ. ಅನೇಕ ಕಡೆಯಲ್ಲಿ ಪೋಲೀಸರ ಬೆಂಬಲದಿಂದ ಕಲ್ಲು ಹೊಡೆಸಿ ಪೋಲೀಸರಿಂದ ಟಿಯರ್ ಗ್ಯಾಸ್ ಉಪಯೋಗಿಸುವುದು, ಲಾಠಿ ಛಾರ್ಜು ಮಾಡಿಸುವುದು ಹೀಗೆಲ್ಲಾ ನಡೆಯುತ್ತದೆ. ಆದುದರಿಂದ ಮುಂದೆ ಈ ರೀತಿ ಆಗದೇ ಇರುವ ಹಾಗೆ ಮಾಡಬೇಕು ಎಂದು ನಾನು ಮನವಿ ಮಾಡಿಕೊಳ್ಳುತ್ತೇನೆ. ಇಷ್ಟೆಲ್ಲಾ ಹೇಳಿದ್ದು ಬರೀ ಖಾಸಗೀ ಮಾಲೀಕರಿಗೆ ಮಾತ್ರ ಸಂಬಂಧಪಟ್ಟದ್ದು ಎಂದು ತಿಳಿದುಕೊಳ್ಳಬೇಡಿ. ಸರ್ಕಾರೀ ಮಾಲೀಕತ್ವದಲ್ಲಿ ಇರತಕ್ಕಂಥ ಇಲಾಖೆಗಳಲ್ಲೂ ಕೂಡ ಕಾರ್ಮಿಕರಿಗೆ ಅನ್ಯಾಯವಾಗಿದೆ ಎನ್ನುವ ಮಾತನ್ನು ಬಹಳ ದುಃಖದಿಂದ ಹೇಳುತ್ತೇನೆ. ಅವರನ್ನೂ ಸಹ ಏತಕ್ಕೆ ಒಂದು ಹದ್ದುಬಸ್ತಿನಲ್ಲಿಡ ಬಾರದು ಎಂದು ಕೇಳುತ್ತೇನೆ. ಈ ಸಂದರ್ಭದಲ್ಲಿ ಮಾನ್ಯ ಚೆನ್ನಬಸಪ್ಪನವರು ಸಭೆಯಲ್ಲಿ ಇದ್ದಿದ್ದರೆ ಚೆನ್ನಾಗಿತ್ತು. ಆದರೂ ಕೂಡ ಅವರು ಇಲ್ಲದೇ ಇದ್ದರೂ ಸಹ ಅವರ ಇಲಾಖೆಗೆ ಸಂಬಂಧ

ಪಟ್ಟಂಥ ಪಿ. ಡಬ್ಲ್ಯು. ಡಿ. ಕೆಲಸಗಾರರಿಗೆ ಏನು ತೊಂದರೆ ಆಗಿದೆ ಎನ್ನುವುದನ್ನು ಸ್ವಲ್ಪಮಟ್ಟಿಗೆ ಹೇಳುತ್ತೇನೆ. ಬಾಕಿ ಕಾರ್ಮಿಕರ ಹಾಗೆ ಅವರಿಗೂ ಕೂಡ ಅವರ ಸಂಕಷ್ಟಗಳನ್ನು ಅರಿಕೆ ಮಾಡಿಕೊಳ್ಳುವುದಕ್ಕೆ ಹಕ್ಕು ಇದೆ. ಅದರಂತೆ ಅವರಿಗೂ ಇಂಡಿಯನ್ ಟ್ರೇಡ್ ಯೂನಿಯನ್ ಆಕ್ಟ್ ಪ್ರಕಾರ ಅವರ ಸಂಘವನ್ನು ರಿಜಿಸ್ಟ್ರೇಷನ್ ಮಾಡಿಸಿಕೊಳ್ಳುವುದಕ್ಕೆ ಹಕ್ಕು ಇದೆ. ಈ ಬಗ್ಗೆ ಸುಪ್ರೀಂ ಕೋರ್ಟಿನ ಡಿಸಿಷನ್ ಇದೆ. ಕೆಲವು ಕಡೆ ಆ ಪ್ರಕಾರ ರಿಜಿಸ್ಟ್ರೇಷನ್ ಮಾಡಿಕೊಂಡಿದ್ದಾರೆ. ಆದರೆ ಕರ್ನಾಟಕ ರಾಜ್ಯದಲ್ಲಿ ಶ್ರೀಮಾನ್ ಹೆಚ್. ಎಂ. ಚನ್ನಬಸಪ್ಪನವರ ಆಡಳಿತದಲ್ಲಿ ಅವರಿಗೆ ಯಾವ ಹಕ್ಕೂ ಇರುವ ಹಾಗಿಲ್ಲ. ಅವರ ಇಲಾಖೆಗೇ ಸೇರಿದ ವರ್ಕ್ ಛಾರ್ಜ್ಡ್ ಎಸ್ಟಾಬ್ಲಿಷ್‌ಮೆಂಟ್‌ನಲ್ಲಿ ಏನಾಗಿದೆ ಎಂದರೆ ಅಲ್ಲಿಯ ನೌಕರರು ೧೦–೧೨ ವರ್ಷ ಸರ್ವೀಸ್ ಮಾಡಿದ್ದರೂ ಕೂಡ ಅವರಿಗೆ ಒಂದು ಪರಮನೆನ್ಸಿ ಇಲ್ಲ. ಈ ಬಗ್ಗೆ ಒಂದು ಪ್ರಶ್ನೆಯನ್ನು ಹಾಕಿದ್ದೆ. ಅದಕ್ಕೆ ಸರಿಯಾದ ಉತ್ತರವನ್ನೂ ಹೇಳುವುದಕ್ಕಾಗಲಿಲ್ಲ. ಈ ವರ್ಕ್ ಛಾರ್ಜ್ ಎಸ್ಟಾಬ್ಲಿಷ್‌ಮೆಂಟಿನಲ್ಲಿ ಏನು ಪರಿಸ್ಥಿತಿ ಆಗಿದೆ ಎಂದರೆ ಆ ನೌಕರರ ಶೋಷಣೆ ಇನ್ನೂ ನಡೆಯುತ್ತಾ ಇದೆ. ಅವರಿಗೆ ಸರಿಯಾದ ಸಂಬಳ ಇಲ್ಲ, ಪೇ ಕಮಿಷನ್ ಪ್ರಕಾರ ಅವರಿಗೆ ಏನು ಬರಬೇಕೋ ಅದು ಸಿಗುತ್ತಾ ಇಲ್ಲ, ಅವರನ್ನು ಇಷ್ಟು ದಿವಸವಾದರೂ ಒಂದು ಪರ್ಮನೆನ್ಸಿ ಮಾಡಿಲ್ಲ, ಅದನ್ನಾದರೂ ಮಾಡಿಕೊಡಿ. ಅವರು ಒಂದು ಸಂಘಟನೆಯನ್ನು ಮಾಡಿಕೊಂಡರೆ ಅವರನ್ನು ಕೆಲಸದಿಂದ ಕಿತ್ತು ಹಾಕುತ್ತೀರಿ. ಇದು ನ್ಯಾಯವಾದ ಪ್ರಶ್ನೆ ಅಲ್ಲ. ಮಂತ್ರಿಗಳು ಸರಿಯಾಗಿ ಕಾನೂನು ತಿಳಿದುಕೊಂಡಿಲ್ಲ. ಈವೊತ್ತು ಕಾಳೀನದಿ ಪ್ರಾಜೆಕ್ಟ್‌ನಲ್ಲಿ ಏನು ಮಾಡಿದ್ದೀರಿ ನೋಡಿ. ಅವರು ಒಂದು ಸಂಘಟನೆ ಮಾಡಿಕೊಳ್ಳುವುದಕ್ಕೆ ಯಾವ ರೀತಿಯಲ್ಲೂ ಅವಕಾಶ ಇಲ್ಲದಂತೆ ಮಾಡಿದ್ದೀರಿ. ಆವೊತ್ತು ನನಗೂ ಮತ್ತು ಶ್ರೀಮಾನ್ ಚೆನ್ನಬಸಪ್ಪನವರಿಗೂ ಚರ್ಚೆ ನಡೆಯಿತು. ಆವೇಳೆ ನಾನು ಯೋಚನೆ ಮಾಡಿದೆ. ಇದರ ನಿಜಾಂಶ ಏನು ಎಂದು ಮಂತ್ರಿಗಳಿಗೂ ಗೊತ್ತಾಗಿಲ್ಲ ಎಂದು ಅವರು ತಮ್ಮ ಮನೋಭಾವವನ್ನು ಬದಲಾವಣೆ ಮಾಡಿಕೊಳ್ಳಬೇಕು ಎಂದು ಹೇಳುತ್ತೇನೆ. ಅಲ್ಲಿಯ ಅಧಿಕಾರಿಗಳು ಈ ಬಗ್ಗೆ ಪತ್ರ ಬರೆದಿದ್ದರೂ ಕೂಡ ಅವರನ್ನು ನಾನು ಹೇಳಿದ ಹಾಗೆ ಕೇಳಿರಿ ಎಂದು ಅಲ್ಲಿರುವ ಸೂಪರಿಂಟೆಂಡೆಂಟ್ ಇಂಜನಿಯರನ್ನು ಮತ್ತು ಚೀಫ್ ಇಂಜನಿಯರನ್ನೂ ಹೆದರಿಸಿ ಬೆದರಿಸಿ ಕೂರಿಸಿದ್ದಾರೆ. ಈವೊತ್ತು ನಾವು ಯಾವ ಯುಗದಲ್ಲಿದ್ದೇವೆ ಎನ್ನುವುದನ್ನು ಅವರು ಅರ್ಥ ಮಾಡಿಕೊಳ್ಳಬೇಕು. ಈ ವರ್ತನೆ ಸರಿಯೇ? ಅದರಲ್ಲೂ ಸರ್ಕಾರದ ಇಲಾಖೆಯಲ್ಲಿ ಈ ರೀತಿ ವರ್ತನೆ ಮಾಡುವುದು ಸರಿಯೇ. ಅವರು ಏತಕ್ಕೋಸ್ಕರ ಈ ಇಲಾಖೆಯಲ್ಲಿ ಹೀಗಾಗುವುದನ್ನು ಸರಿಮಾಡಲಿಲ್ಲ ಎನ್ನುವುದು ನನಗೆ ಅರ್ಥವಾಗಲಿಲ್ಲ.

ಇನ್ನೊಂದು ವಿಷಯ. ಇದು ಮಾನ್ಯ ಕೆ. ಹೆಚ್. ರಂಗನಾಥರವರಿಗೆ ಸಂಬಂಧಪಟ್ಟದ್ದು. ಇದು ವಾಟರ್‌ಸಪ್ಲೈ ಬೋರ್ಡಿನ ವಿಷಯ. ವಾಟರ್ ಸಪ್ಲೈ ಬೋರ್ಡಿನ ಛೇರ್ಮನ್ ಆಗಿರುವ ಶ್ರೀ ಮುಗ್ಧಂ ಅವರು ಸೂಪರ್ ಇಂಜನೀಯರ್ ಅನ್ನುವುದನ್ನು ನಾನು ಟೀಕೆ ಮಾಡುವುದಿಲ್ಲ. ಅವರು ಬೆಂಗಳೂರು ನಗರಕ್ಕೆ ಕಾವೇರಿ ನೀರನ್ನು ತರಿಸಿಕೊಟ್ಟಿದ್ದಾರೆ, ಕೆಲವು ಕಡೆ ಸೋರತ್ತಾ ಇದೆ. ಅಲ್ಲಿ ಇರತಕ್ಕಂಥ ನೌಕರರು ಒಂದು ಯೂನಿಯನ್ ಮಾಡಿಕೊಂಡರು. ಆಮೇಲೆ ಅವರನ್ನು ಏನು ಮಾಡಿದ್ದಾರೆ ಎಂದರೆ ಅಲ್ಲಿ ಕೆಲವರನ್ನು ಟ್ರಾನ್ಸ್‌ಫರ್ ಮಾಡಿದ್ದಾರೆ, ಅಲ್ಲಿ ಸೆಕ್ರಟರಿಯವರನ್ನು ಟರ್ಮಿನೇಟ್ ಮಾಡಿದ್ದಾರೆ. ಒಬ್ಬ ಡ್ರೈವರ್‌ಗೆ ಫೈನ್ ಹಾಕಿದ್ದಾರೆ. ಆ ಡ್ರೈವರ್‌ಗೆ ಏತಕ್ಕೆ ಫೈನ್ ಹಾಕಿದರು ಎಂದರೆ ಆ ಬಗ್ಗೆ ಹೇಳುತ್ತೇನೆ ಕೇಳಿ. ಯಾವಾಗಲೂ ಶ್ರೀಮಾನ್ ಮುಗ್ಧಂ ಅವರು ಕಾರು ವಾಟರ್ ಸಪ್ಲೈ ಬೋರ್ಡಿನ ಮುಂದೆ ಬಂದು ನಿಲ್ಲುತ್ತದೆ. ಬಂದ ತಕ್ಷಣ ಆ ಡ್ರೈವರ್ ಈಚೆಗೆ ಇಳಿದು ಬಾಗಿಲು ತೆಗೆಯಬೇಕು. ಆವಾಗ ಸಾಹೇಬರು ಕೆಳಗೆ ಇಳಿದು ಆಫೀಸಿನ ಒಳಗೆ ಹೋಗುತ್ತಾರೆ. ಒಂದು ದಿವಸ ಏನಾಯಿತು ಎಂದರೆ ಡ್ರೈವರ್ ಇಳಿಯುವುದಕ್ಕೆ ಮುಂಚೆ ಮೇಲುಗಡೆಯಿಂದ ಆಫೀಸಿನ ಜವಾನ ಬಂದು ಬಾಗಿಲು ತೆಗೆದ. ಅವನು ಬಂದು ಬಾಗಿಲು ತೆಗೆದಿದ್ದಾನೆ ನೀನು ಏತಕ್ಕೆ ತೆಗೆಯಲಿಲ್ಲ ಎಂದು ಆ ಡ್ರೈವರ್‌ಗೆ 25 ರೂಪಾಯಿ ಫೈನ್ ಹಾಕಿದ್ದಾರೆ. ಅವರು ಈವೊತ್ತಿನ ದಿವಸ ಹಿಟ್ಲರಿನ ರಾಜ್ಯದಲ್ಲಿದ್ದಾರೋ ಏನೋ ಗೊತ್ತಿಲ್ಲ ಆ ನೌಕರರು ಒಂದು ಯೂನಿಯನ್ ಮಾಡಿಕೊಂಡಿದ್ದಕ್ಕೆ ಆ ಸೆಕ್ರೆಟರಿಯವರನ್ನು ಕಿತ್ತುಹಾಕಿದರು. ಏತಕ್ಕೆಂದರೆ ಯೂನಿಯನ್‌ಗೆ ಮಾನ್ಯತೆ ಕೊಡುವುದಕ್ಕೆ ನಾನು ತಯಾರಾಗಿಲ್ಲ ಎಂದು. ಹಿಂದೆ ಶ್ರೀಮಾನ್ ಬಸವಲಿಂಗಪ್ಪನವರು ಇದ್ದ ಕಾಲದಲ್ಲಿ ಈ ಬಗ್ಗೆ ಚರ್ಚೆ ನಡೆಯಿತು. ಶ್ರೀಮಾನ್ ಬಸವಲಿಂಗಪ್ಪನವರೂ ಕೂಡ ಮುಗ್ಧಂ ಅವರ ತಾಳಕ್ಕೆ ತಕ್ಕಂತೆ ಕುಣಿದರು.

ಬೇರೆಯ ವಿಷಯಗಳಲ್ಲಿ ನಾನು ಅವರನ್ನು ಹೊಗಳಿದರೂ ಈ ವಿಷಯದಲ್ಲಿ ಅವರನ್ನು ಕಂಡಂ ಮಾಡಬೇಕಾಗುತ್ತದೆ. ಇಂಡಿಯನ್ ಟ್ರೇಡ್ ಯೂನಿಯನ್ ಆಕ್ಟ್ ಪ್ರಕಾರ ಇದು ಇಂಡಸ್ಟ್ರೀಸ್‌ನಲ್ಲಿ ಬರುತ್ತದೆ. ಇದರ ಬಗ್ಗೆ ನಾನು ಒಂದು ಪುಸ್ತಕವನ್ನು ತೆಗೆದುಕೊಂಡು ಬಂದು ತೋರಿಸಿದೆ.

(ಶ್ರೀ ಎಂ. ಎಸ್. ಕೃಷ್ಣನ್)

ಮತ್ತು ಸುಪ್ರೀಂಕೋರ್ಟ ತೀರ್ಮಾನಗಳನ್ನೂ ಸಹ ಅವರಿಗೆ ತಂದು ತೋರಿಸಿದೆ. ಆದರೂ ಸಹ ಅವರು ಇವತ್ತಿನವರೆಗೂ ಬದಲಾವಣೆಯಾಗಲಿಲ್ಲ. ಮಾನ್ಯ ರಂಗನಾಥ ಅವರು ಬಂದಮೇಲೆ ಅವರು ಬದಲಾವಣೆಯಾಗುತ್ತಾರೆಂದು ನಾನು ತಿಳಿದುಕೊಂಡಿದ್ದೇವೆ. ದುರಾದೃಷ್ಟವಶಾತ್ ಅವರು ಇನ್ನೂ ಬದಲಾವಣೆಯಾಗಿಲ್ಲ. ಮಂತ್ರಿಗಳು ಅವರ ಬಗ್ಗೆ ಮನಸು ಕೊಟ್ಟಿಲ್ಲ ಎಂದು ಕಾಣುತ್ತದೆ. ಇದು ಶ್ರೀಮಾನ್ ಮುಗ್ದಂ ಅವರ ಕಾನ್ಸಿಯಸ್‌ಗೆ ಗೊತ್ತಾಗಿದೆ ಎಂದು ನನ್ನ ಸ್ಪಷ್ಟ ಅಭಿಪ್ರಾಯ ಇದೆ. ತಮ್ಮ ರಿಪೋರ್ಟನಲ್ಲಿ ಕೋಡ್ ಆಫ್ ಡಿಸಿಪ್ಲಿನ್ ಬಗ್ಗೆ ಬರೆದಿದ್ದಾರೆ. ಕೋಡ್ಆಫ್ ಡಿಸಿಪ್ಲಿನ್‌ಗೆ 35ಜನ ಮಾಲೀಕರು ಕಾರ್ಮಿಕ ಸಂಘಗಳವರು ಒಪ್ಪಿಕೊಂಡಿದ್ದಾರೆ ಎಂದು ಬರೆದಿದ್ದಾರೆ. ಆದರೆ ತಮ್ಮನ್ನು ಕೇಳುತ್ತೇನೆ, ಈ ವಾಟರ್ ಸಪ್ಲೈ ಸೂಯರೇಜ್ ಬೋರ್ಡಿನವರು ಕೋಡ್ ಆಫ್ ಡಿಸಿಪ್ಲಿನ್‌ಗೆ ತದ್ವಿರುದ್ಧವಾಗಿ ನಡೆದುಕೊಳ್ಳುತ್ತಿದ್ದಾರೆ, ಈ ಶಿಸ್ತಿನ ನಿಯಮವನ್ನು ಅವರು ಪಾಲಿಸುವುದಿಲ್ಲ, ಪಾಲಿಸುವುದಕ್ಕೆ ತಯಾರಾಗಿಲ್ಲ. ಇಂಡಸ್ಟ್ರಿಯಲ್ ಎಂಪ್ಲಾಯ್‌ಮೆಂಟ್ ಸ್ಟ್ಯಾಂಡಿಂಗ್ ಆರ್ಡರ್ ಪ್ರಕಾರ, ಸ್ಟ್ಯಾಂಡಿಂಗ್ ಆರ್ಡರ್ಸ್ ಮಾಡಿ ಎಂದರೆ, ಇವರು ಲೇಬರ್ ಡಿಪಾರ್ಟಮೆಂಟಿನವರು ನೋಟೀಸ್ ಕೊಟ್ಟರೆ, ನೀವು ಯಾರು ನೋಟೀಸ್ ಕೊಡುವುದಕ್ಕೆ ಎಂದು ಅವರನ್ನೇ ಹೆದರಿಸುತ್ತಾರೆ. ಇವರು ಮತ್ತೆ ಲೇಬರ್ ಕಮಿಷನರ್‌ರನ್ನು ಕೇಳಿಕೊಂಡರು, ಅವರು ಈ ಮುಗ್ದಂ ವಿಚಾರ ಬಹಳ ಕಷ್ಟ ಎಂದು ಹೇಳಿದರಂತೆ. ಈ ರೀತಿಯಾಗಿ ಅಧಿಕಾರಿಗಳು ಬಂದು ಹೇಳುತ್ತಾರೆ. ಎಷ್ಟು ಹಾಸ್ಯಾಸ್ಪದ ಇದು. ನಾವು ಯಾವ ಮಟ್ಟಕ್ಕೆ ಹೋಗುತ್ತಿದ್ದೇವೆ? ಒಂದು ಕಡೆ ನೀವು ಕೋಡ್ ಆಫ್ ಡಿಸಿಪ್ಲಿನ್ ಅನ್ನು ಒಪ್ಪಿಕೊಳ್ಳಬೇಕು ಎಂದು ಹೇಳುತ್ತಿದ್ದೀರಿ, ಇನ್ನೊಂದು ಕಡೆ ಸರ್ಕಾರ ನಡೆಸತಕ್ಕಂಥ ಮಾಲೀಕರೇ ಇದನ್ನು ಒಪ್ಪಿಕೊಳ್ಳದಿದ್ದರೆ, ಅಂಥ ಅಧಿಕಾರಿಗಳನ್ನು ಏಕೆ ಇಟ್ಟಿದ್ದೀರಿ? ಯಾವ ಅಧಿಕಾರಿಗಳು ಇದನ್ನು ಒಪ್ಪಿಕೊಳ್ಳುವುದಿಲ್ಲ ಅಂಥವರನ್ನು ಹಿಡಿತದಲ್ಲಿಟ್ಟುಕೊಳ್ಳದೆ ಇರುವುದು ಸರಿಯಾದುದು ಅಲ್ಲ; ಎಂದು ನನ್ನ ಸ್ಪಷ್ಟವಾದ ಅಭಿಪ್ರಾಯ. ಪೇಮೆಂಟ್ ಆಫ್ ವೇಜಸ್ ಬಗ್ಗೆ ವಿರೋಧವಾಗಿ ನಡೆದುಕೊಳ್ಳುವ, ಕೋಡ್ ಆಫ್ ಡಿಸಿಪ್ಲಿನ್‌ಗೆ ವಿರೋಧವಾಗಿ ನಡೆದುಕೊಳ್ಳುವ ಫ್ಯಾಕ್ಟರಿ ಆಕ್ಟಗೆ ವಿರೋಧವಾಗಿ ನಡೆದುಕೊಳ್ಳುವ ಅಧಿಕಾರಿಗಳನ್ನು ತಾವು ಬದಲಾವಣೆ ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ಇಂಥ ಅಧಿಕಾರಿಗಳನ್ನು ಇಟ್ಟುಕೊಂಡು ನೀವು ಆಡಳಿತವನ್ನು ನಡೆಸಿದರೆ, ಕೆಲವೇ ದಿವಸಗಳಲ್ಲಿ ಅಧಿಕಾರದ ದುರುಪಯೋಗ, ದೌರ್ಜನ್ಯಗಳು ನಡೆಯುವುದಕ್ಕೆ ಅವಕಾಶವಾಗುತ್ತದೆ. ಈ ರೀತಿಯಾಗಿ ಬಹಳ ದಿವಸಗಳು ನಡೆಸುವುದಕ್ಕೆ ಸಾಧ್ಯವಿಲ್ಲ. ಸರ್ಕಾರ ನಡೆಸುವಂಥ ಡಿಪಾರ್ಟಮೆಂಟಿನವರೂ ಸಹ ಇದನ್ನು ಪಾಲನೆ ಮಾಡುವುದಕ್ಕೆ ಪ್ರಯತ್ನ ಮಾಡಬೇಕು. ಮಾನ್ಯ ಮಂತ್ರಿಗಳಾದ ಯಾಹ್ಯಾ ಅವರು ಇವರನ್ನು ಮತ್ತು ಖಾಸಗಿಯವರನ್ನು ತಹಬಂದಿಗೆ ತರುವುದಕ್ಕೆ ಹೆಚ್ಚಿನ ಜವಾಬ್ದಾರಿಯಿಂದ ಕೆಲಸ ಮಾಡಬೇಕಾಗಿದೆ ಖಾಸಗೀವಲಯದ ಇನ್ನೊಂದು ಡಿಪಾರ್ಟಮೆಂಟಿನ ಬಗ್ಗೆ ಒಂದು ಮಾತನ್ನು ಹೇಳುತ್ತೇನೆ. ಇಂಡಿಯನ್ ಎಕ್ಸ್‌ಪ್ರೆಸ್ ಪತ್ರಿಕಾ ಕಚೇರಿ. ಈ ಪತ್ರಿಕೆಯ ಮಾಲೀಕರು ಅಲ್ಲಿಯ ಕೆಲಸಗಾರರನ್ನು ಯೂನಿಯನ್ ಮಾಡುವುದಕ್ಕೆ ಬಿಡುವುದಿಲ್ಲ. ಅವರು ಭಾರಿ ದೊಡ್ಡವರು, ಕಾಂಗ್ರೆಸ್ ಎಲೆಕ್ಷನ್‌ಗೆಷ್ಟು ಹಣ ಕೊಟ್ಟಿದ್ದಾರೋ ಅದು ನನಗೆ ಗೊತ್ತಿಲ್ಲ, ಆದರೆ ಇವರೂ ಸಹ ಅಲ್ಲಿಯ ನೌಕರರು ಯೂನಿಯನ್ ಮಾಡುವುದಕ್ಕೆ ಬಿಡುವುದಿಲ್ಲ.

ಶ್ರೀ ಕೆ. ಎಚ್. ರಂಗನಾಥ್.—ನಿಮಗೂ ಬೇರೆಯವರು ಕೊಟ್ಟಿದ್ದಾರೆ.

ಶ್ರೀ ಎಂ. ಎಸ್. ಕೃಷ್ಣನ್.— ನಮಗೂ ಏಟು ಸಿಕ್ಕಿವೆ, ನಮಗೆ ಬೇರೆಯವರಿಂದ ಒಂದು ಕಾಸೂ ಸಿಕ್ಕುವುದಿಲ್ಲ. ಪ್ರಶ್ನೆ ಏನೆಂದರೆ, ಅವರು ಭಾರಿ ದೊಡ್ಡಮನುಷ್ಯರು, ಅವರಿಗೆ ದೊಡ್ಡ ಬಿಲ್ಡಿಂಗ್ ಬೇಕಾದಷ್ಟು ಅನುಕೂಲಗಳನ್ನು ನೀವು ಮಾಡಿಕೊಟ್ಟಿದ್ದೀರಿ. ನಾನು ತಮ್ಮನ್ನು ವಿನಯದಿಂದ ಕೇಳಿಕೊಳ್ಳುತ್ತೇನೆ, ತಾವು ಸರ್ಕಾರದ ಇಲಾಖೆಗಳು ಯಾವು ಯಾವುವು ಇದ್ದಾವೆ, ಅವುಗಳಿಗೂ, ಮತ್ತು ಖಾಸಗೀ ಕಚೇರಿಗಳು ಯಾವುವು ಇದ್ದಾವೆ ಅವುಗಳಿಗೂ ಇಂಡಸ್ಟ್ರಿಯಲ್ ಡಿಸ್ಪ್ಯೂಟ್ ಆಕ್ಟ್ ಅನ್ವಯವಾಗುತ್ತದೆಯೋ ಎನ್ನುವುದರ ಬಗ್ಗೆ ಸುಪ್ರೀಂಕೋರ್ಟಿನ ತೀರ್ಮಾನಗಳನ್ನು ನಾನು ಓದಿದ್ದೇನೆ, ಇವುಗಳನ್ನು ತಾವು ಮನದಟ್ಟು ಮಾಡಿಕೊಂಡು ಮುಖ್ಯವಾಗಿ, ಚೆನ್ನಬಸಪ್ಪನವರು, ಮುಗ್ದಂ ಅವರು ಮನದಟ್ಟು ಮಾಡಿಕೊಳ್ಳುವಂತೆ ಹೇಳಬೇಕು.

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಚನ್ನಬಸಪ್ಪನವರ ಕಂಟ್ರೋಲ್‌ನಲ್ಲಿ ಇವರು ಇಲ್ಲ, ಮುಗ್ದಂ ಅವರ ಕಿವಿ ಹಿಂಡುವವರು ಎಲ್ಲಿದ್ದಾರೆ ?

ಶ್ರೀ ಎಂ. ಎಸ್. ಕೃಷ್ಣನ್,—ಇದನ್ನು ಕಾರ್ಯರೂಪಕ್ಕೆ ತಂದಮೇಲೆ ಹೇಳುತ್ತೇನೆ. ಬೆಂಗಳೂರು ವಾಟರ್ ಸಪ್ಲೈ ಸೂಯರೇಜ್ ಬೋರ್ಡಿನಲ್ಲಿ ಒಬ್ಬ ಕಾರ್ಮಿಕನಿಗೆ 5 ರೂಪಾಯಿ ಫೈನ್ ಹಾಕಿದ್ದನ್ನು ಲೇಬರ್ ಕೋರ್ಟಿನವರು ಸರಿಯಲ್ಲ ಎಂದು ಹೇಳಿದ ಮೇಲೆ ಹೈಕೋರ್ಟಿಗೆ ಹೋಗುತ್ತಾರೆ. ಐದು ರೂಪಾಯಿ ಫೈನ್‌ಗೆ ಎರಡು ಸಾವಿರ ರೂಪಾಯಿಗಳನ್ನು ಖರ್ಚುಮಾಡುವುದಕ್ಕೂ ಅವರು ತಯಾರಾಗಿದ್ದಾರೆ.

ಶ್ರೀ ಎಚ್. ಸಿದ್ದವೀರಪ್ಪ.—ಏಕೆ ಮಾಡಬಾರದು?

ಶ್ರೀ ಎಂ. ಎಸ್. ಕೃಷ್ಣನ್.—ಅದನ್ನು ನೀವೇ ಹೇಳಬೇಕು. ಇನ್ನು ಮುನಿಸಿಪಾಲಿಟೀಸ್ ನಲ್ಲಿ ಯಾವ ಪರಿಸ್ಥಿತಿ ಇವೆ ಎಂದು ಹೇಳಬೇಕಾಗಿದೆ. ಮಂಗಳೂರು ಮುನಿಸಿಪಾಲಿಟಿಯಲ್ಲಿ ಒಂದು ಡಿಸ್ಪ್ಯೂಟ್ ಬಂದಿದೆ. ಮುನಿಸಿಪಾಲಿಟಿ ಇಂಡಸ್ಟ್ರಿ ಹೌದೇ ಅಲ್ಲವೇ ಎನ್ನುವ ಬಗ್ಗೆ. ಸುಪ್ರೀಂ ಕೋರ್ಟಿನ ತೀರ್ಮಾನಕ್ಕೂ, ಹೈಕೋರ್ಟಿನ ತೀರ್ಮಾನಕ್ಕೂ ಒಂದು ಗೊಂದಲ ಉಂಟಾಗಿದೆ. ಸುಪ್ರೀಂಕೋರ್ಟಿನ ತೀರ್ಮಾನದಲ್ಲಿ ಎರಡು ರೀತಿಯ ಕನ್‌ಫ್ಯೂಷನ್ ಬರುವಂತೆ ಅವಕಾಶ ಇದೆ. ಇದು ಸ್ಪಷ್ಟವಾಗಿಲ್ಲ. ಅಡ್ಡಗೋಡೆಯ ಮೇಲೆ ದೀಪ ಇಟ್ಟಿರುವ ರೀತಿಯಲ್ಲಿ ಹೇಳಿದ್ದಾರೆ. ಸುಪ್ರೀಂಕೋರ್ಟ್ ತೀರ್ಮಾನದ ಪ್ರಕಾರ ಇದು ಒಂದು ಕಡೆ ಇಂಡಸ್ಟ್ರಿಯಾಗುತ್ತದೆ. ಹೈಕೋರ್ಟಿನ ತೀರ್ಮಾನದ ಪ್ರಕಾರ ಇಂಡಸ್ಟ್ರಿಯಾಗುವುದಿಲ್ಲ. ಇದರ ಬಗ್ಗೆ ಅಪೀಲನ್ನು ಸುಪ್ರೀಂಕೋರ್ಟಿಗೆ ತೆಗೆದುಕೊಂಡು ಹೋಗುವುದು ಸರ್ಕಾರದ ಜವಾಬ್ದಾರಿ. ಈ ಮುನಿಸಿಪಾಲಿಟಿಯಲ್ಲಿ ಲಕ್ಷಾಂತರ ಜನ ಕೆಲಸಗಾರರು ಇದ್ದಾರೆ. ಅವರೆಲ್ಲರಿಗೂ ಅನ್ಯಾಯವಾಗುತ್ತಿದೆ. ಅವರಿಗೆ ಅನ್ಯಾಯವಾಗದ ಹಾಗೆ ನಡೆದುಕೊಳ್ಳುತ್ತಾರೆಂದು ತಿಳಿದುಕೊಂಡಿದ್ದೇನೆ. ಕೈಗಾರಿಕಾ ಕ್ಷೇತ್ರದಲ್ಲಿ ಶಾಂತಿ ಇರಬೇಕು ಎಂದರೆ, ಕೈಗಾರಿಕಾ ಮಾಲೀಕರಿಗೂ ಮತ್ತು ಕಾರ್ಮಿಕರಿಗೂ ಇರುವ ಪ್ರಶ್ನೆಗಳನ್ನು ಬಗೆಹರಿಸುವುದಕ್ಕೆ ಪ್ರಯತ್ನ ಪಡಬೇಕು. ಒಂದೆರಡು ಕಡೆ ಇಂಥ ಪ್ರಯತ್ನವನ್ನು ನೀವು ಮಾಡಿದ್ದೀರಿ. ಟೆಕ್ಸ್‌ಟೈಲ್ ಕೈಗಾರಿಕೆ, ಇವನ್ನು ನೀವು ಕರೆಸಿ, ಒಂದು ಕಮಿಟಿಯನ್ನು ಮಾಡಿದ್ದೀರಿ ಕಮಿಟಿಯನ್ನು ಮಾಡಿರುವುದು. ಒಳ್ಳೆಯದು. ಆದರೆ ಈ ಕಮಿಟಿಯಲ್ಲಿ ಏನಾಗಿದೆ ಎಂದರೆ, ಐದು ಜನ ಕಾರ್ಮಿಕ ಪ್ರತಿನಿಧಿಗಳನ್ನು, ಆರು ಜನ ಮಾಲೀಕರ ಪ್ರತಿನಿಧಿಗಳನ್ನು ಹಾಕಿದ್ದೀರಿ. ಈ ತಾರತಮ್ಯ ಏಕೆ? ಎರಡರಲ್ಲಿಯೂ ಐದು ಜನರನ್ನು ನೇಮಕ ಮಾಡಬೇಕು. ಎ.ಐ.ಟಿ.ಯು.ಸಿ, ಮತ್ತು ಎನ್.ಟಿ.ಯು.ಸಿ: ಇವರಿಗೂ ಪ್ರಾಧಾನ್ಯತೆ ಕೊಡಬೇಕು. ಭಾರತೀಯ ಮಜದೂರ್ ಸಂಘ ಇದೆ, ಹಿಂದೂ ಮಜದೂರ್ ಸಂಘ ಇದೆ. ಕಾರ್ಮಿಕರಿಗೆ ಐದು ಸ್ಥಾನವನ್ನು ಕೊಟ್ಟು ಮಾಲೀಕರಿಗೆ 6 ಸ್ಥಾನವನ್ನು ಏಕೆ ಕೊಡಬೇಕು?

ಶ್ರೀ ಎಸ್. ಎಂ. ಯಾಹ್ಯಾ. — 5—5 ಸ್ಥಾನ ಇದೆ.

ಶ್ರೀ ಎಂ. ಎಸ್. ಕೃಷ್ಣನ್.—ತಮಗೆ ಗೊತ್ತಿದೆ ಸರ್ಕಾರದ ಪ್ರತಿನಿಧಿಯಾಗಿರುವವರು ಯಾರ ಪರವಾಗಿ 'ಓಟು' ಹಾಕುತ್ತಾರೆಂದು. ಆದ್ದರಿಂದ ಎ.ಐ.ಟಿ.ಯು.ಸಿ. ಯವರಿಗೆ ಎರಡು ಸ್ಥಾನಗಳನ್ನು ಕೊಡಬೇಕು. ಟೆಕ್ಸ್‌ಟೈಲ್ ಕೈಗಾರಿಕೆ ಬಹಳ ಪ್ರಭಾವ ಇರುವಂಥ ಸಂಸ್ಥೆ. ಶ್ರೀಮಾನ್ ಸಿದ್ದಯ್ಯ ಪುರಾಣಿಕ್ ಅವರು ಇಂಜಿನಿಯರಿಂಗ್ ಕೈಗಾರಿಕಾ ಸೆಕ್ಷನ್‌ನಲ್ಲಿ ವೇಜ್ ಬೋರ್ಡನ್ನು ಜಾರಿಗೆ ತಗೆದುಕೊಂಡು ಬರುವುದಕ್ಕೆ ಬಹಳ ಪ್ರಯತ್ನ ಪಟ್ಟರು. ಇವರು ಒಳ್ಳೆಯ ಕಮೀಷನರ್, ಇದರ ಬಗ್ಗೆ ಬಹಳ ಪ್ರಯತ್ನಪಟ್ಟರು ಎನ್ನುವುದರಲ್ಲಿ ಯಾವ ಭಿನ್ನಾಭಿಪ್ರಾಯವಿಲ್ಲ ಆದರೆ ಏನು ಪ್ರಯೋಜನಾ, ಯಾವ ಮಾಲೀಕರೂ ಕೂಡ ಇದನ್ನು ಜಾರಿಗೆ ತೆಗೆದುಕೊಂಡು ಬಂದಿಲ್ಲ. ಇಂಜಿನಿಯರಿಂಗ್ ವೇಜ್‌ಬೋರ್ಡ್ ರಿಪೋರ್ಟನ್ನು ಮೂರುವರೆ ರಿಪೋರ್ಟ್ ಎಂದು ಕರೆಯುತ್ತೇವೆ. ಎಂಪ್ಲಾಯರ್ಸ್ ರಿಪೋರ್ಟ್, ಎಂಪ್ಲಾಯೀಸ್ ರಿಪೋರ್ಟ್ ಮತ್ತು ಚೇರ್ಮನ್ ರಿಪೋರ್ಟ್. ಚೇರ್ಮನ್ ರಿಪೋರ್ಟನ್ನು ಯಾರೂ ಜಾರಿಗೆ ತೆಗೆದುಕೊಂಡು ಬಂದಿಲ್ಲ ಸಣ್ಣ ಎಂಪ್ಲಾಯರ್ಸ್ ಸಹ ಇದನ್ನು ಜಾರಿಗೆ ತೆಗೆದುಕೊಂಡುಬಂದಿಲ್ಲ. ಎಂದು ನಾನು ಕೇಳುತ್ತೇನೆ. ಇದಕ್ಕೆ ಶಾಸನ ಮಾಡಿ ಇಷ್ಟೇ ವೇಜಸ್ ಇರಬೇಕೆಂಬುದನ್ನು ಏತಕ್ಕೆ ನಿಗದಿ ಮಾಡಕೂಡದು? ಪಶ್ಚಿಮ ಬಂಗಾಳದಲ್ಲಿ ಮಾಡಿದ್ದಾರೆ. ಉತ್ತರ ಪ್ರದೇಶದಲ್ಲಿ ಮಾಡಿದ್ದಾರೆ. ಇಲ್ಲಿ ಏತಕ್ಕೆ ಮಾಡಕೂಡದು? ದಿಟ್ಟತನ ಇದ್ದರೆ, ವೇಜಸ್ ನಿಗದಿ ಮಾಡಿ. ಆಗ ಕೈಗಾರಿಕೆಯಲ್ಲಿ ಅಶಾಂತಿ ಇರುವುದಿಲ್ಲ. ಆದುದರಿಂದ ಕೈಗಾರಿಕೆ ಮುಂದೆ ಹೋಗುವುದಕ್ಕೆ, ರಾಜ್ಯದ ಸಮನ್ವಯ ತರುವುದಕ್ಕೆ, ಅಶಾಂತಿ ತಡೆಯುವುದಕ್ಕೆ ಇಂಥ ದೊಡ್ಡದಾದ ಕಾರ್ಯಕ್ರಮ ನಿಜವಾಗಿ ಕೈಗಾರಿಕೆಗಳಲ್ಲಿ ಇಂದು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಕಂಟ್ರಾಕ್ಟ್ ಲೇಬರ್ ಎಬಾಲಿಷನ್ ಆಕ್ಟ್. ಈ ಆಕ್ಟ್ ಸೆಂಟ್ರಲ್ ಆಕ್ಟ್. ಸಿಮೆಂಟ್ ಮತ್ತು ಪೇಪರ್ ಮಾಲೀಕರು ಇದನ್ನು ಎಲ್ಲಾ ಕಡೆ ಪೂರ್ತಿ ವೈಲೇಟ್ ಮಾಡುತ್ತಾರೆ. ಯಾವುದಕ್ಕೆ ಕಂಟ್ರಾಕ್ಟ್ ಕೊಡಕೂಡದೋ ಅದಕ್ಕೆ ಕೊಡುತ್ತಾರೆ. ಟ್ರಾನ್ಸ್‌ಪೋರ್ಟ್ ಬಗ್ಗೆ ರೂಲ್ಸ್

(ಶ್ರೀ ಎಂ ಎಸ್ ಕೃಷ್ಣನ್)

ನಮ್ಮ ರಾಜ್ಯದಲ್ಲಿ ತಯಾರು ಆಗಿಲ್ಲ. ಸೆಂಟ್ರಲ್ ರೂಲ್ಸ್ ತಯಾರು ಆಗಿದೆ. ನಮ್ಮಲ್ಲಿ ರೂಲ್ಸ್ ಜಾರಿಯಲ್ಲಿ ಬಂದಿಲ್ಲ. ಇದನ್ನು ಉಪಯೋಗ ಮಾಡಿಕೊಂಡು ನಮ್ಮ ರಾಜ್ಯದ ಭಾರಿ ಭಾರಿ ಮಾಲೀಕರುಗಳು ಕಂಟ್ರಾಕ್ಟ್ ಲೇಬರ್ ಅಬಾಲಿಷನ್ ಆಕ್ಟ್‌ಗೆ ವಿರುದ್ಧವಾಗಿ ಮನಸ್ವೇಚ್ಛೆಯಾಗಿ ಕಾರ್ಮಿಕರವನ್ನು ಶೋಷಣೆ ಮಾಡುತ್ತಿದ್ದಾರೆ. ಇದನ್ನು ವಿಮರ್ಶೆ ಮಾಡಿ ನೋಡಿದರೆ ಗೊತ್ತಾಗುತ್ತದೆ. ಮುಖ್ಯವಾಗಿ ಬೀಡಿ, ಸಿಗರೇಟ್ ವರ್ಕರ್ಸ್ ಆಕ್ಟ್ ಸುಪ್ರೀಂ ಕೋರ್ಟಿಗೆ ಹೋಗಿ ಸರ್ಕಾರದ ಪರವಾಗಿ ಆಗಿದೆ. ಅದನ್ನು ಕಾರ್ಯಗತಗೊಳಿಸಬೇಕು. ಇನ್ನೊಂದು ವಿಷಯ ಕಳೆದ ವರ್ಷದ ವರದಿಯನ್ನು ಓದಿದರೆ ಅದರಲ್ಲಿ ಕೆಲವು ಆಶ್ವಾಸನೆಗಳನ್ನು ಕೊಟ್ಟಿದ್ದಾರೆ. ಆ ಆಶ್ವಾಸನೆಗಳು ಏನು ಆಗಿವೆ? ಉದಾಹರಣೆಗೆ ಒಂದು ಹೇಳುತ್ತೇನೆ. ಆನ್ಯುಯಲ್ ರಿಪೋರ್ಟ್ ಫಾರ್ 1972-73 ರಲ್ಲಿ ಏನು ಹೇಳಿದ್ದಾರೆ

> "A tripartite committee is proposed to be constituted under the chairmanship of Commissioner of Labour to examine and suggest measures for improving the conditions of workers employed in the private educational institutions within the limit of the Industrial Disputes Act"

ಎಂದು ಹೇಳಿದ್ದಾರೆ. ಎಜುಕೇಷನಲ್ ಇನ್‌ಸ್ಟಿಟ್ಯೂಷನ್. ಇಂಡಸ್ಟ್ರಿಯಲ್ ಡಿಸ್ಪ್ಯೂಟ್ಸ್ ಪರಿಮಿತಿಯೊಳಗೆ ಬರುತ್ತದೆಯೋ ಎಂದು ಪರಿಶೀಲನೆ ಮಾಡುವುದಕ್ಕೆ ಶ್ರೀ ಕಣ್ಣನ್ ಮತ್ತು ನರಸಿಂಹನ್‌ರವರು ಸೇರಿಸಿ ಒಂದು ಕಮಿಟಿ ಮಾಡುತ್ತೇವೆ ಎಂದು ಹೇಳಿದರು. ಆ ಕಮಿಟಿ ಇನ್ನೂ ರಚನೆ ಆಗಿಲ್ಲ, ಇದರ ಬಗ್ಗೆ ತಕ್ಷಣ ಕಾರ್ಯಕ್ರಮ ತಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ. ಡಿಪಾರ್ಟ್‌ಮೆಂಟ್ ವಿಷಯವಾಗಿ ಒಂದೆರಡು ಮಾತು ಹೇಳಬೇಕಾಗಿದೆ. ಈ ಲೇಬರ್ ಡಿಪಾರ್ಟ್‌ಮೆಂಟ್ ನನಗೆ ತಿಳಿದಮಟ್ಟಿಗೆ ಮಂತ್ರಿಗಳು ಇದರ ಬಗ್ಗೆ ಬಹಳ ಕಣ್ಣಲ್ಲಿ ಕಣ್ಣಿಟ್ಟು ನೋಡಬೇಕೆಂದು ಕೇಳಿಕೊಳ್ಳುತ್ತೇನೆ. ಲೇಬರ್ ಕಮಿಷನರ್ ಅನೇಕ ವಿಷಯಗಳಲ್ಲಿ ಒಳ್ಳೆಯ ಹೆಜ್ಜೆಯನ್ನು ಇಡುತ್ತಿದ್ದಾರೆ. ಪ್ರಶ್ನೆಗಳನ್ನು ಇತ್ಯರ್ಥ ಮಾಡುವುದಕ್ಕೆ ಪ್ರಯತ್ನ ಪಡುತ್ತಿದ್ದಾರೆ. ಅದರ ಬಗ್ಗೆ ನಾನು ಏನು ಹೇಳುವುದಕ್ಕೆ ಹೋಗುವುದಿಲ್ಲ. ಈ ತರಹ 2-3 ಜನ ಅಧಿಕಾರಿಗಳು ಕೆಳಗಿನ ಮಟ್ಟದಲ್ಲಿ ಇದ್ದರೆ ನಮಗೆ ಅನ್ನಿಸುತ್ತದೆ ಡಿಪಾರ್ಟ್‌ಮೆಂಟನ್ನು ಇನ್ನೂ ಒಳ್ಳೆಯ ರೀತಿಯೊಳಗೆ ಸ್ಟ್ರೀಮ್‌ಲೈನ್ ಮಾಡಬಹುದು ಎಂದು. ಆದರೆ ದುರಾದೃಷ್ಟವಶಾತ್ ಆ ಪರಿಸ್ಥಿತಿ ಎಲ್ಲಾ ಮಟ್ಟದಲ್ಲೂ ಇಲ್ಲ. ಬಹಳ ಕಂಪ್ಲೇಂಟ್ ನಮಗೆ ಬರುತ್ತದೆ. ಇತ್ಯರ್ಥ ಆಗದಿದ್ದ ಪ್ರಶ್ನೆ ಬಂದಾಗ ಕೆಲವು ಅಧಿಕಾರಿಗಳು ಮಾಲೀಕರ ಜೊತೆಯಲ್ಲಿ ಸಂಪರ್ಕ ಇಟ್ಟುಕೊಂಡಿದ್ದಾರೆ ಎನ್ನುತಕ್ಕ ದೂರುಗಳು ಬಂದಿವೆ. ಸಂಪರ್ಕ ಮಾತ್ರವಲ್ಲ, ಮೋಟಾರಿನಲ್ಲಿ ಹೋಗುತ್ತಾರೆ, ಬೃಂದಾವನ ನೋಡಿಕೊಂಡು ಬರುತ್ತಾರೆ, ಬೆಂಗಳೂರು ಸುತ್ತಾಡುತ್ತಾರೆ. ಆ ರೀತಿ ಆಫೀಸರ್ ಮೇಲೆ ಶಂಕೆ ಉಂಟಾಗಕೂಡದು, ನಂಬಿಕೆ ಉಂಟಾಗಬೇಕು ಎಂದರೆ, ಆಫೀಸರ್ ಬಗ್ಗೆ ಕಣ್ಣಲ್ಲಿ ಕಣ್ಣಿಟ್ಟು ನೋಡಬೇಕು. ಅವರನ್ನು ಸರಿಯಾದ ತಹಬಂದಿಗೆ ತರಬೇಕು ಎಂದು ಹೇಳುತ್ತೇನೆ. ಲೇಬರ್ ಡಿಪಾರ್ಟ್‌ಮೆಂಟ್ ಮಾತ್ರವಲ್ಲ ಸೆಕ್ರೆಟರಿಯೇಟ್ ಲೇವಲ್‌ನಲ್ಲಿಯೂ ಸಹ ಸರಿಯಾದಂಥ ಜನ ಇರಬೇಕು. ಸೆಕ್ರಟೇರಿಯೇಟ್‌ನಲ್ಲಿ ಎಲ್ಲಾ ಲೆವಲಿನಲ್ಲಿಯೂ ದಕ್ಷತೆ ಇರುವಂಥ ಮತ್ತು ಬ್ಯುರೋಕ್ರಟಿಕ್ ಆಟಿಟ್ಯೂಡ್ ಇಲ್ಲದೇ ಇರುವಂಥ ಜನ ಇರಬೇಕು ಕೆಲವರು ಹೆಚ್ಚು ಬ್ಯುರೋಕ್ರಟಿಕ್ ಆಟಿಟ್ಯೂಡ್ ತೋರಿಸುತ್ತಾರೆ. ಅವರ ಹತ್ತಿರ ಹೋಗಿ, ರೆಫರೆನ್ಸ್ ಏನಾಗಿದೆ ಎಂದು ಕೇಳಿದರೆ, ಆಮೇಲೆ ಬನ್ನಿ ನಾಳೆಬನ್ನಿ ನೋಡೋಣ ಎನ್ನುವ ಪರಿಸ್ಥಿತಿ ಬಂದಿದೆ. ಈ ತರಹ ನಡೆದುಕೊಂಡರೆ ಅವರ ಮೇಲೆ ನಂಬಿಕೆ ಬರುವುದಕ್ಕೆ ಸಾಧ್ಯವಾಗುವುದಿಲ್ಲ, ಅಪನಂಬಿಕೆ ಆಗುತ್ತದೆ, ಅದು ಆಗದಂತೆ ನೋಡಿಕೊಳ್ಳಬೇಕು. ಸರಿಯಾದವರು ನಿಸ್ಪೃಹತೆ ಇರುವವರು. ದಕ್ಷತೆ ಇರುವವರು ಕಾರ್ಯ ತತ್ಪರತೆ ಇರುವವರು ನಿಷ್ಠೆ ಇರುವವರು ಆಸೆ ಆಕಾಂಕ್ಷೆಗಳಿಗೆ ಕೈ ಒಡ್ಡದ ಜನಗಳನ್ನು ಕಂಡು ಹಿಡಿದು ಈ ಇಲಾಖೆಯಲ್ಲಿ ಹಾಕಬೇಕು. ಒಳ್ಳೆಯವರು ಕೆಲವರು ಇದ್ದರೆ ಅವರನ್ನು ಇಲಾಖೆಯಲ್ಲಿ ಎರಡು ದಿವಸ ಇಟ್ಟುಕೊಂಡು ಕಳುಹಿಸಿಬಿಡುತ್ತಾರೆ. ಒಳ್ಳೆಯವರು ಇದ್ದರೆ ಬರಲಿ. ಕಾರ್ಮಿಕರ ಪ್ರಶ್ನೆ ಇತ್ಯರ್ಥ ಮಾಡಿದರೆ ವೀಲ್ಸ್ ಆಫ್ ಪ್ರೊಡಕ್ಷನ್ ಮೂವ್ ಮಾಡುವುದಕ್ಕೆ ಸಾಧ್ಯ. ದಯವಿಟ್ಟು ಈ ತರಹ ಯೋಚನೆ ಮಾಡಬೇಕು.

ಇನ್ನೊಂದು ಅಂಶ ಟ್ರಿಬ್ಯುನಲ್ ಮತ್ತು ಕೋರ್ಟುಗಳ ಬಗ್ಗೆ ಎರಡು ವಿಷಯ ಮಾತನಾಡುತ್ತೇನೆ. ಇಂಡಸ್ಟ್ರಿಯಲ್ ಟ್ರಿಬ್ಯುನಲ್ ಮತ್ತು ಕೋರ್ಟುಗಳು ಬೇಡ, ನೇರವಾಗಿ collective bargaininig ಇರಬೇಕು. ಸೆಟಲ್‌ಮೆಂಟ್ ಆಫ್ ಸ್ಟ್ರೈಕ್ ಬೈ ನೆಗೋಷಿಯೇಷನ್ ಆಗ

ಬೇಕೆಂದು ನಮ್ಮ ಅಭಿಪ್ರಾಯ. ಈಗ ಕಾನೂನು ಪ್ರಕಾರ ಟ್ರಿಬ್ಯುನಲ್ ಕೋರ್ಟ್ ಇದೆ. ಈಗ ಇರುವಂಥ ಲೇಬರ್ ಕೋರ್ಟಿನಲ್ಲಿ ನ್ಯಾಯ ದೊರಕುತ್ತದೆ ಎಂದರೆ ಹಳೆ ಕಂಪ್ಲೇಂಟ್ ಮುಂದುವರಿಯುತ್ತಾ ಇದೆ, ಆರು ತಿಂಗಳು, ಒಂದು ವರ್ಷವಾದರೂ ಕೇಸ್ ಡಿಸ್‌ಪೋಸ್ ಆಫ್ ಆಗುವುದಿಲ್ಲ. ಹೋದ ಡಿಸೆಂಬರ್ ತಿಂಗಳಲ್ಲಿ 58 ವರ್ಷಕ್ಕೆ ರಿಟೈರ್ ಆಗಬೇಕೇ ಅಥವಾ 55 ವರ್ಷಕ್ಕೆ ರಿಟೈರ್ ಆಗಬೇಕೇ ಎಂದು ವಾದ ವಿವಾದ ಬಂದಾಗ ಲೇಬರ್ ಕೋರ್ಟಿನಲ್ಲಿ ಕೆಲಸ ನಡೆಯಲಿಲ್ಲ. ರಿಟೈರ್ ಆಗಬೇಕಾದ ಜನ ಇರಬೇಕೋ ಹೋಗಬೇಕೋ ಗೊತ್ತಾಗಲಿಲ್ಲ. ಯಾವ ಕೇಸ್ ತೆಗೆದುಕೊಂಡು ಇತ್ಯರ್ಥ ಮಾಡಲಿಲ್ಲ. ಹೀಗಾಗಿ ಕೆಲಸ ನಿಂತು ಹೋಯಿತು. ಇಲ್ಲಿ ಪ್ರೋಗ್ರೆಸ್ ಬಗ್ಗೆ ಯಾರ ಹತೋಟಿ ಇರುವುದು? ಹಿಂದೆ ಮಲ್ಲಪ್ಪನವರು ಸೆಕ್ರೆಟರಿಯಾಗಿದ್ದರು. ಟ್ರಿಬ್ಯುನಲ್ ಮತ್ತು ಲೇಬರ್ ಕೋರ್ಟುಗಳಲ್ಲಿ ಎಷ್ಟು ಕೇಸಸ್ ಡಿಸ್‌ಪೋಸ್ ಆಗಿದೆ, ಏತಕ್ಕೆ ಆಗಿಲ್ಲ ಎಂದು ಕೇಳುವ ರೀತಿಯಲ್ಲಿ ಅವರು ಕೇಳುತ್ತಿದ್ದರು. ಕೆಲವು ಸಲ ಮಂತ್ರಿಗಳು ಸಹ ಪ್ರಿಸೈಡಿಂಗ್ ಆಫೀಸರ್ ಕರೆಸಿ ತಿಂಡಿ ಕೊಟ್ಟು ಸಮಜಾಯಿಷಿ ಹೇಳಿ ಕೆಲಸ ಮಾಡುತ್ತಿದ್ದರು ಇದರ ಬಗ್ಗೆ ಹೈಕೋರ್ಟುಗಳು ಕೇಳುತ್ತಾ ಇಲ್ಲ. ಅವರು ಸುಮ್ಮನೆ ಇದ್ದುಬಿಟ್ಟಿದ್ದಾರೆ. ಬೇರೆ ಕೋರ್ಟುಗಳಿಗೂ ಈ ಕೋರ್ಟುಗಳಲ್ಲಿ ವ್ಯತ್ಯಾಸವಿಲ್ಲ. ಲೇಬರ್ ಡಿಪಾರ್ಟ್‌ಮೆಂಟ್ ಟ್ರಿಬ್ಯೂನಲ್‌ಲ್ಲಿ ಕೆಲಸ ಆಗಿಲ್ಲ. ನಾನಾದರೂ ಕೇಳಿಕೊಳ್ಳುವುದು ಈ ವಿಷಯದಲ್ಲಿ ತಾವು ಅಥವಾ ಚೀಫ್ ಮಿನಿಸ್ಟರ್ ಆದರೂ ಗಮನಹರಿಸಿ ಅವರ ಹತ್ತಿರ ಮಾತನಾಡಿ ಅವರಿಂದ ಪ್ರೊಗ್ರೆಸ್ ಜಾಸ್ತಿ ಆಗುವ ಹಾಗೆ ಮಾಡಬೇಕು. ಜೊತೆಗೆ ಸಿಕ್ಕಾಪಟೆ ಟ್ರಾನ್ಸ್‌ಫರ್ ಮಾಡುತ್ತಾರೆ. ಒಬ್ಬೊಬ್ಬರನ್ನು ಒಂದೊಂದು ಕಡೆ ಟ್ರಾನ್ಸ್‌ಫರ್ ಮಾಡುತ್ತಾರೆ. ಅವರು ಲೇಬರ್ ಲಾಸ್ ಕಲಿಯುವುದಕ್ಕೆ ಆರು ತಿಂಗಳು ಬೇಕಾಗುತ್ತದೆ. ಆರು ತಿಂಗಳು ಆಗುವುದರೊಳಗೆ ಅವರನ್ನು ಬೇರೆ ಕಡೆಗೆ ಟ್ರಾನ್ಸ್‌ ಮಾಡುತ್ತಾರೆ. ನಾವು ಎಲ್ಲಾ ಆಕ್ಟ್ ಅವರಿಗೆ ಹೇಳಬೇಕಾಗುತ್ತದೆ. ಈ ಪರಿಸ್ಥಿತಿ ಹೋಗಬೇಕು. ಅಪಾಯಿಂಟ್‌ಮೆಂಟ್ ಆಫ್ ಜಡ್ಜಸ್ ಸರ್ಕಾರ ಮಾಡುತ್ತಿತ್ತು. ಅದನ್ನು ಹೈಕೋರ್ಟಿಗೆ ಬಿಟ್ಟುಕೊಟ್ಟಿದ್ದೀರಿ. ಇದು ತಪ್ಪು, ಹೈಕೋರ್ಟಿಗೆ ಬಿಟ್ಟುಕೊಡುವುದರಿಂದ ಪ್ರೊಮೋಷನಲ್ ವೇಕೆನ್ಸೀಸ್ ಬರುತ್ತದೆ ಎಂದು ಮಾಡಿದಿರಿ ಆ ರೀತಿ ಮಾಡಿದ್ದೇ ತಪ್ಪು. ನನ್ನ ಅಭಿಪ್ರಾಯದಲ್ಲಿ ಇದು ಮಿನಿಸ್ಟ್ರಿ ಕೈಯೊಳಗೆ ಇದ್ದಿದ್ದರೆ, ರಿಟೈರ್ಡ್ ಜಡ್ಜಗಳನ್ನು, ಹೈಕೋರ್ಟ್ ಜಡ್ಜಗಳನ್ನು ಅಲ್ಲಿ ಹಾಕುವುದಕ್ಕೆ ಅವಕಾಶ ಇತ್ತು. ಇದರಿಂದ ಬೇಗ ಬೇಗ ಕೇಸುಗಳನ್ನು ಡಿಸ್‌ಪೋಸ್ ಆಫ್ ಮಾಡಬಹುದು. ನ್ಯಾಯ ಆದಷ್ಟು ಬೇಗ ದೊರೆಯುವಂಥ ಅವಕಾಶ ಮಾಡಿಕೊಡಿ. ಆ ರೀತಿ ವ್ಯವಸ್ಥೆ ಮಾಡಿ ಎಂದು ಕೇಳಿಕೊಳ್ಳುತ್ತೇನೆ.

[MR. DEPUTY SPEAKER in the Chair]

3-30 P. M.

ಈ ಸಂದರ್ಭದಲ್ಲಿ ಒಂದು ಮುಖ್ಯವಾದಂಥ ಸಂಗತಿಯನ್ನು ಹೇಳಬೇಕಾಗಿದೆ ಏನೆಂದರೆ ಲೇಬರ್ ಕೋರ್ಟಿಗೆ ಒಬ್ಬರು ಪ್ರಿಸೈಡಿಂಗ್ ಆಫೀಸರ್‌ನ್ನು ನೇಮಕ ಮಾಡಿದ್ದೀರಿ : ಅವರ ಹೆಸರನ್ನು ಹೇಳುವುದಕ್ಕೆ ಹೋಗುವುದಿಲ್ಲ. ಅವರ ಕಥೆ ಕೇಳಿದರೆ ಅವರನ್ನು ಏನಾದರು ಮೆಂಟಲ್ ಆಸ್ಪತ್ರೆಗೆ ಕಳುಹಿಸಬೇಕೇ ಎಂಬ ಅನುಮಾನ ಬರುತ್ತದೆ. ಏಕೆಂದರೆ ಒಂದು ಸಲ ಅವರು ಕೋರ್ಟಿನಲ್ಲಿ ಕುಳಿತುಕೊಂಡಿದ್ದಾಗ ಪೇಪರ್‌ವೈಟ್‌ನ್ನು ಮೇಲೆ ಎಸೆದು ಅದು ಏನಾಯಿತು, ಅದು ಏನಾಯಿತು ಎಂದು ನೋಡುತ್ತಿದ್ದರಂತೆ ; ಅದು ಏನಾದರೂ ಅಲ್ಲಿಯೇ ಕುಳಿತಿದ್ದ ಲಾಯರ್‌ಗಳ ಮೇಲೆ ಬಿದ್ದಿದ್ದರೆ ಅವರು ತೊಂದರೆ ಅನುಭವಿಸಬೇಕಾಗಿತ್ತು. ಮತ್ತೊಂದು ಸಲ ಅವರು ಕೋರ್ಟಿಗೆ ಬಂದವರು ಯಾರಿಗೂ ಕಾರಣ ಕೊಡದೆ ಕೋರ್ಟಿಗೆ ಬೀಗ ಹಾಕಿಕೊಂಡು ಹೊರಟು ಹೋದರು. ಲಾಯರ್‌ಗಳು ಹೊರಗಡೆ ಕಾದುಕೊಂಡಿದ್ದರು. ಕ್ಲಾರ್ಕ್‌ಗೆ ಆಗಲೀ, ಜವಾನನಿಗೆ ಆಗಲೀ ಕಾರಣ ಗೊತ್ತಾಗಲಿಲ್ಲ ; ಪುನಃ ಕೇಸ್‌ಗಳನ್ನು ಯಾವಾಗ ತೆಗೆದುಕೊಳ್ಳಲಾಗುವುದು ಎಂದು ತಾರೀಖನ್ನು ಸಹ ಕೊಡದೆ ಅವರು ಹೊರಟು ಹೋಗಿದ್ದರು. ನಂತರ ಲಾಯರ್‌ಗಳೆಲ್ಲಾ ಅವರ ಮನೆಗೆ ಡೆಪ್ಯುಟೇಷನ್ ಹೋಗಿ ಬೇರೆ ತಾರೀಖನ್ನು ಕೊಡಬೇಕೆಂದು ಕೇಳಿಕೊಂಡರು. ಇಲ್ಲದಿದ್ದರೆ ಕೀ ಕೊಟ್ಟರೆ ಕಚೇರಿ ಬಾಗಿಲು ತೆಗೆಸಿ ಕ್ಲಾರ್ಕ್ ಕಡೆಯಿಂದ ಮುಂದಿನ ಅಡ್ಜರ್ನ್‌ಮೆಂಟ್ ತಾರೀಖನ್ನು ತೆಗೆದುಕೊಳ್ಳುತ್ತೇವೆ ಎಂದು ಕೇಳಿದಾಗ ಅವರು 3 ದಿವಸ ಕೋರ್ಟಿಗೆ ಬರಬೇಡಿ ಎಂದು ಹೇಳಿದರಂತೆ. ಈ ರೀತಿ ಬೇರೆ ಕೋರ್ಟ್‌ಗಳಲ್ಲಿ ಏನಾದರು ನಡೆಯುತ್ತದೆಯೇ ಎಂದು ನಾನು ಕೇಳುತ್ತೇನೆ ? ಬೇರೆ ಕಡೆ ಬೇಡದವರನ್ನು ಕರೆದುಕೊಂಡು ಬಂದು ಇಲ್ಲಿಗೆ ಹಾಕುತ್ತೀರಿ. ಇದು ಸರಿಯಲ್ಲ ; ಸರಿಯಾದವರನ್ನು, ವಿಷಯ ತಿಳಿದುಕೊಂಡಿರುವವರನ್ನು ನೇಮಕ ಮಾಡಬೇಕು. ಆದರೆ ಈಗಿರುವವರ ಸ್ವಭಾವವನ್ನು ನೋಡಿದರೆ ಅವರನ್ನು ಮೆಂಟಲ್ ಆಸ್ಪತ್ರೆಗೆ ಕಳುಹಿಸಬೇಕೆಂದು ಕಾಣುತ್ತದೆ.

(ಶ್ರೀ ಎಂ. ಎಸ್. ಕೃಷ್ಣನ್)

ಇಂತಹ ಜಾಗಕ್ಕೆ ಲೇಬರ್ ವೆಲ್‌ಫೇರ್‌ನಲ್ಲಿ ಹೌಟ್‌ಲುಕ್ ಇರುವವರನ್ನು ನೇಮಕ ಮಾಡಬೇಕು. ಇಲ್ಲದಿದ್ದರೆ ಬಹಳ ಕಷ್ಟವಾಗುತ್ತದೆ. ಏಕೆಂದರೆ Industrial law is different from Civil Law. It has got wider repurcussions on the society than the civil law. ಆದಕಾರಣ ಕಾರ್ಮಿಕರ ಬಗ್ಗೆ ಸಹಾನುಭೂತಿ ಇರುವವರನ್ನು ನೇಮಕ ಮಾಡಬೇಕು. ನಾಳೆ ಏನಾದರೂ ತಾವು ಎಕ್ಸ್ ಪೋಲೀಸ್ ಕಮೀಷನರ್ ಆಗಿದ್ದ ಶ್ರೀಮಾನ್ ಕೆ. ಜಿ. ರಾಮಣ್ಣ ಅಂತಹವರನ್ನು ಇದಕ್ಕೆ ನೇಮಕ ಮಾಡಿದರೆ ಏನು ಗತಿಯಾಗುತ್ತದೋ ಗೊತ್ತಿಲ್ಲ. ಆದ ಕಾರಣ ಒಳ್ಳೆಯವರನ್ನು ನೋಡಿ ನೇಮಕ ಮಾಡಬೇಕು. ಮತ್ತು ಈಗಿರುವವರನ್ನು ತಾವು ಕರೆಸಿ ಮಾತನಾಡಬೇಕು.

ಇನ್ನು ಕೋರ್ಟ್ಸ್ ವಿಷಯ ಮಾತನಾಡುವಾಗ ಕೆಲವು ಅಧಿಕಾರಿಗಳನ್ನು ಸಿವಿಲ್ ಕೋರ್ಟ್ ಮ್ಯಾಜಿಸ್ಟ್ರೇಟ್‌ಗೆ ಕೊಡಲಾಗಿದೆ. ಪೇಮೆಂಟ್ ಆಫ್ ವೇಜಸ್ ಆಕ್ಟ್ ಪ್ರಕಾರ ಕೆಲವು ಅಥಾರಿಟಿಗಳನ್ನು ಸಿವಿಲ್ ಕೋರ್ಟಿನ ಮ್ಯಾಜಿಸ್ಟ್ರೇಟ್‌ಗೆ ಕೊಟ್ಟಿದ್ದೀರಿ. ಇದರಿಂದ ಕಾರ್ಮಿಕರು ತೊಂದರೆ ಅನುಭವಿಸಬೇಕಾಗಿದೆ. ಇವರಿಗೆ ವಿಷಯಗಳು ಸರಿಯಾಗಿ ಗೊತ್ತಿಲ್ಲದಿರುವುದರಿಂದ ಕೇಸ್‌ಗಳು ಜಾಗ್ರತೆ ತೀರ್ಮಾನವಾಗುತ್ತಿಲ್ಲ. ಮಂಡ್ಯದಲ್ಲಿ ಒಂದು ಕೇಸನ್ನು ಸಿವಿಲ್ ಕೋರ್ಟಿಗೆ ರೆಫರ್ ಮಾಡಲಾಯಿತು. ಯಾವುದೋ ಒಂದು 20 ರೂಪಾಯಿಗಳನ್ನು ಡಿಡಕ್ಟ್ ಮಾಡಿದ ಬಗ್ಗೆ ತೀರ್ಮಾನ ಮಾಡಲು ಅವರಿಗೆ ವಹಿಸಲಾಯಿತು. ಆ ಬಗ್ಗೆ ಮ್ಯಾಜಿಸ್ಟ್ರೇಟ್ ಅವರು ಏನು ಹೇಳುತ್ತಾರೆ ಎಂದರೆ ಅದು ವೇಜಸ್ ಎನ್ನುವುದು ಗೊತ್ತು, ಆದರೆ Whether it becomes part of basic wage or not we cannot decide ಎಂದು ಹೇಳುತ್ತಾರೆ. ಮುಖ್ಯವಾಗಿ ಇಂಡಸ್ಟ್ರಿಯಲ್ ಟ್ರಿಬ್ಯೂನಲ್ ವಿಷಯಗಳು ಸರಿಯಾಗಿ ಅವರಿಗೆ ಗೊತ್ತಿಲ್ಲದಿರುವುದರಿಂದ ಕಾರ್ಮಿಕರಿಗೆ ಅನ್ಯಾಯವಾಗಬಹುದು ಎಂದು ಹೇಳುತ್ತೇನೆ. ಈ ದೃಷ್ಟಿಯಿಂದ ಈ ಅಥಾರಿಟೀಸನ್ನು ಟ್ರಿಬ್ಯೂನಲ್ ಕೋರ್ಟಿಗೆ ಮತ್ತು ಲೇಬರ್ ಕೋರ್ಟಿಗೆ ಕೊಡುವುದು ಒಳ್ಳೆಯದೆಂದು ಹೇಳುತ್ತೇನೆ.

ಇನ್ನು ಈ ಇಲಾಖೆಯ ಬಗ್ಗೆ ಒಂದು ವಿಷಯ ಹೇಳಬೇಕಾಗಿದೆ. ಈ ಇಲಾಖೆಯಲ್ಲಿ Shops and Commercial Estblishment Inspectors ಎಂದು ಏನು ಕೆಲಸ ಮಾಡುತ್ತಿದ್ದಾರೆ, ಅವರುಗಳು ತಮಗೆ ಪ್ರಮೋಷನ್ಸ್‌ಗೆ ಅವಕಾಶ ಇಲ್ಲ ಎಂದು ಹೇಳುತ್ತಿದ್ದಾರೆ. ಅವರು ಸರ್ಕಾರಕ್ಕೂ ಈ ಬಗ್ಗೆ ತಿಳಿಸಿರಬಹುದು ; ಅವರು ಕೇಳತಕ್ಕದ್ದು ಬಹಳ ಸಮಂಜಸವಾಗಿದೆ. ಈಗ ಬಿ. ಇ. ಎಲ್., ಎಚ್. ಎಂ. ಟಿ. ಮುಂತಾದ ದೊಡ್ಡ ದೊಡ್ಡ ಕಾರ್ಖಾನೆಗಳಲ್ಲಿ ಲೇಬರ್ ಆಫೀಸರ್ ಎಂದು ಕೆಲವರನ್ನು ನೇಮಕ ಮಾಡಿಕೊಳ್ಳುತ್ತಿದ್ದಾರೆ. ಈ ರೀತಿ ಕಾರ್ಖಾನೆಯ ಮಾಲೀಕರೇ ನೇಮಕ ಮಾಡಿಕೊಳ್ಳುವುದಕ್ಕೆ ಬದಲಾಗಿ, ಕಾರ್ಮಿಕ ಇಲಾಖೆಯವರೇ ಏತಕ್ಕೆ ನೇಮಕ ಮಾಡಬಾರದು ? ಈ ಬಗ್ಗೆ ಒಂದು ಶಾಸನವನ್ನು ಏತಕ್ಕೆ ತರಬಾರದು ? ಈ ರೀತಿ ಇಲಾಖೆಯವರೇ ನೇಮಕ ಮಾಡಿದರೆ Shops and Commercial Establishment Inspectors ಎಂದು ಏನು ಕೆಲಸ ಮಾಡುತ್ತಿದ್ದಾರೆ, ಅವರಿಗೂ ಸಹ ಪ್ರಮೋಷನ್ಸ್ ಸಿಗುವುದಕ್ಕೆ ಅವಕಾಶವಾಗುತ್ತದೆಂದು ಹೇಳುತ್ತೇನೆ. ಆದಕಾರಣ ಇದಕ್ಕೆ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಈ ಇಲಾಖೆಯಲ್ಲಿ ಸ್ಟಾಟಿಸ್ಟಿಕಲ್ ಸೆಕ್ಷನ್ ಎಂದು ಒಂದು ಸೆಕ್ಷನ್ ಇರಬೇಕು ; ಇಲ್ಲದಿದ್ದರೆ ನಮಗೆ ಬೇಕಾದಂಥ ಅಂಕಿಅಂಶಗಳು ಸಿಗುವುದು ಕಷ್ಟವಾಗುತ್ತದೆ. ಕೆಲವು ಸಲ ಇಲಾಖೆಯವರಿಗೇ ಸಿಗುವುದಿಲ್ಲ. ಮೊದಲು ಈ ಇಲಾಖೆಯಲ್ಲಿ ವೆಂಕೋಬರಾವ್ ಎನ್ನುವವರು ಇದ್ದಾಗ ಅಂಕಿಅಂಶಗಳನ್ನೆಲ್ಲಾ ಕಲೆಕ್ಟ್ ಮಾಡುತ್ತಿದ್ದರು. ಆದರೆ ಈಗ ಅವರು ಮಾನ್ಯ ಆರ್ಥಿಕ ಮಂತ್ರಿಗಳ ಪರ್ಸನಲ್ ಅಸಿಸ್ಟೆಂಟ್ ಆಗಿರುವುದರಿಂದ ಆ ಕೆಲಸವೂ ಸರಿಯಾಗಿ ಆಗುತ್ತಿಲ್ಲ ; ಒ. ಒ. ಡಿ. ಯಾಗಿ ಕಳೆದ ಹತ್ತು ವರ್ಷಗಳಿಂದ ಅವರು ಮಂತ್ರಿಗಳ ಹತ್ತಿರವೇ ಕೆಲಸ ಮಾಡುತ್ತಿದ್ದಾರೆ. ಆದರೆ ಅವರ ಕೇಡರ್ ಇರುವುದು ಲೇಬರ್ ಡಿಪಾರ್ಟ್‌ಮೆಂಟಿನಲ್ಲಿ. ಬೇಕಾಗಿದ್ದರೆ ಅವರ ಸರ್ವೀಸನ್ನು ಪೂರ್ತಿಯಾಗಿ ಸೆಕ್ರೆಟೇರಿಯಟ್‌ಗೆ ತೆಗೆದುಕೊಂಡು ಬಿಟ್ಟರೆ ಲೇಬರ್ ಡಿಪಾರ್ಟ್‌ಮೆಂಟಿನಲ್ಲಿ ಒಂದು ಜಾಗ ಖಾಲಿಯಾಗಿ ಬೇರೆಯವರಿಗೆ ಅವಕಾಶ ಸಿಗುತ್ತದೆ. ಈಗ ಲೇಬರ್ ವೆಲ್‌ಫೇರ್ ಫಂಡ್ ಎಂದು ಕಲೆಕ್ಟ್ ಮಾಡಲಾಗುತ್ತಿದೆ. ಈ ಹಣದಿಂದ ಒಂದು ಒಳ್ಳೆಯ ಲೈಬ್ರರಿಯನ್ನು ಪ್ರಾರಂಭ ಮಾಡಿದರೆ It would be useful for all trade unionists. ಆದ್ದರಿಂದ ಲೈಬ್ರರಿಯಲ್ಲಿ ಟ್ರೇಡ್ ಯೂನಿಯನ್‌ಗೆ ಸಂಬಂಧಪಟ್ಟ ಎಲ್ಲ ಪುಸ್ತಕಗಳನ್ನು ಇಡಬೇಕು. ಆಗ ಟೆಕ್ಸ್‌ಟೈಲ್

ಇಂಡಸ್ಟ್ರಿ ಬಗ್ಗೆಯಾಗಲೀ ಅಥವಾ ಬೇರೆ ಇಂಡಸ್ಟ್ರಿಗಳ ಬಗ್ಗೆಯಾಗಲೀ ಸ್ಟಡೀ ಮಾಡುವುದಕ್ಕೆ ಅವಕಾಶವಿರುತ್ತದೆ. ಜೊತೆಗೆ We have to be technically equipped both in law as well as in Statistics. ಆದಕಾರಣ ಇದಕ್ಕೆ ಅವಕಾಶ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು The housing of industrial tribunals is also an important thing. ಈಗ ಇದು ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡ್ ಕಚೇರಿಯ ಹಿಂದೆ ಒಂದು ಮನೆಯಲ್ಲಿದೆ. ಆ ಮನೆಯ ಹತ್ತಿರವೇ ಒಂದು ಸ್ಕೂಲ್ ಇರುವುದರಿಂದ ಪ್ರತಿದಿನ 11 ಗಂಟೆಗೆ ಸರಿಯಾಗಿ ವಿದ್ಯಾರ್ಥಿಗಳ ಪ್ರಾರ್ಥನೆ ಪ್ರಾರಂಭವಾಗುತ್ತದೆ. ಇದರಿಂದ ಪ್ರಿಸೈಡಿಂಗ್ ಆಫೀಸರ್ ಅವರು ತಮ್ಮ ಕೆಲಸ ಮಾಡುವುದಕ್ಕೆ ತೊಂದರೆಯಾಗುತ್ತಿದೆ. ಅದು ಬಹಳ ಗಲಾಟೆ ಜಾಗವಾದ್ದರಿಂದ ಅದಕ್ಕೆ ಬೇರೆ ಒಂದು ಜಾಗವನ್ನು ಮಾಡಿಕೊಡಬೇಕು. ಇಂದು ಬೇರೆ ಕೋರ್ಟ್‌ಗಳೆಲ್ಲಾ ಒಂದೇ ಕಡೆ ಇರುವುದರಿಂದ, ಅದೇ ರೀತಿ ಈ ಲೇಬರ್ ಕೋರ್ಟ್ ಮತ್ತು ಟ್ರಿಬ್ಯುನಲ್ಸ್ ಒಂದೇ ಕಡೆ ಇರುವಂತೆ ನೋಡಿಕೊಳ್ಳಬೇಕು. ಈಗ ಮಂಡ್ಯದಲ್ಲಿ ಒಂದು ಲೇಬರ್ ಕೋರ್ಟ್ ಇದೆ. ಅಲ್ಲಿ District Judge is the Labour Court Presiding Officer. The cases gets mixed up with other cases because the District Judge as not a labour court judge. He has to deal with other matters also. ಇದರಿಂದ ಪ್ರಶ್ನೆಗಳ ಜಾಗ್ರತೆ ಇತ್ಯರ್ಥವಾಗುತ್ತಿಲ್ಲವೆಂಬುದು ಗೊತ್ತಾಗಿದೆ. ಆದಕಾರಣ ಆ ಕೋರ್ಟ್ ಬೆಂಗಳೂರಿಗೆ ಬರುವ ಹಾಗೆ ಮಾಡಿದರೆ ಕೇಸ್‌ಗಳು ಜಾಗ್ರತೆ ಇತ್ಯರ್ಥವಾಗುತ್ತದೆ ಎಂದು ಕಾಣುತ್ತದೆ.

ಇನ್ನು ನ್ಯಾಯಬೆಲೆ ಅಂಗಡಿಗಳ ವಿಚಾರ ಬಹಳ ಮುಖ್ಯವಾದುದು. ಇಂದು ಎಲ್ಲ ಸಾಮಾನುಗಳ ಬೆಲೆಗಳು ಹೆಚ್ಚುತ್ತಿರುವುದರಿಂದ ನ್ಯಾಯಬೆಲೆ ಅಂಗಡಿಗಳ ಅವಶ್ಯಕತೆ ಬಹಳವಾಗಿದೆ. ಆದಕಾರಣ ಎಲ್ಲ ಕಾರ್ಖಾನೆಗಳ ಮಾಲೀಕರು ನ್ಯಾಯಬೆಲೆ ಅಂಗಡಿಗಳನ್ನು ತೆರೆದರೆ ಕಾರ್ಮಿಕರಿಗೆ ಅನುಕೂಲವಾಗುತ್ತದೆ. ಕಳೆದ ವರ್ಷ 132 ಕೋ ಆಪರೇಟಿವ್ ಸೊಸೈಟಿಗಳು ಇವೆ ಎಂದು ಹೇಳಿದ್ದಿರಿ. ಈ ವರ್ಷವೂ ಅಷ್ಟೇ ಇವೆ. ಒಂದೂ ಸಹ ಜಾಸ್ತಿಯಾಗಿಲ್ಲ. ಇನ್ನು ಮುಂದೆ ಎಲ್ಲ ಕಾರ್ಖಾನೆಗಳ ಮಾಲೀಕರೂ ಸಹ ಕಡ್ಡಾಯವಾಗಿ ನ್ಯಾಯಬೆಲೆ ಅಂಗಡಿಗಳನ್ನು ತೆರೆಯುವಂತೆ ತಿಳಿಸಬೇಕು. ಆ ಮೂಲಕ ಕಾರ್ಮಿಕರಿಗೆ ಕಡಿಮೆ ಬೆಲೆಗೆ ಸಾಮಾನುಗಳು ಸಿಗುವುದಕ್ಕೆ ಅವಕಾಶ ಮಾಡಿಕೊಡಬೇಕು.

ಇನ್ನು ಪ್ಲಾನ್‌ಟೇಷನ್ ಬಗ್ಗೆ ಒಳ್ಳೆಯ ಕೆಲಸ ಮಾಡಿದ್ದೀರಿ. ಅದಕ್ಕಾಗಿ ಧನ್ಯವಾದಗಳನ್ನು ಅರ್ಪಿಸಬೇಕಾಗಿದೆ.

ಪ್ಲಾನ್‌ಟೇಷನ್ ಬಗ್ಗೆ ಒಳ್ಳೆಯ ಕೆಲಸವನ್ನು ಮಾಡಿದ್ದಾರೆ. ಅದೇ ರೀತಿ ಎಲ್ಲಾ ಕಡೆಗಳಲ್ಲಿಯೂ ಮಾಡಬೇಕು ಎಂದು ನಾನು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ.

ಮೂಲಭೂತವಾಗಿ ಕಾರ್ಮಿಕರ ಸಮಸ್ಯೆಯನ್ನು ಬಗೆಹರಿಸುವುದು ಮಾತ್ರವಲ್ಲ. ಇದು ಪ್ರೋಗ್ರೆಸ್ ಔಟ್ ಲುಕ್ ಇರುವ ಸರ್ಕಾರ ಎಂದು ಹೇಳುತ್ತಾರೆ. ಆದ್ದರಿಂದ ಈ ಸರ್ಕಾರದವರು ಕಾರ್ಮಿಕರ ಬಗ್ಗೆ ಶಾಸನಗಳನ್ನು ಇನಿಷಿಯೇಟ್ ಮಾಡುವುದು ಬಹಳ ಮುಖ್ಯ. ನನ್ನ ಅನುಭವದಲ್ಲಿ ಯಾವ ಲೆಜಿಸ್ಲೇಷನ್ ಕೂಡ ಇನಿಷಿಯೇಟ್ ಆಗಿಲ್ಲ. ಇಂಡಸ್ಟ್ರಿಯಲ್ ರಿಲೇಷನ್ ಬಿಲ್ ಕೂಡ ಇಂಪ್ಲಿಮೆಂಟ್ ಮಾಡಿಲ್ಲ. ಮಹಾತ್ಮ ಗಾಂಧೀಜಿಯವರ ಬರ್ತ್ ಡೇಗೆ ರಜಾ ಕೊಡುವುದು ಇನ್ನೂ ಕೆಲವು ಮುಖ್ಯ ಹಬ್ಬ ಹರಿದಿನಗಳಲ್ಲಿ ರಜಾ ಕೊಡುವುದನ್ನು ಕೂಡ ಮಾಡಿಲ್ಲ. ಈ ಇಂಡಸ್ಟ್ರಿಯಲ್ ರಿಲೇಷನ್ ಬಿಲ್ ಯಾವಾಗ ಬರುತ್ತದೋ ಗೊತ್ತಿಲ್ಲ. ಅದು ಬೇಗ ಬಂದರೆ ಇಂಟರ್ ಯೂನಿಯನ್ ರೈವಲರಿ ಹೋಗುತ್ತದೆ. ಆದ್ದರಿಂದ ಇದೂ ಬೇಗ ತರಬೇಕು ಎಂದು ನಾನು ಹೇಳುತ್ತೇನೆ.

ಇನ್ನೊಂದು ವಿಷಯ ಏನೆಂದರೆ ಇಂಡಸ್ಟ್ರಿಯಲ್ ವರ್ಕರ್ಸ್‌ಗೆ ಸಂಬಂಧಪಟ್ಟ ಹಾಗೆ ಕವರೇಜ್ ಆಫ್ ವರ್ಕ್‌ಮನ್ ಎಮಾಲ್ಯಮೆಂಟ್ಸ್ 750 ರೂಪಾಯಿಗಳು ಇರಬೇಕು. ಇದನ್ನು ಮಾಡಿದರೆ ಒಂದು ಹೆಜ್ಜೆ ಮುಂದೆ ಹೋಗುತ್ತಾರೆ ಎಂದು ಹೇಳಬಹುದು. ಇವುಗಳನ್ನು ಮಾಡುವುದಕ್ಕೆ ಸಾಧ್ಯವಿದೆ. ಇದರಲ್ಲಿ ಕಾಂಟ್ರವರ್ಸಿ ಬರುವುದಿಲ್ಲ. ಅದನ್ನು ಮಾಡಬೇಕು.

ಆ ಮೇಲೆ ಅಪೀಲ್ ಓವರ್ ಟ್ರಿಬ್ಯುನಲ್ ಜಡ್ಜ್‌ಮೆಂಟ್ ಬಗ್ಗೆ ಹೈಕೋರ್ಟಿಗೆ ರಿಟ್ ಪಿಟಿಷನ್ ಹಾಕುವುದಕ್ಕೆ 100 ರೂಪಾಯಿಗಳನ್ನು ಕೊಡಬೇಕು. ಇದು ಇಂಡಿವಿಜುಯಲ್ಸ್‌ಗೆ ಬಹಳ ಕಷ್ಟವಾಗುತ್ತದೆ. ಇದನ್ನು 100 ರೂಪಾಯಿಗಳಿಂದ 25 ರೂಪಾಯಿಗಳಿಗೆ ಇಳಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಇದೂ ಅಲ್ಲದೆ ಹೈಕೋರ್ಟಿಗೆ ಅಪೀಲ್ ಹೋಗಬೇಕಾದರೆ ಲೇಬರ್ ಅಪಲೇಟ್

(ಶ್ರೀ ಎಂ. ಎಸ್. ಕೃಷ್ಣನ್)

ಟ್ರಿಬ್ಯುನಲ್ ಸ್ಪೆಷಲ್ ಆಗಿ ಅದಕ್ಕೋಸ್ಕರ ಇರಬೇಕು ಎನ್ನುವ ಪ್ರಶ್ನೆ ಬಂದಿದೆ. ಆದ್ದರಿಂದ ಅದರ ಬಗ್ಗೆ ಸರ್ಕಾರದವರು ತಮ್ಮ ಗಮನವನ್ನು ಹರಿಸಿ ಸರಿಯಾದ ಲೆಜಿಸ್ಲೇಷನ್ ತರಬೇಕು ಎಂದು ನಾನು ತಮ್ಮನ್ನು ಕೇಳಿಕೊಳ್ಳುತ್ತೇನೆ.

ಇಂಡಸ್ಟ್ರಿಯಲ್ ರಿಲೇಷನ್ ಕಮಿಟಿಯನ್ನು ಮಾಡಿದ್ದಾರೆ, ಅದನ್ನು ಕರೆದೇ ಇಲ್ಲ. ಇವ್ಯಾಲ್ಯುಯೇಷನ್ ಇಂಪ್ಲಿಮೆಂಟೇಷನ್ ಕಮಿಟಿಯಲ್ಲಿ ಡಿಸ್‌ಕಸ್ ಮಾಡಬೇಕಾದ ಅನೇಕ ಸಮಸ್ಯೆಗಳು ಇವೆ. ಅವುಗಳನ್ನು ಬಗೆಹರಿಸಬೇಕಾಗಿದೆ. ಆದ್ದರಿಂದ ಆ ಕಮಿಟಿಯನ್ನು ತಕ್ಷಣ ಕರೆಯಬೇಕು.

ಎಂಪ್ಲಾಯೀಸ್ ಉದ್ಧಟತನದಿಂದ ವರ್ತಿಸಿದರೆ ಅವರಿಗೆ ಸರಿಯಾದ ಪಾಠವನ್ನು ಕಲಿಸುವಂತಹ ವರ್ತನೆ ಮಾಡಬೇಕು. ಯಾರು ತಮ್ಮ ಮಾತನ್ನು ಕೇಳುವುದಿಲ್ಲ ಅವರಿಗೆ ಪಾಠವನ್ನು ಕಲಿಸುವುದಕ್ಕೆ ತಯಾರು ಇರಬೇಕು. ಮಾನ್ಯ ಮಂತ್ರಿಗಳು ಉಕ್ಕಿನಂತಹ ಮನುಷ್ಯರಾಗಬೇಕು. ಯಾರು ದುಂಡಾವರ್ತನೆ ಮಾಡುತ್ತಾರೆಯೋ ಅಂಥವರ ಮೇಲೆ ಉಗ್ರ ಕ್ರಮ ತೆಗೆದುಕೊಳ್ಳಬೇಕು. ಈ ಕಾರ್ಮಿಕ ಇಲಾಖೆಯಲ್ಲಿ ಒಂದು ಹೊಸ ಓರಿಯೆಂಟೇಷನ್ ಮಾಡಿ ರೀ ಆರ್ಗನೈಜ್ ಮಾಡಬೇಕು ಕಾರ್ಮಿಕರ ಡಿಸ್‌ಪ್ಯೂಟ್‌ಗಳು ಡಿಲೇ ಆಗದಂತೆ ನೋಡಿಕೊಳ್ಳಬೇಕು, ಈ ಇಲಾಖೆಗೆ ಒಂದು ಹೊಸ ಚೇತನವನ್ನುಂಟು ಮಾಡಬೇಕು. ಕಾರ್ಮಿಕರ ಬಗ್ಗೆ ಹೊಸ ಲೆಜಿಸ್ಲೇಷನ್ ಇನಿಷಿಯೇಟ್ ಮಾಡಬೇಕು. ಈ ಆಧಾರದ ಮೇಲೆ ಈ ಇಲಾಖೆ ಮುಂದುವರಿದರೆ ತಮಗೆ ಒಳ್ಳೆಯ ಹೆಸರು ಬರುತ್ತದೆ ಎಂದು ಹೇಳಿ ಮಾನ್ಯ ಅಧ್ಯಕ್ಷರು ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಕೆ. ಶ್ರೀರಾಮುಲು (ಗಾಂಧಿನಗರ).—ಮಾನ್ಯ ಅಧ್ಯಕ್ಷರೇ ಮಾನ್ಯ ಕಾರ್ಮಿಕ ಸಚಿವರು ಈ ಸಭೆಯ ಮುಂದೆ ಇಟ್ಟಿರತಕ್ಕ ಬೇಡಿಕೆಗಳನ್ನು ಒಪ್ಪುತ್ತಾ ಕೆಲವು ವಿಷಯಗಳನ್ನು ಹೇಳಬೇಕೆಂದು ನಾನು ಇಚ್ಛೆಪಡುತ್ತೇನೆ.

ಮೊದಲನೆಯದಾಗಿ ಕಳೆದ ವರ್ಷ ಈ ಬೇಡಿಕೆಗೆ ಎಷ್ಟು ಹಣವನ್ನು ಕೇಳಿದ್ದರೋ ಅದಕ್ಕಿಂತ ಹೆಚ್ಚು ಹಣವನ್ನು ಈ ವರ್ಷ ಕೇಳಿಲ್ಲ. ಇದಕ್ಕೆ ಕಾರಣ ಏನು ಎಂಬುದು ನನಗೆ ಗೊತ್ತಾಗಲಿಲ್ಲ. ಕಾರ್ಮಿಕರ ಇಲಾಖೆಯಲ್ಲಿ ವಿಶೇಷವಾಗಿ ಕೆಲಸಗಳು ಏನಾದರೂ ನಡೆಯಬೇಕಾದರೆ, ಕಾರ್ಮಿಕ ಇಲಾಖೆಯಲ್ಲಿ ಮಾಡಬೇಕಾದಂತಹ ಕೆಲಸಗಳಿಗೆ ಹೆಚ್ಚಿನ ಬೇಡಿಕೆ ಬಂದರೆ ಮಾತ್ರ ಕಾರ್ಮಿಕ ಸಮಾಜದಲ್ಲಿರತಕ್ಕವರಿಗೆ ಸರ್ಕಾರದವರು ಏನು ಭರವಸೆಯನ್ನು ಕೊಟ್ಟಿದ್ದಾರೆ ಅದರಲ್ಲಿ ಸ್ವಲ್ಪ ಮಟ್ಟಿಗೆ ಕಾರ್ಯಗತ ಮಾಡುವುದಕ್ಕೆ ಸಾಧ್ಯವಾಗುತ್ತದೆ ಎನ್ನುವ ದೃಷ್ಟಿಯಿಂದ ಈಗ ಈ ಬೇಡಿಕೆಗೆ ಇಟ್ಟಿರತಕ್ಕ 2 ಕೋಟಿ 90 ಲಕ್ಷ ರೂಪಾಯಿಗಳು ಇದೆ ಇದರಲ್ಲಿ ಹೆಚ್ಚಿನ ವಿಶೇಷವಾದ ಕೆಲಸವನ್ನು ಮಾಡುವುದಕ್ಕಾಗುವುದಿಲ್ಲ. ಆದ್ದರಿಂದ ಬರುವ ವರ್ಷವಾದರೂ ಕೂಡ ಈ ಇಲಾಖೆಯ ಬೇಡಿಕೆಗೆ ಹೆಚ್ಚು ಹಣ ಇರಬೇಕು ಎಂದು ನನ್ನ ಸಲಹೆ.

ನಾನು ಮುಖ್ಯ ವಿಷಯಗಳಿಗೆ ಬರುವುದಕ್ಕೆ ಮೊದಲು ಒಂದು ವಿಷಯವನ್ನು ಪ್ರಸ್ತಾಪ ಮಾಡಬೇಕೆಂದು ಬಯಸುತ್ತೇನೆ. ಅದೇನೆಂದರೆ ಶ್ರೀಮಾನ್ ಕೃಷ್ಣನ್ ಅವರು ಭಾಷಣ ಮಾಡುವಾಗ ಒಂದು ಕಡೆ ತಮ್ಮ ಭಾಷಣದಲ್ಲಿ ಬಹಳ ದೀರ್ಘವಾಗಿ ಪ್ರಸ್ತಾಪ ಮಾಡಿದ್ದಾರೆ. ಅಷ್ಟು ವಿಷಯಗಳನ್ನೂ ನಾನು ಹೇಳುವುದಕ್ಕೆ ಹೋಗುವುದಿಲ್ಲ. ಅವರು ಹೇಳಿರತಕ್ಕಂಥಾ ಕೆಲವು ವಿಷಯಗಳನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಅವರು ಹೇಳಿದರು ಪ್ರತಿಯೊಂದು ಮಿಲ್ ಮಾಲೀಕರು ಗುಲ್ಬರ್ಗ ಚುನಾವಣೆ ನಡೆಯುವವರೆಗೂ ಕೂಡ ಅಲ್ಲಿರತಕ್ಕ ತಕರಾರುಗಳನ್ನು ಇತ್ಯರ್ಥ ಮಾಡುವ ಮಾತುಕತೆಗೆ ಬರುವುದಿಲ್ಲ ಎಂದು ಹೇಳಿದರು. ಅವರು ಯಾವುದೇ ದೃಷ್ಟಿಯಿಂದ ಹೇಳಿರಲಿ ಅದು ಪ್ರಜಾಪ್ರಭುತ್ವ ದೃಷ್ಟಿಯಿಂದ ಸರಿಯಲ್ಲ ಎಂದು ಹೇಳಿದರು. ಅದನ್ನು ನಾನು ಪೂರ್ಣವಾಗಿ ಒಪ್ಪುತ್ತೇನೆ. ಆದರೆ ಇಂಥಾ ವಿಷಯಗಳನ್ನು ಅವರು ಅಲ್ಲದೇ ಸಂಘಗಳನ್ನು ಇಟ್ಟು ನಡೆಸಿದ್ದಾರೆಯೋ ಇಲ್ಲವೇ ಎಂಬುದನ್ನು ಪರಿಶೀಲನೆ ಮಾಡುವುದಾದರೆ ಅವರು ಹೇಳಿದಂತಹ ಮಾತುಗಳು ಸಮಯೋಚಿತವಾಗುತ್ತವೆಯೋ ಎಂಬುದನ್ನು ಪರಿಶೀಲನೆ ಮಾಡಬೇಕಾಗಿದೆ. ಈಗ ಉದಾಹರಣೆಗೆ ಹೇಳುವುದಾದರೆ ಬೊಂಬಾಯಿನ ಹತ್ತಿಗಿರಣಿ ಕಾರ್ಮಿಕರು ಸುಮಾರು 45 ದಿವಸಗಳು ಸ್ಟ್ರೈಕ್ ಮಾಡಿದರು. ಅಲ್ಲಿ ಕಾರ್ಮಿಕರು ಪ್ರತಿಯೊಬ್ಬರು 600—800 ರೂಪಾಯಿಗಳಂತೆ ಸುಮಾರು 2 ಲಕ್ಷ ಜನ ಹಣವನ್ನು ಕಳೆದುಕೊಂಡರು. ಸುಮಾರು 15 ಕೋಟಿ ರೂಪಾಯಿಗಳ ವೇತನ ಹೋಯಿತು. 75 ಕೋಟಿ ರೂಪಾಯಿಗಳ ಉತ್ಪಾದನೆ ಹೋಯಿತು. ಆದರೆ ಇವರು ಸಾಧನೆ ಮಾಡಿದ್ದು ಏನು ?

ಶ್ರೀ ಎಂ. ಎಸ್. ಕೃಷ್ಣನ್.—ಬೊಂಬಾಯಿನಲ್ಲಿ ನಡೆದಂತಹ ವಿಷಯದಲ್ಲಿ ನನಗೆ ತಿಳಿದ ಮಟ್ಟಿಗೆ ಏನು ಅಗ್ರಿಮೆಂಟ್ ಐ. ಎನ್. ಟಿ. ಯು. ಸಿ. ಕಾರ್ಮಿಕರ ವಿರುದ್ಧ ಆಗಿತ್ತು, ಅದಕ್ಕಾಗಿ ಕಾರ್ಮಿಕರು ಹೋರಾಟ ನಡೆಸಬೇಕಾಯಿತು. 44 ದಿವಸಗಳಲ್ಲಿ ಅಗ್ರಿಮೆಂಟ್ ಮುರಿದು ಹೋಯಿತು. ಕಾರ್ಮಿಕರಿಗೆ ಅನುಕೂಲವಾಯಿತು. ಅವರಿಗೆ ಅನಾನುಕೂಲವೇನೂ ಆಗಿಲ್ಲ.

ಶ್ರೀ ಕೆ. ಶ್ರೀರಾಮುಲು.—ಶ್ರೀಮಾನ್ ಕೃಷ್ಣನ್ ಅವರು ಕಾರ್ಮಿಕರ ನೀತಿಯ ಬಗ್ಗೆ ಮಾತನಾಡಿದ್ದಾರೆ. ನಾನು ಒಂದು ವಿಷಯವನ್ನು ಹೇಳುತ್ತೇನೆ. ಐ. ಎನ್. ಟಿ. ಯು. ಸಿ. ಕಾರ್ಮಿಕರು ಏನು ಒಪ್ಪಿಕೊಂಡಿದ್ದಾರೆ ಎಂದರೆ 1975 ನೇ ಜನವರಿ ತಿಂಗಳಿಂದ 4 ರೂಪಾಯಿ ಹೆಚ್ಚಿಗೆ ಕೊಡಬೇಕು ಎನ್ನುವ ಬಗ್ಗೆ ಒಪ್ಪಿಕೊಂಡಿದ್ದಾರೆ. ಇದನ್ನು ಸಾಧನೆ ಮಾಡುವುದಕ್ಕೆ 45 ದಿವಸಗಳು ಸ್ಟ್ರೈಕ್ ಮಾಡಿದ್ದಾರೆ. 75 ಕೋಟಿ ರೂಪಾಯಿ ಉತ್ಪಾದನೆ ಲುಕ್ಸಾನಾಗಿದೆ. 12 ಕೋಟಿ ರೂಪಾಯಿಗಳು ಕಾರ್ಮಿಕರಿಗೆ ನಷ್ಟವಾಗಿದೆ. ಆದರೆ ಇವರು 4 ರೂಪಾಯಿ ಹೆಚ್ಚು ವೇತನ ಮಾತ್ರ ಪಡೆದಿದ್ದಾರೆ. ಅದಕ್ಕಿಂತ 40 ರೂಪಾಯಿ ಹೆಚ್ಚು ವೇತನವನ್ನಾದರೂ ಪಡೆದಿದ್ದರೆ ಪರವಾಯಿಲ್ಲ ಎಂದು ಹೇಳಬಹುದಾಗಿತ್ತು. ಬದಲು ಶದಲ್ಲಿ 75 ಕೋಟಿ ರೂಪಾಯಿಗಳನ್ನು ಲುಕ್ಸಾನು ಮಾಡಿದ್ದಾರೆ. ಇಂಥಾ ಪ್ರಯತ್ನವನ್ನು ಮಾಡುವುದಾದರೆ ಇವರನ್ನು ಹೇಗೆ ದೇಶಪ್ರೇಮಿಗಳು ಎಂದು ಕರೆಯುವುದಕ್ಕೆ ಸಾಧ್ಯ ?

ಶ್ರೀ ಎಂ. ಎಸ್. ಕೃಷ್ಣನ್.—ಅಲ್ಲಿ ಕಾರ್ಮಿಕರು ತೀರ್ಮಾನ ಮಾಡಿದ್ದಾರೆ. ಅಲ್ಲಿ ಚುನಾವಣೆಯಲ್ಲಿ ರೋಜಾದೇಶಪಾಂಡೆಯವರನ್ನು ಗೆಲ್ಲಿಸಿದ್ದಾರೆ. ನಿಮ್ಮವರನ್ನು ಗೆಲ್ಲಿಸಿಲ್ಲ. ಜನ ಬೆಂಬಲ ಕೊಟ್ಟರೆ ಸಾಕು.

ಶ್ರೀ ಕೆ. ಶ್ರೀರಾಮುಲು.—ಚುನಾವಣೆಗೋಸ್ಕರ ಗುಲ್ಬರ್ಗಾದಲ್ಲಿ ಮಿಲ್ ಮಾಲೀಕರು ಮಾತುಕತೆಗೆ ಬರಲಿಲ್ಲ ಎಂದು ಹೇಳಿದರು. ಚುನಾವಣೆಯಲ್ಲಿ ಗೆಲ್ಲಬೇಕು ಎನ್ನುವ ದೃಷ್ಟಿಯಿಂದ ಈ ರೀತಿ ಮಾಡಿದರು ಎಂದು ಹೇಳಿದರೆ ಅದನ್ನು ಒಪ್ಪಿಕೊಳ್ಳುವುದಕ್ಕೆ ಮನಸ್ಸು ಇಲ್ಲದಿದ್ದರೂ ಕೂಡ ಅದನ್ನು ಒಪ್ಪಿಕೊಳ್ಳಬೇಕಾಗುತ್ತದೆ.

ಶ್ರೀ ಎಂ. ಎಸ್. ಕೃಷ್ಣನ್.— ಅದು ಸತ್ಯಕ್ಕೆ ದೂರವಾದುದು ನಾನು ಅದನ್ನು ಒಪ್ಪುವುದಕ್ಕೆ ಆಗುವುದಿಲ್ಲ.

ಶ್ರೀ ಕೆ. ಶ್ರೀರಾಮುಲು.—ಅದರ ಬಗ್ಗೆ ನಾನು ಹೆಚ್ಚಿಗೆ ಪ್ರಸ್ತಾಪಮಾಡುವುದಿಲ್ಲ.

MR. DEPUTY SPEAKER.—Frequent interruptions cannot be tolerated. If the hon. member feels that hon. member Sri Sriramulu is committing mistakes, he should have them for himself; and if the hon. member Sri Sriramulu feels that some mistakes have been committed he has to keep them to himself, because in democracy certain mistakes will have to be tolerated. Sri Krishnan had his say in the matter. Now let Sri Sriramulu have his say.

ಶ್ರೀ ಕೆ. ಶ್ರೀರಾಮುಲು.—ನಾನು ಮಾನ್ಯ ಮಂತ್ರಿಗಳಿಗೆ ಹಾಗೂ ಲೇಬರ್ ಕಮಿಷನರ್ ಅವರಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ನೂರಾರು ವರ್ಷಗಳಿಂದಲೂ ಶ್ರಮ ಪಡುತ್ತಿರುವ ಕೆಲವು ಹತ್ತಿಗಿರಣಿಗಳ ನೌಕರರಿಗೆ ಇತರರಂತೆ ಒಳ್ಳೆಯದಾಗಬೇಕು, 60 ರೂಪಾಯಿಗಳವರೆಗೆ ತುಟ್ಟಿಭತ್ಯ ಮತ್ತು ವೇತನ ಪಡೆಯಬೇಕೆಂಬ ದೃಷ್ಟಿಯಿಂದ ಒಂದು ಸಮಿತಿಯನ್ನು ನೇಮಕ ಮಾಡಿದರು. ಅದಕ್ಕಾಗಿ ಅವರಿಗೆ ಮತ್ತೊಮ್ಮೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. 1972ನೇ ಇಸವಿಯಲ್ಲಿಯೇ ನಾನು ಇದರ ಬಗ್ಗೆ ಒಂದು ಖಾಸಗೀ ನಿರ್ಣಯವನ್ನು ತಂದು ಚರ್ಚೆಮಾಡಿದ ಪರಿಣಾಮವಾಗಿ ಈ ಸರ್ಕಾರ ಆ ಸಮಿತಿಯನ್ನು ನೇಮಕಮಾಡಲು ಸ್ವಲ್ಪಮಟ್ಟಿಗೆ ನಿಧಾನಮಾಡಿದರೂ ಕೊನೆಗೆ ಒಂದು ಸಮಿತಿಯನ್ನು ನೇಮಕಮಾಡಿದ್ದು ಬಹಳ ಒಳ್ಳೆಯದಾಯಿತು. ಆದರೆ ಕೆಲವು ಕಾರ್ಮಿಕ ವರ್ಗದ ಮುಖಂಡರು ಅಲ್ಲಿನ ನೌಕರರಿಗೆ ತಾತ್ಕಾಲಿಕ ಪರಿಹಾರ ಕೊಡಬೇಕೆಂದೂ ಅದನ್ನು ಒಂದು ತಿಂಗಳೊಳಗೆ ಕೊಡುತ್ತೇವೆಂದು ಹೇಳಿದಮೇಲೆ ಅದರ ಬಗ್ಗೆ ಸರ್ಕಾರದ ಒಪ್ಪಿಗೆ ಪಡೆದಮೇಲೂ ಅಲ್ಲಿಗೆ ಅವರು ಹೋಗಿ ನೌಕರರಿಂದ ಮುಷ್ಕರ, ಗಲಭೆ ಎಬ್ಬಿಸಿ. ಪ್ರೊಸೆಷನ್ ಮಾಡಿಸಿ, ಧಿಕ್ಕಾರಗಳನ್ನು ಕೂಗಿಸಿ ಅನೇಕ ತರಹ ಘರ್ಷಣೆಗಳಿಗೆ ಕೈಹಾಕುವುದೇ ಆದರೆ ಹೇಗೆ? ಸಮಿತಿಯವರಿಗೆ ಇವರು ಹೇಳಬಹುದಾಗಿತ್ತು, ಆ ರೀತಿ ಹೇಳದೆಯೇ ಅಲ್ಲಿ ಹೆಚ್ಚಿಗೆ ಗಲಭೆಯಾಗಿದೆ. ಅಶಾಂತಿ ಮೂಡಿಸಿದ್ದಾರೆ. ಅಲ್ಲಿನ ಆಫೀಸ್ ಬೇರರ್ಸ್‌ಗೆ ಸಸ್‌ಪೆನ್‌ಷನ್ ನೋಟೀಸ್ ಕೊಟ್ಟಿದ್ದಾರೆ. ಯಾರೂ ಗಲಭೆ ಮಾಡ

(ಶ್ರೀ ಕೆ. ಶ್ರೀರಾಮುಲು)

ಬೇಡಿ ಎಂಬುದಾಗಿ ಅಲ್ಲಿಯ ಅಧಿಕಾರಿಗಳು ನೌಕರರಿಗೆ ಸಸ್‌ಪೆನ್‌ಷನ್ ನೋಟೀಸ್ ಕೊಟ್ಟಿದ್ದಾರೆ. ಆದರೆ ಈ ರೀತಿಯಾಗಿ ಗಲಭೆ, ಮುಷ್ಕರ ಹಾಗೂ ಧಿಕ್ಕಾರ ಮಾಡುವವರಿಗೆ ಅಧಿಕಾರಿಗಳಾಗಿರುವವರು ಏನೂ ಮಾಡುವುದಿಲ್ಲ. ಸರ್ಕಾರದ ನೀತಿಯೂ ಹೀಗೆ ಇದೆ. ಕೆಲವು ಸಂದರ್ಭಗಳಲ್ಲಿ ಸರ್ಕಾರದ ನೀತಿಗೇ ವಿರೋಧವಾಗಿ ಕೆಲವು ಅಧಿಕಾರಿಗಳು ವರ್ತಿಸುವುದೂ ಉಂಟು.

ಇನ್ನು ಕಾರ್ಮಿಕ ಇಲಾಖೆಗಳಲ್ಲಿನ ನೀತಿಯ ಬಗ್ಗೆ ಮಾತನಾಡುವುದಾದರೆ ಮಾನ್ಯ ಶ್ರೀ ಕೃಷ್ಣನ್ ಅವರೇ ಮುಖಂಡರಾಗಿರತಕ್ಕ ಎಚ್.ಎಂ.ಟಿ. ಕಾರ್ಖಾನೆಯ ವಿಷಯವನ್ನು ಸ್ವಲ್ಪಮಟ್ಟಿಗೆ ಹೇಳಬೇಕಾಗಿದೆ. ಈ ಕಾರ್ಖಾನೆ ಕೇವಲ ಬೆಂಗಳೂರಿನಲ್ಲಿಯೇ ಇದೆ. ಬೊಂಬಾಯಿನಲ್ಲಿ ಏನೂ ಇಲ್ಲ. ಕಳೆದ ವರ್ಷ ಈ ಕಾರ್ಖಾನೆಯಲ್ಲಿ ನಡೆದ ಗಲಭೆಯ ಬಗ್ಗೆ ಒಂದೆರಡು ಅಂಶಗಳನ್ನು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ಶ್ರೀ ಮಹದೇವನ್ ಎಂಬ ವ್ಯಕ್ತಿ ಅಲ್ಲಿನ ಕಾರ್ಮಿಕನಿಂದ ಘಾಟೆ ಬಿಲ್ಡಿಂಗ್ ಫಂಡಿಗೆ ಎಂದು 10 ರೂಪಾಯಿಗಳನ್ನು ಕೇಳಿದ್ದಕ್ಕೆ ಅವನು ಕೊಡುವುದಿಲ್ಲವೆಂದು ಹೇಳಿದಾಗ ಕಾರ್ಮಿಕ ಮುಖಂಡರಲ್ಲಿ ಕೆಲವರು ಮತ್ತು ಇತರ 20—25 ಜನರು ಸೇರಿಸಿಕೊಂಡು ಅವನನ್ನು ಕೆಳಗೆ ಉರುಳಿಸಿ ಬೂಡ್ಸ್ ಕಾಲಿನಲ್ಲಿ ತುಳಿದಿದ್ದುದರಿಂದ ಅವನು ಆಸ್ಪತ್ರೆಗೆ ಸೇರಬೇಕಾದ ಪ್ರಸಂಗ ಬಂತು. ಅಲ್ಲಿ ಯಾರನ್ನಾದರೂ ಅರೆಸ್ಟ್ ಮಾಡಿದರೆ ಅಲ್ಲ ಯಾರೂ ಕೆಲಸ ಮಾಡುವುದಿಲ್ಲ. ಇದಕ್ಕಾಗಿ ಎಚ್.ಎಂ.ಟಿ ಯಲ್ಲಿ ಮೂರು ಗಂಟೆಕಾಲ ಮುಷ್ಕರವಾಗಿರುವುದು ಎಲ್ಲರಿಗೂ ಗೊತ್ತಿದೆ.

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಸದಸ್ಯರು ಹೇಳಿದ್ದು ವಾಸ್ತವಾಂಶಕ್ಕೆ ದೂರವಾಗಿದೆ. ವಿರುದ್ಧವೂ ಆಗಿದೆ ನನಗೆ ತಿಳಿದಿರುವ ಮಟ್ಟಿಗೆ ಯಾರೋ ಒಬ್ಬರು ಸದಾಶಿವಮೂರ್ತಿ ಎನ್ನುವವರನ್ನು ಹೊರಗಡೆಯಿಂದ ಒಳಗಡೆಗೆ ಟ್ರಾನ್ಸ್‌ಫರ್ ಮಾಡಿಸಿದ್ದಕ್ಕಾಗಿ ಅವಾಗಲೂ ಇನ್ನೊಬ್ಬ ಕಾರ್ಮಿಕನಾಗಿರುವ ಶ್ರೀ ತ್ಯಾಗರಾಜನ್ ಎಂಬುವರಿಗೂ ಹೊಡೆದಾಟವಾಗಿ ಒಂದು ಘರ್ಷಣೆ ನಡೆಯಿತು. ಕೊನೆಕೊನೆಗೆ ಅದೇ ಬಹಳ ದೊಡ್ಡದಾಯಿತು. ಅದ್ದರಿಂದ ಘಾಟೆ ಬಿಲ್ಡಿಂಗ್ ಫಂಡಿಗೂ ಇದಕ್ಕೂ ಏನೂ ಸಂಬಂಧವಿಲ್ಲ ಆ ಒಂದು ಘರ್ಷಣೆಗೆ ನಾನು ಸೇರಿದ್ದೆನೆಂದು ಮಾನ್ಯ ಸದಸ್ಯರು ಹೇಳುವಂಥ ವಿಷಯಕ್ಕೆ ಏನೂ ಸಂಬಂಧವಿಲ್ಲ. ಮಾನ್ಯ ಸದಸ್ಯರಿಗೆ ಯಾರೋ ತಪ್ಪು ತಿಳುವಳಿಕೆಯನ್ನು ಕೊಟ್ಟಿದ್ದಾರೆ. ಅವರು ಅದನ್ನು ಸರಿಯಾಗಿ ಪರೀಕ್ಷೆ ಮಾಡಿ ನಿಜಾಂಶವನ್ನು ಈ ಸಭೆಯಲ್ಲಿ ಹೇಳಬೇಕು.

ಶ್ರೀ ಕೆ. ಶ್ರೀರಾಮುಲು.— ಈ ಸಭೆಯಲ್ಲಿ ನಾನು ಯಾವಾಗ ಮಾತನಾಡಿದರೂ ಕೂಡ ಬಹಳ ಹೆಚ್ಚಿನ ಜವಾಬ್ದಾರಿಯಿಂದ ಮಾತನಾಡುತ್ತೇನೆ. ನಾನು ರಸೀದಿಯನ್ನು ಸಹ ನೋಡಿದ್ದೇನೆ 10 ರೂಪಾಯಿಗಳನ್ನು ಘಾಟೆ ಬಿಲ್ಡಿಂಗ್ ಫಂಡಿಗೆಂದು ವಸೂಲು ಮಾಡಿದ್ದಾರೆ. ರಶೀದಿಯಲ್ಲಿ ಸೈನ್ ಮಾಡಿದ್ದಾರೆ. ನಾನು ಹೇಳುವದಿಷ್ಟೇ ಇಂತಹ ಫಂಡ್‌ಗಳಿಗೆ ಕಾರ್ಮಿಕರಿಂದ ಹಣವನ್ನು ವಸೂಲು ಮಾಡಬೇಕಾದರೆ, ಅದು ಕಾರ್ಖಾನೆಯ ಹೊರಗಡೆ ಇರಬೇಕು. ಕಾರ್ಖಾನೆಯ ಒಳಗೆ ಮಾಡಬಾರದು. ವಸೂಲಾತಿಯಲ್ಲಿ ಯಾರನ್ನೂ ನಿರ್ಬಂಧ ಮಾಡಬಾರದು. ಮೊನ್ನೆ ಮಾನ್ಯ ಶ್ರೀ ತಿಮ್ಮಪ್ಪನವರನ್ನು ಪೋಲೀಸಿನವರು ಹೊಡೆದರು ಎಂಬುದಾಗಿ ಒಂದು ಬಿರುಗಾಳಿಯನ್ನು ಎಬ್ಬಿಸಿದ್ದಾರೆ. ನಿಮಗೆ ಅವರ ಬಗ್ಗೆ ಎಷ್ಟರಮಟ್ಟಿಗೆ ಆಸಕ್ತಿ ಇದೆಯೋ ಅಷ್ಟೇ ಆಸಕ್ತಿ ನಮಗೂ ಇದ್ದೇ ಇದೆ. ಯಾವಾಗ ಒಬ್ಬ ಮನುಷ್ಯನಿಗೆ ಅನ್ಯಾಯವಾಯಿತೋ ಆಗ ಅವನಿಗೆ ನ್ಯಾಯ ದೊರಕಬೇಕು. ಆ ರೀತಿ ನ್ಯಾಯವನ್ನು ದೊರಕಿಸದೆ 15-20 ಜನ ಸೇರಿಕೊಂಡು ಅವನನ್ನು ಬೂಡ್ಸ್ ಕಾಲಿನಲ್ಲಿ ಒದೆಯುವುದು ಅಂದರೆ ಏನು ?

ಉಪಾಧ್ಯಕ್ಷರು : ಮೊನ್ನೆ ಇಲ್ಲಿ ಆದ ಘಟನೆ ಇದರಲ್ಲಿ ಬರುವುದಿಲ್ಲ.

ಶ್ರೀ ಕೆ. ಶ್ರೀರಾಮುಲು.—ನಾನು ಉದಾಹರಣೆಗೋಸ್ಕರ ಆ ರೀತಿಯಾಗಿ ಹೇಳಿದೆ. ಆದರೆ ಕಾರ್ಮಿಕ ಮುಖಂಡರಾದವರು ತಮಗೆ ಸೂಕ್ತ ಬಂದ ರೀತಿಯಲ್ಲಿ ಮತ್ತು ತಮಗೆ ಶಕ್ತಿ ಇದೆಯೆಂಬ ಕಾರಣದಿಂದ ಯಾವುದೋ ಒಂದು ದೃಷ್ಟಿಯಿಂದ ಘರ್ಷಣೆ ಮಾಡುವುದಾದರೆ ಆಗ ಬಹುಶಃ ಅಶಾಂತಿಗೆ ಕಾರಣವಾಗುತ್ತದೆ. ಆ ಮಾತನ್ನು ತಾವೇ ಒಪ್ಪುತ್ತೀರಿ. ಕಾರ್ಮಿಕರು ಶಾಂತಿಯಿಂದ ಇರಬೇಕಾದರೆ ಕಾರ್ಮಿಕ ಇಲಾಖೆಯವರು ಕಾರ್ಮಿಕರ ಬಗ್ಗೆ ಹೆಚ್ಚಿನ ಮಮತೆಯನ್ನು ಇಡಬೇಕು. ಅವರನ್ನು ಒಳ್ಳೆಯ ದೃಷ್ಟಿಯಿಂದ ನೋಡಬೇಕು. ಬಹುಶಃ ಯಾರೇ ಕಾರ್ಮಿಕ ಮುಖಂಡನಾಗಲಿ ಚುನಾವಣೆಯಲ್ಲಿ ನಿಂತಾಗ ಯಾವ ಒಂದು ದೃಷ್ಟಿಯಿಂದ ಆ ಕಾರ್ಮಿಕಪಕ್ಷವನ್ನು ಕಾಣುತ್ತಾನೋ ಅದೇ ಒಂದು ದೃಷ್ಟಿಯಿಂದ ಯಾವಾಗಲೂ ಕಾಣುವುದು ಒಳ್ಳೆಯದು. ಮಾನ್ಯ ಶ್ರೀ ಎಂ. ಎಸ್. ಕೃಷ್ಣನ್ ಅವರು ಈಗ ಕಾರ್ಮಿಕ ಮುಖಂಡರಾಗಿದ್ದಾರೆ. ನಾನೂ ಕೂಡ ಅನೇಕಪ್ಪು

ಕಾರ್ಮಿಕ ರಂಗದಲ್ಲಿ ಕೆಲಸಮಾಡದೇ ಇದ್ದರೂ ಹಲವಾರು ವರ್ಷಗಳ ಕಾಲ ಅವರು ವಿದ್ಯಾರ್ಥಿದೆಸೆಯಲ್ಲಿದ್ದಾಗಿನಿಂದಲೂ ಕಾರ್ಮಿಕರಂಗದಲ್ಲಿ ಕೆಲಸಮಾಡಿದ್ದೇನೆ. ಅಂದಮೇಲೆ ಕಾರ್ಮಿಕರ ವಿಷಯದಲ್ಲಿ ಯಾರೇ ಆಗಲಿ ದುಂಡಾವೃತ್ತಿ ಕೆಲಸಮಾಡುವುದಾದರೆ ಕಾರ್ಮಿಕ ಪಕ್ಷದವರು ನಿಜವಾಗಿಯೂ ಸುಮ್ಮನೆ ಇರುವುದಿಲ್ಲವೆಂಬ ಪ್ರಶ್ನೆ ಉಳಿಯುತ್ತದೆ. ಇವೆಲ್ಲಕ್ಕಿಂತ ಮುಖ್ಯವಾಗಿ ಕಾರ್ಮಿಕ ಇಲಾಖೆಯ ಬಗ್ಗೆ ಇನ್ನೊಂದೆರಡು ಅಂಶಗಳನ್ನು ಹೇಳುತ್ತೇನೆ. ಸಾಮಾನ್ಯವಾಗಿ ಒಬ್ಬ ಆಫೀಸರನ್ನು ಯಾರಾದರೂ ಹೊಡೆದರೆ, ಅಥವಾ ಯಾವನಾದರೂ ಒಬ್ಬ ಕಾರ್ಮಿಕನನ್ನು ಹೊಡೆದರೆ ಕೂಡಲೇ ಸ್ಟ್ರೈಕ್ ಮಾಡುತ್ತೇವೆಂದು ಹೇಳುವ ಜನ ಈಗ ಇದ್ದಾರೆ. ಅಂತಹವರು ಈಗ ಇದ್ದರೆ ನಮ್ಮ ಕಾರ್ಖಾನೆಗಳಿಂದ ಏನು ಉತ್ಪತ್ತಿ ಬರುತ್ತದೆ ? ಈ ಪ್ರಶ್ನೆಗೆ ಯಾರು ಉತ್ತರ ಹೇಳುತ್ತಾರೆ? ಇದು ಬಹಳ ಮುಖ್ಯವಾದ ಪ್ರಶ್ನೆ. ಲಕ್ಷಾಂತರ ಹಾಗೂ ಕೋಟ್ಯಾಂತರ ರೂಪಾಯಿಗಳನ್ನು ಖರ್ಚುಮಾಡಿ ಹೆಚ್ಚಿಗೆ ಕಾರ್ಖಾನೆಗಳಲ್ಲಿ ಉತ್ಪಾದನೆ ಆಗಬೇಕು. ಬಡವರಿಗೆ ಕೆಲಸಗಳನ್ನು ಕೊಡಬೇಕು ಎಂಬುದಾಗಿ ಹೇಳುವವರೇ ಸಾರ್ವಜನಿಕರ ಹಣವನ್ನು ಖರ್ಚುಮಾಡಿ ಸ್ಟ್ರೈಕ್ ಮಾಡುವ ಮುಖಾಂತರ ದುರ್ವ್ಯವಹಾರ ನಡೆಸುವಂತಹ ಜನರಾಗಿದ್ದಾರೆ. ಅಂತಹವರು ಈ ದೇಶದಲ್ಲಿದ್ದರೆ ಇನ್ನೆಷ್ಟರಮಟ್ಟಿಗೆ ನ್ಯಾಯ ದೊರಕೀತೆಂದು ನಾನು ಪ್ರಶ್ನೆ ಮಾಡುತ್ತೇನೆ. ಇದನ್ನು ಸರ್ಕಾರದವರು ಕೂಲಂಕಷವಾಗಿ ಪರಿಶೀಲನೆ ಮಾಡಬೇಕಾಗುತ್ತದೆ. ಅನೇಕ ಸಂದರ್ಭಗಳಲ್ಲಿ ಪೋಲೀಸಿನವರೇ ಅಕ್ರಮಕ್ಕೆ ಕಾರಣರಾಗುತ್ತಾರೆ ಕಾರ್ಮಿಕ ಮುಖಂಡರುಗಳೇ ಎಷ್ಟೋ ವೇಳೆ ಕಾರ್ಮಿಕರಿಗೆ ಅಕ್ರಮಮಾಡಿ ಎಂದು ಹೇಳಿದರೆ ಹೇಗೆ? ಆದ್ದರಿಂದ ನಾನು ಹೇಳುವುದಿಷ್ಟೇ. ಒಟ್ಟಿನಲ್ಲಿ ಕಾರ್ಖಾನೆಗಳಲ್ಲಿ ಉತ್ಪಾದನೆಗೆ ಯಾವ ರೀತಿಯಲ್ಲಿಯೂ ಧಕ್ಕೆ ಬಾರದೇ ಇರುವ ರೀತಿಯಲ್ಲಿ ಕಾರ್ಮಿಕ ಮುಖಂಡರೂ; ಪೋಲೀಸಿನವರೂ ಮತ್ತು ಸರ್ಕಾರದವರು ನೆರವಾಗಬೇಕು. ಅವರಿಂದ ಕಾರ್ಖಾನೆಗಳ ಉತ್ಪತ್ತಿಗೆ ಧಕ್ಕೆ ಬರುವ ರೀತಿಯಲ್ಲಿ ಯಾವ ಕಾರಣದಿಂದಲೂ ಎಂದಿಗೂ ಆಗಬಾರದು ಅವರ ಬಗ್ಗೆ ಎಲ್ಲರಿಗೂ ಒಮ್ಮತವಿದೆ ಮತ್ತು ಸಮ್ಮತಿಯೂ ಇದೆ. ಆದರೆ ಒಂದು ಕಡೆ ನ್ಯಾಯ ಹೇಳುವಾಗ ಇನ್ನೊಂದು ಕಡೆ ಅನ್ಯಾಯ ಮಾಡುವ ಪರಿಸ್ಥಿತಿಯಲ್ಲಿನ್ನೇವೆಂಬುದನ್ನು ನಾವು ಯಾರೂ ಮರೆಯಬಾರದು. ಇಂಥಾದ್ದು ಮುಂದೆ ಯಾವಾಗಲೂ ಕಾರ್ಮಿಕ ಇಲಾಖೆಯಲ್ಲಿ ಆಗದ ಹಾಗೆ ಸಂಬಂಧಪಟ್ಟ ಇಲಾಖೆಯವರು ನೋಡಬೇಕಾಗಿದೆಯೆಂದು ನನ್ನ ವಿನಂತಿ. ಇನ್ನು ಮುಂದೆ ಕಾರ್ಮಿಕ ಸಂಘಗಳನ್ನು ಮಾನ್ಯತೆ ಮಾಡುವಾಗ ಅವುಗಳ ವಿಷಯಗಳನ್ನು ಚೆನ್ನಾಗಿ ಪರಿಶೀಲನೆಮಾಡಬೇಕಾಗಿ ಬರುತ್ತದೆ. ಯಾವ ಕಾರ್ಮಿಕ ಸಂಘಗಳು ಕಾರ್ಖಾನೆಗಳ ನಿಯಮಗಳಿಗೆ ಒಳಪಟ್ಟು ಮಾನ್ಯತೆಗಾಗಿ ಕೇಳುತ್ತಾರೋ ಆ ಒಂದು ಮಟ್ಟಕ್ಕೆ ನೀವು ಪರಿಶೀಲನೆಮಾಡಿ. ಅದಕ್ಕೆ ಅವರು ಒಪ್ಪಿಕೊಂಡರೆ ಮಾತ್ರ ಅವರಿಗೆ ಮಾನ್ಯತೆ ಕೊಡಬೇಕೇ ವಿನಹ ಗಲಭೆ ಮಾಡಿಸುವ ಮುಖಾಂತರ, ದುಂಡಾವೃತ್ತಿ ಮಾಡಿಸುವ ಮುಖಾಂತರ, ಹೆದರಿಸುವ ಮುಖಾಂತರ ಕಾರ್ಮಿಕ ಸಂಘಗಳಿಗೆ ಮಾನ್ಯತೆ ದೊರಕಬೇಕೆಂದರೆ ಅದಕ್ಕೆ ಸಾಧ್ಯವಿಲ್ಲ, ಅಂತಹ ಕಾರ್ಮಿಕ ಸಂಘಗಳಿಗೆ ಮಾನ್ಯತೆ ಕೊಡಬಾರದೆಂಬುದಾಗಿ ನಿಯಮಗಳಲ್ಲಿಯೇ ಇದೆ. ಒಂದು ಪಕ್ಷ ಆ ರೀತಿಯಾಗಿ ಅದರಲ್ಲಿರತಕ್ಕ ನಿಯಮಗಳನ್ನು ಕೈಬಿಟ್ಟು ಮಾಡುವುದಾದರೆ ಬಹುಶಃ ಕಾರ್ಮಿಕರಂಗದಲ್ಲಿ ಎಂದಿಗೂ ಶಾಂತಿ ಇರುವುದಕ್ಕೆ ಕಾರಣವಿಲ್ಲವೆಂದು ನನ್ನ ಅಭಿಪ್ರಾಯ. ಕೋಡ್ ಆಫ್ ಡಿಸಿಪ್ಲಿನ್ ಎಂಬುದಾಗಿ ಸಂಬಂಧಪಟ್ಟ ಇಲಾಖೆಯವರು ಕಾರ್ಮಿಕರಿಗಾಗಿ ಮಾಡಿಕೊಂಡಿದ್ದಾರೆ. ಆದರೂ ಹಲವಾರು ಸಂದರ್ಭಗಳಲ್ಲಿ ಅದರಲ್ಲಿರತಕ್ಕ ಹಲವಾರು ಕಲಂಗಳನ್ನು ಸರಿಯಾಗಿ ಸೂಕ್ತ ಕಾಲದಲ್ಲಿ ಸಂಬಂಧಪಟ್ಟ ಇಲಾಖೆಯವರು ಪರಿಶೀಲನೆ ಮಾಡುತ್ತಾ ಇಲ್ಲವೆಂದು ನಾನು ನಿಮ್ಮ ಮೇಲೆ ವಿಧಿ ಇಲ್ಲದೆ ಅಪಾದನೆ ಮಾಡಬೇಕಾಗಿ ಬಂದಿದೆ. ಶಿಸ್ತು ಎಂಬುದನ್ನು ಚೆನ್ನಾಗಿ ಕಾರ್ಮಿಕ ವರ್ಗದವರು ಕಲಿತುಕೊಳ್ಳಬೇಕಾಗಿ ಬರುತ್ತದೆ. ಅದಕ್ಕೆ ತಕ್ಕ ಬಂದೋಬಸ್ತನ್ನು ಸಹ ಕಾರ್ಮಿಕ ಇಲಾಖೆಯವರು ನಿಯಮಗಳ ಪ್ರಕಾರ ಮಾಡಬೇಕಾಗಿದೆ

4-00 P. M.

ಹಾಗೇನೇ ತಮ್ಮ ಹೇಳಿಕೆಯಲ್ಲಿ ಈ ಕೈಗಾರಿಕಾ ಪಂಚಾಯಿತಿಗಳ ತೀರ್ಮಾನದ ಬಗ್ಗೆ ಇಲ್ಲಿ ಕೆಲವು ಅಂಕೀ ಅಂಶಗಳನ್ನು ಕೊಟ್ಟಿದ್ದಾರೆ. ಅದರ ಪ್ರಕಾರ ಇಲ್ಲಿಯವರೆಗೆ ತೀರ್ಮಾನವಾಗಿರತಕ್ಕ ಕೇಸುಗಳ ಸಂಖ್ಯೆ 770 ಎಂದೂ ತೀರ್ಮಾನ ಆಗದೆ ಹಾಗೇ ಇನ್ನೂ ಉಳಿದಿರತಕ್ಕ ಕೇಸುಗಳ ಸಂಖ್ಯೆ 1437 ಎಂದು ಹೇಳಿರುವಾಗ ಇದು ಏನು ಸೂಚಿಸುತ್ತದೆ ಎಂದರೆ ಕೇಸುಗಳನ್ನು ಬೇಗ ಬೇಗ ಇತ್ಯರ್ಥಮಾಡಲು ಸಾಕಷ್ಟು ಕೋರ್ಟುಗಳನ್ನು ನೇಮಿಸತಕ್ಕ ಬಗ್ಗೆ ಮಾನ್ಯ ಸಚಿವರು ತಮ್ಮ ಬೇಡಿಕೆಯಲ್ಲಿ ಸಾಕಷ್ಟು ಹಣವನ್ನು ಕೇಳುತ್ತ ಇಲ್ಲವೆಂಬುದು ಇದರಿಂದಲೇ ವೇದ್ಯವಾಗುತ್ತದೆ. ಹೀಗಾದರೆ ಈ ಇಲಾಖೆಯಲ್ಲಿ ಉತ್ತಮರೀತಿಯಲ್ಲಿ ಕೆಲಸಕಾರ್ಯಗಳಾಗುವುದಕ್ಕೆ ಸಾಧ್ಯವಿಲ್ಲವೆಂದು ನನ್ನ ಭಾವನೆ

(ಶ್ರೀ ಕೆ. ಶ್ರೀರಾಮುಲು)

ಆದರೆ ಸರ್ಕಾರದವರು ಈ ಸಂದರ್ಭದಲ್ಲಿ ಒಂದು ವಿಷಯವನ್ನು ಮನಗಾಣಬೇಕು. ಈಗ ನಾವಿರ ತಕದ್ದು ಆ ಹಿಂದೆ 25 ವರ್ಷಗಳಲ್ಲಿದ್ದ ಕಾಲವಲ್ಲ. ಆ ಹಿಂದಿನ ಕಾಲದಲ್ಲಿ ಕೆಲಸಮಾಡಿದಂತೆ ಈಗಲೂ ಮಾಡುತ್ತೇವೆಂದರೆ ಅದು ಸಾಧ್ಯವಾಗುವುದಿಲ್ಲ. ಕಾರ್ಮಿಕರು ಮಾಲೀಕರಲ್ಲಿ ಒದ್ದಾಡಿ ಸಾಧ್ಯವಾಗ ದಿದ್ದಾಗ ಇಲ್ಲಿ ಕೋರ್ಟಿನ ಮುಂದೆ ತಮ್ಮ ಅಹವಾಲನ್ನು ತಂದಾಗ ಸರ್ಕಾರದವರು ಕೇವಲ ಇದಕ್ಕೆ ಒಂದೆರಡು ಕೋರ್ಟುಗಳನ್ನು ಕಾರ್ಮಿಕರನ್ನು ಸಮಾಧಾನ ಮಾಡುತ್ತೇವೆಂಬ ಮಾತನ್ನು ಅವರು ಮರೆಯಬೇಕು ಇಲ್ಲಿ ಸರ್ಕಾರದವರು ನೇಮಿಸಿರತಕ್ಕ ಕೋರ್ಟುಗಳೂ ಕೂಡ ಇವರ ಕೇಸುಗಳನ್ನು ವರ್ಷಾನುಗಟ್ಟಲೆ ಎಳೆಯುವುದಕ್ಕೆ ಹೊರಟಾಗ ಸರ್ಕಾರದವರ ಬಗ್ಗೆ ಒಂದು ನಂಬಿಕೆ ವಿಶ್ವಾಸ ಗಳು ಅವರಿಗೆ ಬರಬೇಕೆಂದರೆ ಹೇಗೆ ಸಾಧ್ಯ ? ಇಂಥ ವಿಚಾರದಲ್ಲಿ ಇಲಾಖೆಯವರು ಮಾನ್ಯ ಸಚಿವರಿಗೆ ಸರಿಯಾದ ರೀತಿಯಲ್ಲಿ ವಿಷಯಗಳನ್ನು ಮನವರಿಕೆ ಮಾಡಿಕೊಡುತ್ತಿಲ್ಲ ಎನ್ನಬಹುದು. ಈ ಇಲಾಖೆ ಇನ್ನೂ ಉತ್ತಮ ರೀತಿಯಲ್ಲಿ ಕೆಲಸ ಮಾಡಬೇಕಾಗಿದ್ದರೆ ಇಲ್ಲಿ ಡಿಮ್ಯಾಂಡಿನಲ್ಲಿ ಸೂಚಿಸಿರತಕ್ಕ 2 ಕೋಟಿ 90 ಲಕ್ಷ ರೂಪಾಯಿಗಳು ಏತಕ್ಕೂ ಸಾಲದು. ಇಲಾಖೆ ಒಂದು ಸುವ್ಯವಸ್ಥೆಯಿಂದ ಕೆಲಸ ಮಾಡ ಬೇಕಾಗಿದ್ದರೆ ಇನ್ನೂ ಹೆಚ್ಚಿನ ಹಣಬೇಕು. ನಾವು ನಮ್ಮ ರಾಜ್ಯದಲ್ಲಿರತಕ್ಕ ಒಟ್ಟು ಹತ್ತಿಗಿರಣಿಗಳ ಸಂಖ್ಯೆ—ಅವುಗಳಲ್ಲಿ ಕೆಲಸಮಾಡತಕ್ಕ ಒಟ್ಟು ಕಾರ್ಮಿಕರ ಸಂಖ್ಯೆ ಇತ್ಯಾದಿ ವಿವರಗಳನ್ನು ಒದಗಿಸು ವುದಕ್ಕಾಗಿ ಒಂದು ಸಮಿತಿಯನ್ನು ನೇಮಕ ಮಾಡಿದ್ದಾಗ ಆ ಸಮಿತಿಯವರು ಕೇವಲ ಆರೇ ದಿನ ಗಳಲ್ಲಿ ನಮಗೆ ಅಗತ್ಯವಾಗಿದ್ದ ಎಲ್ಲ ವಿಷಯಗಳನ್ನೂ ಸಂಗ್ರಹಣ ಮಾಡಿಕೊಟ್ಟರು. ನಮ್ಮ ರಾಜ್ಯ ದಲ್ಲಿ ಒಟ್ಟು 31 ಹತ್ತಿಗಿರಣಿಗಳು ಇದ್ದು ಅಲ್ಲಿ ಕೆಲಸ ಮಾಡತಕ್ಕ ಕಾರ್ಮಿಕರೆಲ್ಲರ ವಿಷಯಗಳನ್ನೂ ತಿಳಿಸಿದ್ದಾರೆ. ಅಂದಾಗ ಅಂಥ ಅಧಿಕಾರಿಗಳಿಗೆ ಮೆಚ್ಚಿಗೆ ವ್ಯಕ್ತಪಡಿಸಬೇಕಾದ್ದು ನಮ್ಮ ಕರ್ತವ್ಯ. ಇದಕ್ಕೆ ಮಾನ್ಯ ಸಚಿವರೂ ಕಾರಣರಿರಬಹುದು. ಹೀಗೆ ಇಲಾಖೆ ಕೆಲಸಮಾಡಿದರೆ ಅದನ್ನು ಟೀಕೆ ಮಾಡುವುದಕ್ಕೆ ಯಾರಿಗೂ ಅವಕಾಶವಿಲ್ಲ. ಅದನ್ನು ಮಾಡದೆ 1965 ರಲ್ಲಿ ಕೋರ್ಟಿಗೆ ರೆಫರ್ ಮಾಡಿದ ಕೇಸುಗಳು ಇನ್ನೂ ಇತ್ಯರ್ಥವಾಗದೆ ಹಾಗೇ ಉಳಿದಿವೆ ಎಂದರೆ ಏನು ಹೇಳಬೇಕು ? ನಾನು ಇದೇ ವಿಚಾರವಾಗಿ 1973ನೇ ಸೆಪ್ಟಂಬರ್ ತಿಂಗಳಲ್ಲಿ ಒಂದು ಪ್ರಶ್ನೆಯನ್ನು ಹಾಕಿದ್ದರೆ ಅದಕ್ಕಿನ್ನೂ ಉತ್ತರಬಂದಿಲ್ಲ. ಆದರೆ ಉತ್ತರ ಬಂದಿದೆಯೆಂದೂ ಅದನ್ನು ಪ್ರಶ್ನೆಗಳಲ್ಲಿ ಸೇರಿಸಬೇಕಾಗಿದೆ ಯೆಂದೂ ಕೇಳಿದ್ದೇನೆ. ಹೀಗೆ ಸಕಾಲಕ್ಕೆ ಉತ್ತರವನ್ನು ಕೊಡದಿದ್ದಾಗ ನಾವು ಇಲಾಖೆಯ ಬಗ್ಗೆ ಏನು ಅಭಿಪ್ರಾಯ ಪಡಬೇಕು ? ಸುಮಾರು 8 ತಿಂಗಳಾದರೂ ಉತ್ತರ ಬಾರದಿದ್ದರೇನು ಮಾಡ ಬೇಕು ? ಇಂಥ ನಿಧಾನಗಳಾಗದಂತೆ ಮಾಡಲು ಅದಕ್ಕೆ ಸಾಕಷ್ಟು ಶಿಬ್ಬಂದಿ ಇರಬೇಕು. ಅದಕ್ಕೆ ಬೇಡಿಕೆಯಲ್ಲಿ ಸಾಕಷ್ಟು ಹಣವನ್ನು ಕೇಳಬೇಕು. ಅದನ್ನು ಬೇಡಿಲ್ಲ ಎಂದು ಇದರಿಂದಲೂ ವೇದ್ಯ ವಾಗುತ್ತದೆ. ಹೀಗಾದರೆ ಕಾರ್ಮಿಕರ ಕಲ್ಯಾಣ ಸಾಧನೆಯಾಗುವುದಿಲ್ಲ. ಇಂಥ ಸಮಯ ಸಂದರ್ಭ ಗಳನ್ನು ನಮ್ಮ ವಿರೋಧಪಕ್ಷಗಳವರು ಉಪಯೋಗ ಮಾಡಿಕೊಂಡು ನಮ್ಮನ್ನು ಆಡಳಿತದಿಂದ ಉರುಳಿಸುವುದಕ್ಕೆ ಪ್ರಯತ್ನ ಮಾಡುತ್ತಾರೆ. ಅಂದಾಗ ಇದಕ್ಕೆ ಮಾನ್ಯ ಸಚಿವರೇ ಅವಕಾಶಮಾಡಿ ಕೊಟ್ಟ ಹಾಗೆ ಆಗುತ್ತದೆಂಬುದನ್ನು ಅವರು ಮರೆಯಬಾರದು. ನಾವು ಚುನಾವಣಾ ಕಾಲದಲ್ಲಿ ಗೆದ್ದು ಬರಬೇಕಾಗಿದ್ದರೆ ಅವರಿಗೆ ಅನೇಕ ಭರವಸೆಗಳನ್ನು ಕೊಟ್ಟು ಬಂದಿದ್ದೇವೆ ಎಂಬುದನ್ನು ಮರೆಯಲಾಗದು.

Mr. DEPUTY SPEAKER.—The time is over. The hon. member had agreed that he would complete his speech within 20 minutes. It is rather very strange that he is exceeding the limit. If the Hon. Member requests for some more time, it is for the whip to adjust it.

Sri M. MALLAPPA.—Some more time may be given to him.

ಶ್ರೀ ಕೆ. ಶ್ರೀರಾಮುಲು.—ಮುಂದಿನ ವರ್ಷದಿಂದಲಾದರೂ ಇಲಾಖೆಯಲ್ಲಿ ಉತ್ತಮವಾದ ಕೆಲಸಕಾರ್ಯಗಳನ್ನು ಮಾಡುವುದಕ್ಕಾಗಿ ತಮ್ಮ ಬೇಡಿಕೆಯಲ್ಲಿ ಹೆಚ್ಚಿನ ಹಣವನ್ನು ಕೇಳಬೇಕಾದ್ದು ಅತ್ಯಗತ್ಯ. ತಮ್ಮ ಇಲಾಖೆಯಲ್ಲಿ ಅನೇಕ ಉತ್ತಮ ಅಧಿಕಾರಿಗಳಿದ್ದಾರೆ. ಆದರೆ ಅವರಲ್ಲಿ ಕೆಲ ವರು ಕೆಲವು ಕಾರ್ಮಿಕ ಸಂಘಗಳ ಚುನಾವಣೆಯನ್ನೇ ನಡೆಸಿರುವುದಿಲ್ಲ. ವರ್ಷಾನುಗಟ್ಟಲೆ ಹಾಗೇ ಉಳಿದಿದೆ. ಚುನಾವಣೆಗಳನ್ನು ನಡೆಸಿದರೆ ಅದರಲ್ಲಿ ವಿರೋಧಪಕ್ಷಗಳ ಜನಕ್ಕೆ ಸೋಲುಂ ಟಾಗುತ್ತದೆಂದು ಅವರಿಗೆ ಅನುಕೂಲ ಮಾಡಲು ಸರ್ಕಾರದವರೇ ಪರೀಕ್ಷಾಗಿ ಈ ಚುನಾವಣೆಗಳನ್ನು ಹಿಂದಕ್ಕೆ ಇಟ್ಟಿದ್ದಾರೆ. ಇಂಥದಕ್ಕೆ ಸರ್ಕಾರದವರು ಸಹಾಯ ಮಾಡಬಹುದೇ ? ಹೀಗೆಲ್ಲಾ

ಮಾಡುವುದು ಸರಿಯಲ್ಲ. ಹೀಗಾದರೆ ಇಲಾಖೆಯ ಬಗ್ಗೆ ಜನರಿಗೆ ಒಂದು ಸರಿಯಾದ ಅಭಿಪ್ರಾಯ ಅಥವಾ ಒಳ್ಳೆವಾತಾವರಣ ಮೂಡಿಸುವುದಕ್ಕೆ ಸಾಧ್ಯವಾಗುವುದಿಲ್ಲ. ನಾನು ಈ ಅನೇಕ ವಿಷಯಗಳನ್ನು ಸರ್ಕಾರಕ್ಕೆ ಖುದ್ದಾಗಿ ತಿಳಿಸಿದ್ದೇನೆ. 1972–73 ರಲ್ಲಿ ಒಂದು ಸಂಘಕ್ಕೆ ಒಂದು ಸೆಟ್ ಆಫೀಸ್‌ಬೇರರ್ಸ್ ಚುನಾವಣೆಯಾದರೆ ಅವರ ಬಗ್ಗೆ ಎರಡು ಗುಂಪುಗಳನ್ನು ಮಾಡಿ ಎರಡು ಸೆಟ್ ಆಫೀಸ್‌ಬೇರರ್ಸ್‌ನ್ನು ಹೇಳಿ ಇವರು ನೋಟೀಸನ್ನು ಕಳುಹಿಸಬಹುದೇ ? ಇದು ನ್ಯಾಯವೇ ? ಹಾಗೆ ಮಾಡುವುದಕ್ಕೆ ಇವರಿಗೆ ಅಧಿಕಾರವಾದರೂ ಹೇಗೆ ಬರುತ್ತೆ ? ಇನ್ನು ಕಾರ್ಮಿಕರಲ್ಲಿ ಮರಣ ನಿಧಿ ಎಂಬ ಒಂದು ನಿಧಿಯನ್ನು ಕ್ರಿಯೇಟ್ ಮಾಡುವುದಕ್ಕೆ ಕಾಯಿದೆಯಲ್ಲೇ ಅವಕಾಶವಿದೆ. ಕಾಯಿಲೆ ಬಿದ್ದರೆ ಆಬ್ಸೆಂಟಾದರೆ ಅಥವಾ ಮೃತಪಟ್ಟುಹೋದರೆ ಅಥವಾ ಸಂಸಾರಕ್ಕೆ ಉಪಯೋಗವಾಗಲು ಒಂದು ನಿಧಿಯನ್ನು ರಚಿಸುವುದಕ್ಕೆ ಘಟನಾವಳಿಯಲ್ಲೇ ಅವಕಾಶವಿದೆ. ಆ ವಿಚಾರದಲ್ಲಿ ಮ್ಯಾನೇಜ್‌ಮೆಂಟ್‌ನವರ ಹೇಳಿಕೆ ಪ್ರಕಾರ ಅವರಿಗೆ ಅವಕಾಶಕೊಟ್ಟು ಕಾರ್ಮಿಕರಿಗೆ ಸತಾಯಿಸುವುದು ಯಾವ ನ್ಯಾಯ ? ಯಾವ ಧರ್ಮ ? ಇದನ್ನು ನೋಡಿದರೆ ನಾವೇನು ಪ್ರಜಾಪ್ರಭುತ್ವ ಯುಗದಲ್ಲಿ ಇದ್ದೇವೆಯೋ ಅಥವಾ ಇಲ್ಲವೋ ಎಂಬ ಸಂಶಯ ಉಂಟಾಗುತ್ತದೆ. ಇದಕ್ಕೆ ಕಾರಣವೇನು ಎಂಬುದನ್ನು ಮಾನ್ಯ ಸಚಿವರು ಪರಿಶೀಲನೆ ಮಾಡಬೇಕು. ನಾನು ಇದೇ ಸಂದರ್ಭದಲ್ಲಿ ಇನ್ನೊಂದು ವಿಷಯವನ್ನು ಇಲ್ಲಿ ಅರಿಕೆ ಮಾಡಿಕೊಳ್ಳಬೇಕಾಗಿದೆ. ನಾನು ಒಂದು ಸಂಘದ ಕೆಲಸಗಾರನಾಗಿ ಸದಸ್ಯನಾಗಿ ಹಾಗೂ ಅದರ ಅಧ್ಯಕ್ಷನಾಗಿ 1972ನೇ ಸೆಪ್ಟೆಂಬರ್ 7ನೇ ತಾರೀಖಿಗೂ ಮುಂಚೆ ಮರಣ ಕಾಲದ ನಿಧಿಯನ್ನು ಮಾಡಲು ಬರೆದುಕೊಂಡರೆ ಅದಕ್ಕೆ 2 ತಿಂಗಳಾದರೂ ಉತ್ತರವೇ ಬರಲಿಲ್ಲ. ಆದರೆ ಬೇರೊಂದು ಮಿಲ್ಲಿನವರು ಇಂಥದೇ ಒಂದು ಫಂಡನ್ನು ಕ್ರಿಯೇಟ್ ಮಾಡಲು ಕೇಳಿದ್ದಕ್ಕೆ ಒಂದು ವಾರದೊಳಗೇ ಅವರಿಗೆ ಒಂದು ಆರ್ಡರನ್ನು ಹೊರಡಿಸಿದ್ದಾರೆ. ನಾನು 5 ರಿಂದ 10 ಸಾವಿರದವರೆಗೂ ಫಂಡನ್ನು ಶೇಖರಣೆ ಮಾಡಬೇಕೆಂದಿದ್ದರೆ ಅದಕ್ಕೆ ಮಾಲೀಕರು 2 ಸಾವಿರಕ್ಕೆ ಸಾಕೆಂದು ಹೇಳಿದ್ದಾರೆಂದು ನಿರ್ಬಂಧ ಹಾಕಬಹುದೇ ? ಇಲಾಖೆಯವರು ಇಂಥ ವಿಚಾರದಲ್ಲಿ ಏಕೆ ಅಡ್ಡಬರಬೇಕು ? ಕೇಂದ್ರ ಸರ್ಕಾರಕ್ಕೆ ಸೇರಿದ್ದು ಅದನ್ನು ಮುಚ್ಚಿದ್ದರೂ ಅದಕ್ಕೆ ಹಣವನ್ನು ಒದಗಿಸತಕ್ಕ ಪ್ರಸಂಗ ನಡೆದಿದೆ. ಅಂಥ ಜನರು ಈಗ ಹುಟ್ಟಿಕೊಂಡಿದ್ದಾರೆ. ಇಂಥದ್ದನ್ನೆಲ್ಲಾ ಸರ್ಕಾರದವರು ಎಲ್ಲೆಲ್ಲಿ ಶೇಕಡ 49ರಷ್ಟು ಹಣವನ್ನು ತೊಡಗಿಸಿದ್ದಾರೆ ಅಂಥ ಕಡೆಗಳಲ್ಲಿ ಪ್ರೊಡಕ್ಷನ್ ಬೀಳುವುದಕ್ಕೆ ಅವಕಾಶ ಕೊಡಬಾರದೆಂಬ ಉದ್ದೇಶವಿದ್ದರೆ, ಅಂಥ ಮಿಲ್ಲುಗಳಲ್ಲಿ ಒಂದು ದಿನಕ್ಕೆಷ್ಟು ಪ್ರೊಡಕ್ಷನ್ನಾಗುತ್ತೆ ಎಂಬ ವಿವರಗಳನ್ನು ತರಿಸಿ ನೋಡಬೇಕು. ಕೆಲಸಗಾರರಿಗೆ ಬೇಕಾದ ಮೆಟೀರಿಯಲ್ಸ್ ಸರಬರಾಯಾಗದೆ ಅವರನ್ನು ಸುಮ್ಮನೆ ಕೂಡಿಸಿ ಸಂಬಳ ಕೊಡುತ್ತಿದ್ದಾರೆ. ಇದರಿಂದ ಒಂದು ಕಾಲಕ್ಕೆ ಕಾರ್ಖಾನೆ ಮುಚ್ಚಬೇಕಾದ ಪ್ರಸಂಗ ಬರಬಹುದು. ಸರಕಾರವೇ ಮುಚ್ಚಿದರೆ ತೆಗೆಯುವವರು ಯಾರು ? ಈ ಪ್ರಶ್ನೆಗಳೆಲ್ಲಾ ಇವೆ. ಅಧಿಕಾರಿಗಳು ತಮ್ಮದೇ ಆದ ದರ್ಪ ನಡೆಸುತ್ತಿದ್ದಾರೆ. ಎರಡೂವರೆ ರೂಪಾಯಿಗೆ ಸಿಕ್ಕುವ ಬೋಲ್ಟಿಗೆ ಏಳೂವರೆ ರೂಪಾಯಿ ಛಾರ್ಜಮಾಡುವರು. ಇದು ಸರಿಯೇ ? ಇಂಥವರಿಂದ ಖಾಸಗಿಯವರಿಂದ ಪಡೆದ ಕಾರ್ಖಾನೆ ನಡೆಸಬಾರದು ನಡೆಸುವುದಕ್ಕೆ ಸಾಧ್ಯವಿಲ್ಲ. ಸರಕಾರದ ನೀತಿಗೆ ಅಡಚಣೆ ತರುವ ಅಧಿಕಾರಿಗಳನ್ನು ಕಾರ್ಖಾನೆಗೆ ಹಾಕಿದರೆ ಸರಕಾರದ ಕೆಲಸಕ್ಕೆ ಅಡ್ಡಿ ಬರುವುದೆಂಬುದನ್ನು ಮರೆಯಬಾರದು.

ಮತ್ತೊಂದು ಯೋಜನೆ ಇದೆ. ಕಾರ್ಖಾನೆಗಳು 5 ವರ್ಷಗಳಲ್ಲಿ ಉತ್ತಮ ರೀತಿಯಲ್ಲಿ ನಡೆಯುದಿದ್ದರೆ ಇಲಾಖೆಗೆ ವಹಿಸಿಕೊಡಬೇಕು ಎಂದು. ಅದರ ಬಗ್ಗೆ ಅಧಿಕಾರವರ್ಗ ಪ್ರಯತ್ನ ಮಾಡುತ್ತಿದೆ. ಇದಕ್ಕೆ ಅವಕಾಶ ಕೊಡಬಾರದು. ಈ ಎಲ್ಲಾ ವಿಷಯಗಳನ್ನೂ ಹೇಳುತ್ತಾ ಬಂದಿದ್ದೇನೆ, ಇದರ ಬಗ್ಗೆ ಪತ್ರ ಸಹ ಬರೆದಿದ್ದೇನೆ. ಇದಕ್ಕೆ ಕೈಗಾರಿಕಾ ಇಲಾಖೆಯಿಂದ ಸರಿಯಾದ ಉತ್ತರ ಬಂದಿಲ್ಲ. ಕಾರ್ಖಾನೆಗಳಲ್ಲಿ ನಷ್ಟವಾಗುತ್ತಿದೆ. ಈ ವರ್ಷ ಮೈಸೂರು ಮಿಲ್ಲಿನಲ್ಲಿ 24 ಲಕ್ಷ ರೂಪಾಯಿ ನಷ್ಟವಾಗಿದೆ. ಹಟ್ಟಿ ಗಣಿಯಿಂದ ಲಕ್ಷಾಂತರ ರೂಪಾಯಿಗಳ ಲಾಭಪಡೆಯಬೇಕಾಗಿತ್ತು. ಆದರೆ ಎರಡು ಮೂರು ವರ್ಷಗಳಿಂದ ಅಲ್ಲಿ ನಷ್ಟವಾಗುತ್ತಿದೆ. ಇದಕ್ಕೆ ಅಧಿಕಾರಿಗಳು ಅವಕಾಶ ಕೊಟ್ಟಿದ್ದಾರೆ. ಇಂಥ ಅಧಿಕಾರಿಗಳನ್ನು ಹೇಗೆ ಸಹಿಸಿಕೊಂಡಿದ್ದಾರೋ ಗೊತ್ತಿಲ್ಲ.

ಕನಿಷ್ಠವೇತನದ ಬಗ್ಗೆ ಒಂದು ಸಮಿತಿ ಮಾಡಿದ್ದಾರೆ. ಅದರ ವರದಿ ಬಂದಿಲ್ಲ. ಅಗರಬತ್ತಿ ಕೆಲಸಗಾರರ ವಿಚಾರ ಗಮನಿಸುವುದಾದರೆ ಕರುಳುಕಿತ್ತು ಹೊರಗೆ ಬರುವುದು. ನೂರು ಜನರು ಆ ಕೆಲಸಮಾಡಿದರೆ 85 ಜನರಿಗೆ ರೋಗ ಬರುವುದು. ಅಗರಬತ್ತಿ ಕೆಲಸ ಲಕ್ಷಾಂತರ ಹೆಣ್ಣುಮಕ್ಕಳು ಮಾಡುತ್ತಿದ್ದಾರೆ. ಅವರಿಗೆ ದಿವಸಕ್ಕೆ ಒಂದು ರೂಪಾಯಿ ಕೂಡ ಸಿಕ್ಕುತ್ತಿಲ್ಲ. ಹಿಂದಿನ ಮಂತ್ರಿಗಳು ತಮಗೆ ಬೇಕಾದ ಬೀಡಿ ಕೆಲಸಗಾರರಿಗೆ 5 ರೂಪಾಯಿ ದೊರೆಯುವಂತೆ ಮಾಡಿದರು, ಉಳಿದವರ ವಿಚಾರಗಳ ಕಡೆಗೆ ಸಾಕಷ್ಟು ಗಮನ ಕೊಡಲಿಲ್ಲ. ಇನ್ನೂ ಅನೇಕ ವಿಷಯಗಳನ್ನು ಹೇಳಬೇಕಾಗಿದೆ. ಆದರೆ ಅಧ್ಯಕ್ಷರು ಸಮಯವಿಲ್ಲವೆಂದು ಹೇಳುವುದರಿಂದ ಅವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ಧನ್ಯವಾದಗಳನ್ನರ್ಪಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

†ಶ್ರೀ ಎಂ. ವೆಂಕಟಲಿಂಗಯ್ಯ (ಕೃಷ್ಣರಾಜ).—ಮಾನ್ಯ ಅಧ್ಯಕ್ಷರೇ, ಕಾರ್ಮಿಕರಿಗೆ ಸಂಬಂಧಪಟ್ಟ ಬೇಡಿಕೆಯನ್ನು ವಿರೋಧಿಸುತ್ತಾ ಕೆಲವು ವಿಷಯಗಳನ್ನು ಗಮನಕ್ಕೆ ತರುತ್ತೇನೆ. ಕಾರ್ಮಿಕ ವಿಭಾಗ ಬಹಳ ಮುಖ್ಯವಾದುದು. ನಮ್ಮ ದೇಶದಲ್ಲಿ ಮುಕ್ಕಾಲು ಭಾಗ ಕಾರ್ಮಿಕರಿದ್ದಾರೆ. ಅವರ ಯೋಗಕ್ಷೇಮವನ್ನು ಮತ್ತು ಅವರಿಗೆ ಸಂಬಂಧಪಟ್ಟ ಇಲಾಖೆಯನ್ನು ಸರಿಯಾಗಿ ನೋಡಿಕೊಳ್ಳದೆ ಹೋದರೆ, ದಕ್ಷತೆಯಿಂದ ಕಾರ್ಮಿಕ ಇಲಾಖೆಯನ್ನು ನಡೆಸದೆಹೋದರೆ ಕಾರ್ಮಿಕರ ಅಸಮಾಧಾನಕ್ಕೆ ಸರಕಾರ ಪೂರ್ಣವಾಗಿ ಜವಾಬ್ದಾರಿ ಹೊರಬೇಕಾಗುವುದು. ಉದಾಹರಣೆಗೆ ಹೇಳುವುದಾದರೆ ನಮ್ಮ ರಾಜ್ಯದಲ್ಲಿ ಸುಮಾರು 6 ಸಾವಿರ ಕಾರ್ಖಾನೆಗಳಿವೆ ಮತ್ತು 1500 ಬಾಯ್ಲರ್ಸ್ ಇವೆ. ಅಲ್ಲಿ ಲಕ್ಷಗಟ್ಟಲೆ ಕೆಲಸಗಾರರಿದ್ದಾರೆ. ಇವು ಒಬ್ಬ ಚೀಫ್ ಇನ್‌ಸ್ಪೆಕ್ಟರ ಛಾರ್ಜಿನಲ್ಲಿವೆ ಎಂದು ವರದಿಯಿಂದ ಗೊತ್ತಾಗುವುದು. ಈ ಕಾರ್ಮಿಕರ ಯೋಗಕ್ಷೇಮವನ್ನು ಸರಿಯಾಗಿ ನೋಡಿಕೊಳ್ಳಬೇಕಾದರೆ ಈ ವಿಭಾಗಕ್ಕೇ ಒಬ್ಬ ಸ್ವತಂತ್ರವಾದ ಅಧಿಕಾರಿ ಇಟ್ಟು ಇದರ ಜವಾಬ್ದಾರಿಯನ್ನು ಅವರಿಗೆ ವಹಿಸುವುದು ಒಳ್ಳೆಯದು. ಸಾಧಾರಣವಾಗಿ ಇತರ ಕೆಲಸಗಳ ಜೊತೆಗೆ ಕಾರ್ಮಿಕ ಇಲಾಖೆಯನ್ನು ನೋಡಿಕೊಳ್ಳಲು ಒಬ್ಬ ಅಧಿಕಾರಿ ನೇಮಕ ಮಾಡಿದರೆ ಈ ವಿಭಾಗವನ್ನು ಪರಿಣಾಮಕಾರಿಯಾಗಿ ನೋಡಿಕೊಳ್ಳುವುದಕ್ಕಾಗುವುದಿಲ್ಲ. ಫ್ಯಾಕ್ಟರಿ ಮತ್ತು ಬಾಯ್ಲರ್ ವಿಭಾಗಕ್ಕೆ ಪೂರ್ಣ ಜವಾಬ್ದಾರಿ ಉಳ್ಳ ಒಬ್ಬ ಇಂಡಿಪೆಂಡೆಂಟ್ ಆಫೀಸರಿರಬೇಕೆಂದು ಸಲಹೆಮಾಡುತ್ತೇನೆ. ಇದಕ್ಕೆ ಸಂಬಂಧಪಟ್ಟ ಹಾಗೆ ಇದರ ಛಾರ್ಜಿನಲ್ಲಿರುವ ಚೀಫ್ ಇನ್‌ಸ್ಪೆಕ್ಟರು ರೀಆರ್ಗನೈಜೇಷನ್ ಬಗ್ಗೆ ಅನೇಕ ಶಿಫಾರಸು ಮಾಡಿದ್ದಾರೆ. ವಿವರವಾಗಿ ಸಮಸ್ಯೆಯೇನಿದೆ ಎಂಬುದನ್ನು ತಿಳಿಸಿ ರೀಆರ್ಗನೈಜೇಷನ್ ಬಗ್ಗೆ ಸಲಹೆಮಾಡಿದ್ದಾರೆ. ಅದನ್ನು ಪರಿಣಾಮಕಾರಿಯಾಗಿ ಜಾರಿಗೆ ತಂದು ಕಾರ್ಮಿಕ ಇಲಾಖೆಯ ಜವಾಬ್ದಾರಿಯನ್ನು ಪೂರ್ಣವಾಗಿ ಒಬ್ಬ ಇಂಡಿಪೆಂಡೆಂಟ್ ಅಧಿಕಾರಿಯ ಛಾರ್ಜಿಗೆ ವಹಿಸಬೇಕೆಂದು ಸಲಹೆಮಾಡುತ್ತೇನೆ.

ಇನ್ನು ಲೇಬರ್‌ಗೆ ಸಂಬಂಧಪಟ್ಟ ಘಟನೆಗಳು ಆಗಾಗ್ಗೆ ಸರಕಾರದ ಗಮನಕ್ಕೆ ಬರುತ್ತಿವೆ. ಸಾಮಾನ್ಯವಾಗಿ ಕಾರ್ಮಿಕರನ್ನು ರಿಟ್ರೆಂಚ್ ಮಾಡುವಾಗ ಅಥವಾ ಬೇಡದವರನ್ನು ತೆಗೆಯುವಾಗ ಒಂದು ಸಮಿತಿ ನೇಮಿಸಿ ತೆಗೆಯದೆ ಹಾಗೆಯೇ ತೆಗೆದುಹಾಕುವ ಪದ್ಧತಿಯಿದೆ. ಇದನ್ನು ಸರಿಪಡಿಸಲು ಪ್ರಯತ್ನಮಾಡಿಲ್ಲ, ಇದರ ಬಗ್ಗೆ ಸರಿಯಾದ ವ್ಯವಸ್ಥೆಮಾಡಿಲ್ಲ. ಆದರಿಂದ ಕಾರ್ಮಿಕರಿಗೆ ತೊಂದರೆಯಾಗುತ್ತದೆ. ಇದಕ್ಕಾಗಿ ಕಾರ್ಮಿಕರು ಹೋರಾಡಬೇಕಾಗುವುದು. ನ್ಯಾಯವಾಗಿ ತೀರ್ಮಾನಮಾಡದೆ ಎಷ್ಟೋ ಸಂದರ್ಭಗಳಲ್ಲಿ ಕಾರ್ಮಿಕರಿಗೆ ತೊಂದರೆಯಾಗುತ್ತಿದೆ. ಕೆಲವು ಸಂದರ್ಭಗಳಲ್ಲಿ ಟ್ರಿಬ್ಯೂನಲ್‌ನಲ್ಲಿ ಕಾರ್ಮಿಕರಿಗೆ ಸಂಬಂಧಪಟ್ಟ ಗ್ರ್ಯಾಚ್ಯುಯಿಟಿ ಮುಂತಾದವುಗಳ ಬಗ್ಗೆ ಅವಾರ್ಡ್ ಪಾಸ್ ಆದರೂ ಸಂಬಂಧಪಟ್ಟವರು ಅದನ್ನು ಬೇಗ ಜಾರಿಗೆ ಕೊಡುವುದಿಲ್ಲ. ಇದಕ್ಕಾಗಿ ಕಾರ್ಮಿಕರು ಹೋರಾಟ, ಸತ್ಯಾಗ್ರಹ ಮುಂತಾದ್ದನ್ನು ಮಾಡಿ ಅದನ್ನು ತೆಗೆದುಕೊಳ್ಳಬೇಕಾಗುತ್ತದೆ, ಇಂಥ ಸಂದರ್ಭಗಳುಂಟು. ಸರಕಾರ ಈ ಕಡೆ ಸಾಕಷ್ಟು ಗಮನ ಕೊಡದೆ ಇರುವುದರಿಂದ ಕಾರ್ಮಿಕರಿಗೆ ಅಸಮಾಧಾನವಾಗುತ್ತಿದೆ. ಒಂದು ಸಣ್ಣ ಉದಾಹರಣೆ ಹೇಳಬೇಕೆಂದರೆ ಮೈಸೂರಿನಲ್ಲಿ ಪುರಸಭೆಯ ಕೆಲಸಗಾರರನ್ನು ರಿಟ್ರೆಂಚ್ ಮಾಡಿದರು. ಹಾಗೆ ಮಾಡಿದಾಗ ಅವರು ಟ್ರಿಬ್ಯೂನಲ್ಲಿಗೆ ಅಪೀಲು ಹೋಗಿದ್ದು ಅಲ್ಲಿ ಕಾನೂನು ಪ್ರಕಾರ ಅವರಿಗೆ ಏನೇನು ಪರಿಹಾರ ಕೊಡಬೇಕೋ ಅದನ್ನೆಲ್ಲ ಕೊಡಬೇಕೆಂದು ಅವಾರ್ಡ್ ಪಾಸ್ ಮಾಡಿದರು. ಅವಾರ್ಡ್ ಪ್ರಕಾರ ದೊರೆಯಬೇಕಾಗಿರುವುದನ್ನು ತೆಗೆದುಕೊಳ್ಳಬೇಕಾದರೆ ಅವರು ಮೈಸೂರು ಪುರಸಭೆ ಮುಂದೆ ಸತ್ಯಾಗ್ರಹ ಹೂಡಿದ್ದಾರೆ. ಇನ್ನೂ ಪುರಸಭೆಯವರು ಪರಿಹಾರ ಕೊಟ್ಟಿಲ್ಲ. ಇಂಥ ಸನ್ನಿವೇಶಗಳು ಅನೇಕ ಕಡೆ ನಡೆಯುತ್ತಿವೆ. ಟ್ರಿಬ್ಯೂನಲ್‌ನಲ್ಲಿ ತೀರ್ಮಾನವಾದರೂ ಕೂಡಾ ಅದನ್ನು ಜಾರಿಗೆ ಕೊಡದೆ ಹೋದರೆ ಕಾರ್ಮಿಕ ವರ್ಗಕ್ಕೆ ಎಷ್ಟು ಅಸಮಾಧಾನವಾಗುತ್ತದೆ ಎಂದು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ. ಇದೇ ರೀತಿ ಪೇ ಸ್ಕೇಲ್ಸ್, ಕಾಲಕಾಲಕ್ಕೆ ಕೊಡಬೇಕಾದ ಇನ್‌ಕ್ರಿಮೆಂಟ್‌ಗಳು ಮತ್ತು ಇತರ ಬೆನಿಫಿಷಿಯರಿ ಫೆಸಿಲಿಟೀಸ್ ಇವುಗಳನ್ನು ಕಾಲಕ್ಕೆ ಸರಿಯಾಗಿ ಕೊಡದೆ ಅದನ್ನು ಕೂಡ ಹೋರಾಟ ಮಾಡಿ ತೆಗೆದುಕೊಳ್ಳಬೇಕಾದ ಸನ್ನಿವೇಶಗಳು ಕೂಡ ಇವೆ. ಇಲಾಖೆಯಿಂದ ಸರಿಯಾದ ರೀತಿಯಲ್ಲಿ ಕೆಲಸ ಮಾಡುವವರಿಗೆ ಅನುಕೂಲಗಳನ್ನು ಒದಗಿಸಿಕೊಡಬೇಕು ಸರಿಯಾದ ರೀತಿಯಲ್ಲಿ ಕೆಲಸಗಾರರಿಂದ ಕೆಲಸ ತೆಗೆದುಕೊಳ್ಳಬೇಕು, ಎರಡೂ ಇರಬೇಕು. ಯಾವುದನ್ನೂ ಸರಿಯಾಗಿ ಮಾಡದೆ ಹೋದರೆ ಇಲಾಖೆ ಮತ್ತು ಸರ್ಕಾರ ಅವರ ಅಸಮಾಧಾನಕ್ಕೆ ಕಾರಣರಾಗುತ್ತಾರೆ. ದಿನನಿತ್ಯದ ಕೆಲಸಗಳಲ್ಲಿ ಮಾಡಬೇಕಾದ ಕೆಲಸವನ್ನು ಮಾಡಿರಿ ಅವರಿಗೆ ಕೊಡಬೇಕಾದುದನ್ನು ಕಾಲಕಾಲಕ್ಕೆ ಕೊಡದೆ ಇರುವುದರಿಂದ, ನ್ಯಾಯವಾಗಿ ದೊರೆಯಬೇಕಾದುದನ್ನು ತೆಗೆದುಕೊಳ್ಳುವುದಕ್ಕೂ ಚಳುವಳಿ ಮಾಡಿ ತೆಗೆದುಕೊಳ್ಳಬೇಕಾದ ಸನ್ನಿವೇಶ ಬಂದಿದೆ. ಕಾರ್ಮಿಕ ವರ್ಗಕ್ಕೆ ಅನೇಕ ಸೌಕರ್ಯಗಳನ್ನು ಮಾಡಿಕೊಡಲಾಗಿದೆ,

ಕನ್ಸ್ಯೂಮರ್ ಸ್ಟೋರ್ಸ್ ಮುಖಾಂತರ ದವಸಧಾನ್ಯಗಳನ್ನು ಕೊಡುವ ವ್ಯವಸ್ಥೆಯನ್ನು ಮಾಡಲಾಗಿದೆ ಎಂದು ಎಷ್ಟೋ ಹೇಳುತ್ತಾರೆ. ಆದರೆ ಪೂರ್ಣವಾಗಿ ಅವರ ಅನುಕೂಲಗಳು ಅವರಿಗೆ ಸಿಕ್ಕಿಲ್ಲವೆಂದು ಹೇಳುತ್ತೇನೆ. ಕಂಟ್ರೋಲ್ ಪದಾರ್ಥಗಳು ಎಲ್ಲ ಕೆಲಸಗಾರರಿಗೂ ಸೊಸೈಟಿಗಳ ಮತ್ತು ಸ್ಟೋರ್ಸ್‌ಗಳ ಮುಖಾಂತರ ದೊರಕುವಂತೆ ಮಾಡುತ್ತೇನೆಂದು ಹೇಳುತ್ತಾರೆ. ಸಾಮಾನ್ಯವಾಗಿ ಸಂಬಳ ಒಂದನೇ ತಾರೀಖು ಬಂದರೆ ಆ ವಾರದಲ್ಲಿ ರೇಷನ್ ಪದಾರ್ಥಗಳು ಬಾರದೆ ಇದ್ದರೆ ಕನ್ಸ್ಯೂಮರ್ ಸ್ಟೋರ್ಸ್‌ನಿಂದ ಏನು ಅನುಕೂಲವಾಗುತ್ತದೆ? ಅವರಿಗೆ ಬರುವ ಸಂಬಳವೆಲ್ಲ ಖರ್ಚಾದ ಮೇಲೆ ತಿಂಗಳ ಕೊನೆಯ ವಾರದಲ್ಲಿ ಬಂದರೆ ಅವರು ಹೇಗೆ ಕೊಂಡುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ? ಸರಿಯಾದ ಕಾಲದಲ್ಲಿ ರೇಷನ್ ಪದಾರ್ಥಗಳು ಏಕೆ ಬರುವುದಿಲ್ಲವೆಂದು ಸಂಬಂಧಪಟ್ಟ ಅಧಿಕಾರಿಗಳನ್ನು ಕೇಳಿದರೆ ನಮಗೆ ಸಂಬಂಧಪಟ್ಟಿಲ್ಲ, ಫುಡ್ ಕಾರ್ಪೊರೇಶನ್‌ನವರು ಕೊಟ್ಟಾಗ ನಾವೂ ಕೊಡುತ್ತೇವೆಂದು ಹೇಳಿದರು. ಪದಾರ್ಥಗಳನ್ನು ಸರಬರಾಜು ಮಾಡುವ ಕಾಲಕ್ಕೆ ಕಾರ್ಮಿಕರ ಹತ್ತಿರ ಹಣವಿಲ್ಲದೆ, ಅದನ್ನು ತೆಗೆದುಕೊಳ್ಳುವುದಕ್ಕೆ ಚೈತನ್ಯವಿಲ್ಲದೆ ಹಾಗೆಯೇ ಬಿಟ್ಟುಬಿಡತಕ್ಕ ಪರಿಸ್ಥಿತಿ ಉಂಟಾಗುತ್ತದೆ. ಬೆನಿಫಿಟ್ಸ್ ಕೊಟ್ಟರೂ ಕೂಡ ಪೂರ್ಣವಾಗಿ ಉಪಯೋಗವಿಲ್ಲದೆ ಇರುವ ಸನ್ನಿವೇಶ ಬರುತ್ತದೆ. ಆದುದರಿಂದ ಕಾರ್ಮಿಕರ ಹಿತದೃಷ್ಟಿಯಿಂದ ಏನೇನು ಅನುಕೂಲಗಳನ್ನು ಮಾಡಬೇಕೆಂದಿದ್ದಾರೆ ಅದನ್ನು ಸರಿಯಾದ ರೀತಿಯಲ್ಲಿ, ಸರಿಯಾದ ಕಾಲದಲ್ಲಿ ದೊರೆಯುವಂತೆ ಮಾಡದೆ ಇಂಥ ತೊಂದರೆಗಳೆಲ್ಲ ಬರುತ್ತವೆ.

ಕಾರ್ಮಿಕ ವರ್ಗಕ್ಕೆ, ಕಾರ್ಖಾನೆಗಳಲ್ಲಿ ಕೆಲಸ ಮಾಡುವವರಿಗೆ ವಸತಿ ಸೌಲಭ್ಯವನ್ನು ಮಾಡಿಕೊಟ್ಟಿದ್ದಾರೆ. ಮುಂದೆ ಅನೇಕ ಕಾರ್ಖಾನೆಗಳಲ್ಲಿ ಮಾಡುವವರಿದ್ದಾರೆ. ಅವರು ಸಾಮಾನ್ಯವಾಗಿ ಕಾರ್ಖಾನೆಗಳಲ್ಲಿ ಕೆಲಸ ಮಾಡುವವರೆಗೂ ವಸತಿ ಸೌಕರ್ಯವನ್ನು ಪಡೆಯುತ್ತಾರೆ. ಕೆಲಸದಿಂದ ನಿವೃತ್ತಿ ಹೊಂದಿದ ನಂತರ ಈ ಸೌಕರ್ಯವಿರುವುದಿಲ್ಲ. ಇದಕ್ಕೆ ನನ್ನ ಸಲಹೆ ಏನೆಂದರೆ, ಕಾರ್ಮಿಕರಿಗೆ ಮನೆಗಳನ್ನು ಕೊಡುವಾಗ ರೆಂಟಲ್ ಸಬ್ಸಿಡೈಸ್ಡ್ ಸ್ಕೀಂ ಪ್ರಕಾರ ಕಾರ್ಮಿಕ ವರ್ಗದಿಂದ ಬಾಡಿಗೆ ರೂಪದಲ್ಲಿ ಆ ಮನೆಗೆ ಎಷ್ಟು ಹಣ ಖರ್ಚಾಗಿರುತ್ತದೆ ಅದನ್ನು ವಸೂಲು ಮಾಡಿಕೊಂಡು ಕೆಲಸದಿಂದ ನಿವೃತ್ತಿಯಾಗುವ ವೇಳೆಗೆ ಆ ಮನೆಗಳು ಅವರಿಗೇ ಸಿಕ್ಕುವಂತೆ ವ್ಯವಸ್ಥೆ ಮಾಡಿದರೆ ಅದರಿಂದ ಕಾರ್ಮಿಕರಿಗೂ ಅನುಕೂಲವಾಗುವುದಲ್ಲದೆ, ಕಾರ್ಮಿಕರಿಂದ ವಸೂಲಾದ ಹಣದಿಂದ ಬೇರೆ ಕಡೆ ಹೊಸದಾಗಿ ಮನೆಗಳನ್ನು ಕಟ್ಟಿಕೊಡುವುದಕ್ಕೂ ಅನುಕೂಲವಾಗುತ್ತದೆ. ಇದರಿಂದ ಕಾರ್ಮಿಕರಿಗೆ ಸ್ವಂತ ವಸತಿ ಇರುತ್ತದೆ. ಲಕ್ಷಾಂತರ ಕಾರ್ಮಿಕರು ಕೆಲಸದಲ್ಲಿದ್ದಾಗ ಇದ್ದಂಥ ವಸತಿ ಸೌಕರ್ಯ ಅವರು ಕೆಲಸದಿಂದ ನಿವೃತ್ತಿಯಾದನಂತರವೂ ಇರುತ್ತದೆ ಮತ್ತು ಹೊಸದಾಗಿ ಕೆಲಸಕ್ಕೆ ಬರುವವರಿಗೆ ಬೇರೆ ಕಡೆ ಮನೆಗಳನ್ನು ಕಟ್ಟಿಸಿ ಕೊಡುವುದಕ್ಕೂ ಅನುಕೂಲವಾಗುತ್ತದೆ.

ಕಾರ್ಮಿಕ ಸಮಸ್ಯೆಗಳನ್ನು ಪರಿಹರಿಸಲು ಸರ್ಕಾರದವರು ನ್ಯಾಯವಾಗಿ ಆಗಬೇಕಾಗಿರುವುದನ್ನು ಆಯಾ ಕಾಲಕ್ಕೆ ತಕ್ಕಂತೆ ಮಾಡಿಕೊಟ್ಟು, ಕಾರ್ಮಿಕರಿಗೆ ಅಸಮಾಧಾನಕ್ಕೆ ಕಾರಣವಿಲ್ಲದಂತೆ ಅನುಕೂಲ ಮಾಡಿಕೊಡಬೇಕೆಂದು ಹೇಳಿ ಅಧ್ಯಕ್ಷರಿಗೆ ವಂದಿಸಿ ನನ್ನ ಎರಡು ಮಾತನ್ನು ಮುಗಿಸುತ್ತೇನೆ.

†Sri ABDUL KHUDDUS ANWAR (Bhadravathi).—Mr. Deputy Speaker Sir, I would like to speak on the Demand for Grants on Labour Department. I support the Demand. My Hon. Friend Sri M. S. Krishnan and Sri Sriramulu have pointed out, in detail, the difficulties meted out by the Labour Department while solving the labour problems. I would like to mention here that most of the cases go to the Labour Court where they have not been settled for years together. For instance, to show an anomaly, consider the Bonus Cases. In the case of Bhadigund and Bilikalbetta Quartz Mines, a Public Seqtor Underaking has contended that the labourers of those Mines are not entitled to bonus though they agree in principle that they are the owner, they are the Manager. They still say that the Contractor has to pay the Bonus to the employees of those Mines. This matter has gone to the Court and it is still pending since last three years and no final decision is taken.

(Sri ABDUL KHUDDUS ANWAR)

I, therefore, suggest that the Government should immediately settle this by bipartite negotiations and see that a settlement is arrived at.

With regard to Minimum Wages to the Mines employees appointed by the Government Departments, *i.e.*, by the M.M.D. Mines and the M.I.S.L., after the abolition of the contract system, these employers, being the model employers, have not cared to implement the fundamental principles of this minimum wages and bonus and Dearness allowance on the basis of cost of living index. Inspite of our repeated requests to the Government, they have not paid the minimum wages to the Bilikalbetta Mines which is also supplying the iron ore and Quartz to the Iron and Steel Industry. Their wages, when compared to other Mines is very low and they say that this Quartz does not come under the Mines Act. I, therefore suggest that the Government should see that the Bilikalbetta and other Qartz Mines which are run by the M.M.D. should give minimum wages and other statutory benefits like the Dearness allowance, Bonus etc., to those employees.

4-30 P.M

The bonus is pending since three years, which should be paid to them immediately by the present management, *i.e.* by the M.M.D.C. and M.I.S.L. on the basis of cost of living index. And most of the members of these Mine workers' Housing Committee are appointed or nominated by the Government. But, so far, no representation is given to Bellary and Hospet Division. Therefore, I request the Government to appoint one member from each of the Bellary and Hospet groups and see that more housing facilities are given to these mine employees. The management of MISL and M.M.D.C. is not giving other amenities like medical facilities to those contract labourers. In this connection, though the previous Minister was pleased to give an assurance nothing has been done so far. I request once again that these contract labourer system should be abolished and they should be taken as regular employees by the management. I hope that our new Minister will take necessary steps in this direction. The other facilities like hospital facilities, canteen facilities and maternity benefits are also given to these mine workers. When the MISL is giving D.A. to their workers the MMDC people are not giving this D.A. to their employees on the basis of cost of living index.

There is one clause 14(a) and (b) which have to be changed. It says that if a man absent himself from work for 7 days, his lien will be cut off. In some cases, even if the management is convinced

about the absence of some workers, they were not taken back for duty. Then they go to a court of law and the matter will not be settled early. There are many such cases pending in the Labour Courts. This leads to a worst position so far as labour and management relationship is concerned. Therefore, I request the Government to replace that clause by some other suitable clause which is beneficial to the workers. They should be some provision even if a person absents himself from duty, after his immediate return if he gives satisfactory explanation for his absence, he should be taken for duty. Therefore, I suggest that such a provision should be made in the existing rules.

Regarding the production, we are fully aware that MISL and MMDC are doing their best to produce more. This time, they made a record production of nearly one lakh tons. Their turnover is about Rs. 41 crores. But, the officers and labourers cases are still pending since a very long time. Though our Minister for Industries has given an assurance in this matter, nothing has been done so far. He promised that after the receipt of Dutt Report these things would be finalised. But, it seems he has touched only 5th grade employees, whereas other grades like first, second and third grade employees are left behind. The Dutt Report is before us. You have appointed again a man to go into that question. But, now you say that he is not going into the personnel matter but go into some other matters. Any how, I request the Government to see that the cases of officers and other grades are immediately finalised. Because, those people are working very hard and made a record production, for which we have to do something. Or else, the situation will go still worse. The entire responsibility is with the Government.

With regard to the training and employment, lot of complaints are being received by us. I myself, have made certain complaints on some of the officers of the Employment Exchange. They are not behaving properly. Though thousands of persons registered their names in the Exchange, only few people get the advantage. If any body pays something in the Employment Exchange, they will be given chances. Such kind of malpractices are going on there. I have brought this to the notice of the Government by giving concrete instances. Therefore, I request the Government to take suitable action on those persons who are indulging in such affairs in Employment Exchanges. Even if 5000 people come for training, the Deputy Commissioner will be the final authority to select them. In selection 25 per cent will be given the private members and the rest of the 75 per cent will be given by doing aptitude test. Therefore, I suggest that this system should be changed and at least private members should have the right to examine almost all the boys who come for the test. While screening he candidates some of the

(Sri ABDUL KHUDDUS ANWAR)

Inspectors made lot of money. Therefore, I suggest that this kind of screening should be abandoned and all the boys who come for the test should be given interview giving due representation to the SC/STs and other minority communities. Therefore, I request the Government to go into this matter and see that such irregularities do not taken place in future.

With regard to the working of the Department, I dont' know whether they are taking undue advantage of the goodness of the Minister. But, things are not moving fast as they ought to. Therefore, I request the Government to see that the Department works satisfactorily and all matters pending in the Labour Courts are settled very early. With these few words, I thank the Chair and conclude my speech.

† ಶ್ರೀ ಕೋಣಂದೂರು ಲಿಂಗಪ್ಪ (ತೀರ್ಥಹಳ್ಳಿ).—ಸನ್ಮಾನ್ಯ ಅಧ್ಯಕ್ಷರೇ, ನಮ್ಮ ಮಾನ್ಯ ಸಚಿವರಾದ ಶ್ರೀಮಾನ್ ಯಾಹ್ಯಾರವರು ಮಂಡಿಸಿರತಕ್ಕ ಬೇಡಿಕೆಗಳನ್ನು ಸಂಪೂರ್ಣವಾಗಿ ವಿರೋಧ ಮಾಡುತ್ತಾ ನಾಲ್ಕು ಮಾತುಗಳನ್ನು ಇಲ್ಲಿ ಹೇಳಲಿಕ್ಕೆ ಅಪೇಕ್ಷೆಪಡುತ್ತೇನೆ. ಇವೊತ್ತು ನಮ್ಮ ರಾಜ್ಯದವಟ್ಟಿಗೆ ಹೇಳುವುದಾದರೆ ಇರುವ ಮೂರು ಕೋಟಿ ಜನರಲ್ಲಿ ಒಂದು ಕಡೆ ಕಾರ್ಮಿಕವರ್ಗದವರಿದ್ದಾರೆ, ಸರಕಾರದ ಅಧಿಕಾರಿಗಳಾಗಿರುವವರು ಮತ್ತು ಕಾರ್ಖಾನೆಗಳಲ್ಲಿರುವ ಕೂಲಿಗಾರರು ಇದ್ದಾರೆ. ಹೀಗೆ ನಮ್ಮ ಜನಸಂಖ್ಯೆಯಲ್ಲಿ ಸುಮಾರು ಮೂರನೇ ಒಂದು ಭಾಗದಷ್ಟು ಜನ ಕೂಲಿಗಾರರು ಇದ್ದಾರೆ. ಅವರ ಬಗ್ಗೆ ಒಂದು ಕಡೆ ಅವರ ಜೀವನವನ್ನು ಹಸನು ಮಾಡುವುದರ ಬಗ್ಗೆ ಮತ್ತು ಅವರ ಬದುಕನ್ನು ಬಂಗಾರ ಮಾಡುವುದರ ಬಗ್ಗೆ ಕಳಕಳಿಯಿಂದ ಅಂದಿನಿಂದ ಇಂದಿನವರೆಗೂ ಯಶಸ್ವಿಯಾದ ಕಾರ್ಯಕ್ರಮಗಳನ್ನು ತೆಗೆದುಕೊಂಡಿರುವುದು ನಮಗೇನೂ ಕಾಣುತ್ತಿಲ್ಲ. ಏನಾದರೂ ಕಾರ್ಮಿಕ ವರ್ಗದವರು ನ್ಯಾಯವಾದ ಬೇಡಿಕೆಗಳನ್ನು ಒತ್ತಾಯಪಡಿಸಿ ಹೋರಾಟ ನಡೆಸಿದರೆ ಅದಕ್ಕೆ ವಿರೋಧವಾಗಿ ಪೋಲೀಸರು ಮತ್ತು ಇತರರನ್ನು ಬಳಸಿ ಅವರ ಒಂದು ಹೋರಾಟದ ದೃಷ್ಟಿ ನ್ಯಾಯವಾಗಿದ್ದರೂ ಅವರ ನ್ಯಾಯವಾದ ಬೇಡಿಕೆಗಳನ್ನು ದಮನಗೊಳಿಸತಕ್ಕಂತಹ ಒಂದು ಹೋರಾಟ ನಡೆದುಕೊಂಡು ಬಂದಿದೆ. ಆದರೆ ಇಂದು ನಮ್ಮ ರಾಜ್ಯದಲ್ಲಿ ಮಾತ್ರವಲ್ಲ ಇಡಿ ಭಾರತದಲ್ಲಿ ಕಾರ್ಮಿಕವರ್ಗ ಜನಕೋಟಿ ಎಚ್ಚರವಾಗಿ ನಿಂತಿದಾರೆ. ಮೇ 8ನೇ ತಾರೀಖು ಅಲ್ಲೋಲ ಕಲ್ಲೋಲವಾಗುತ್ತದೆ. ಸರ್ಕಾರಿ ನೌಕರರ ಮುಷ್ಕರ ವಿರೋಧಿನೀತಿ ಏನು ಇದೆ ಪಟಭದ್ರ ಹಿತಾಶಕ್ತಿಗಳನ್ನು ರಕ್ಷಣೆ ಮಾಡತಕ್ಕ ನೀತಿ ಇದೆ. ಬಡವರ ಬಗ್ಗೆ ಕಾರ್ಮಿಕರ ಬಗ್ಗೆ ಕಳಕಳಿಯಿಂದ ಹೇಳಿದ್ದರೂ ಕೂಡ ಕಾರ್ಯತಃ ಶ್ರೀಮಂತರನ್ನು ಬಂಡವಾಳಶಾಹಿಗಳನ್ನು ಮಾಲಿಕರನ್ನು ರಕ್ಷಣೆ ಮಾಡತಕ್ಕ ನೀತಿಯನ್ನೇ ನೀವು ನಡೆಸಿಕೊಂಡು ಬಂದಿದ್ದೀರಿ. ಅದು ಪ್ರತಿಭಟನೆಗೆ ಈಡಾಗಿದೆ. ಇದನ್ನು ಎದುರಿಸತಕ್ಕ ಖ್ಯಾತಿ ಸರ್ಕಾರಕ್ಕೆ ಇದೆಯೇ ನೋಡೋಣ. 8ನೇ ತಾರೀಖು ರೈಲ್ವೆ ಮುಷ್ಕರ ಮಾಡುವ ಘೋಷಣೆ ಈಗಾಗಲೇ ಹೇಳಿದ್ದಾರೆ. ಸರ್ಕಾರದವರು ಒಂದೊಂದೇ ರೈಲನ್ನು ನಿಲ್ಲಿಸುತ್ತಾ ಬಂದಿದ್ದಾರೆ. ನಮ್ಮ ರಾಜ್ಯದ ಮಟ್ಟಿಗೆ ಹೇಳುವುದಾದರೆ ಕಾಂಗ್ರೆಸ್‌ಗೆ ಜೈ, ಇಂದಿರಾ ಗಾಂಧಿಗೆ ಜೈ, ಯಾಹ್ಯಾರವರಿಗೆ ಜೈ ಎಂದರೆ ಕಾರ್ಮಿಕರು ನಿಷ್ಠಾವಂತರು, ದೇಶಭಕ್ತರು ಎಂದು ಹೇಳುತ್ತಾರೆ. ಆರೀತಿ ಹೇಳದೆ ಅಧಿಕಾರ ಗದ್ದುಗೆಯಲ್ಲಿ ಇರುವವರ ವಿರುದ್ಧ ಚಕಾರ ಶಬ್ದ ಎತ್ತಿದರೆ ದೇಶದ್ರೋಹಿ ಕೃತ್ಯ, ದೇಶ ಮಾರಕ ಕೃತ್ಯ ಎಂದು ಹೇಳುತ್ತಾರೆ. ಅವರ ಕಾರ್ಮಿಕ ಸಂಘಗಳಲ್ಲಿ ಏನೇನೂ ಒಡಕು ಇರುತ್ತಿದೆ ಅದನ್ನು ಎತ್ತಿ ತೋರಿಸುವುದಕ್ಕೆ ಹೋಗುವುದಿಲ್ಲ. ಅದರ ಅವಶ್ಯಕತೆ ಇಲ್ಲ. ಕಾಂಗ್ರೆಸ್ ಕಾರ್ಮಿಕ ಮುಖಂಡರು ಸಂಪೂರ್ಣವಾಗಿ ಎಲ್ಲ ಕಾರ್ಮಿಕ ಬೆಂಬಲ ಗಳಿಸಿಕೊಡಬೇಕು. ಆದರೆ ವಿರೋಧಪಕ್ಷದ ಕಾರ್ಮಿಕ ಸಂಘಟನೆಯನ್ನು ಮುರಿಯತಕ್ಕ ಅನೇಕ ಕಾರ್ಯಗಳನ್ನು ಕೈಗೊಂಡಿದ್ದಾರೆ. ಬೆಂಗಳೂರು ನಗರದಲ್ಲಿ ಕೆಲವು ಕಾರ್ಖಾನೆಗಳಲ್ಲಿ ವಿರೋಧ ಪಕ್ಷದವರ ಸಂಘಟನೆಯನ್ನು ಮುರಿಯತಕ್ಕದ್ದನ್ನು ಈ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ಮಾಡಿರುವುದನ್ನು ನಾವು ಕಂಡಿದ್ದೇವೆ; ನೋಡಿದ್ದೇವೆ. ನಮ್ಮ ಪಕ್ಷದ ಕಾರ್ಮಿಕ ಮುಖಂಡರೂ ಕೂಡ ಹೇಳಿದ್ದಾರೆಂದು ಭಾವಿಸಿದ್ದೇನೆ. ಇದುವರೆಗೂ ಅದು ಏನಾಗಿದೆ ಎಂದರೆ ಅಧಿಕಾರ ಎನ್ನತಕ್ಕದ್ದು ರಾಕ್ಷಸಶಕ್ತಿಯಾಗಿ ಎದುರುಗಡೆ ಸಿಕ್ಕತಕ್ಕ ಎಲ್ಲರನ್ನೂ ಧ್ವಂಸ ಮಾಡುವ ಮನೋಪ್ರವೃತ್ತಿ ಹೆಚ್ಚು

ಬಂದಿರುವುದರಿಂದ ಪ್ರಜಾಪ್ರಭುತ್ವ ಕಬಳಿಸತಕ್ಕ ಸ್ಥಿತಿಗೆ ಬಂದು ನಿಂತಿದೆ. ಕಾರ್ಮಿಕರ ನೀತಿ ಏನು ಇದೆ ಅದನ್ನು ಬದಲಾವಣೆ ಮಾಡಬೇಕು. ಪುಸ್ತಕದಲ್ಲಿ ನೋಡಿದರೆ ಕಾರ್ಮಿಕರ ಸ್ವರ್ಗ ಸ್ಥಾಪನೆ ಮಾಡಲಿಕ್ಕೆ ಏಣಿ ಇಟ್ಟಿದ್ದಾರೆ ಎಂದು ಹೇಳುತ್ತಾರೆ. ಕಾರ್ಮಿಕರ ಹಿತರಕ್ಷಣೆ ಮಾಡತಕ್ಕ ಇಪ್ಪತ್ತಾರು ಕಾನೂನುಗಳಿವೆ. ಇದರಲ್ಲಿ ಯಾವುದಾದರೂ 2—3 ನ್ನು ಪ್ರಾಮಾಣಿಕವಾಗಿ ಅನುಷ್ಠಾನಕ್ಕೆ ತಂದಿದ್ದೀರಾ ? ಅದನ್ನು ಹೇಳಿ. ಪುಸ್ತಕದಲ್ಲಿದೆ, ಸರಿ ಆದರೆ ಪ್ರಾಮಾಣಿಕವಾಗಿ 26 ರಲ್ಲಿ ಕನಿಷ್ಟ 4 ಕಾಯಿದೆಗಳನ್ನು ಅನುಷ್ಠಾನಕ್ಕೆ ತಂದಿದ್ದಾರೆಯೇ. ಲೇಬರ್ ಇನ್‌ಸ್ಪೆಕ್ಟರ್‌ಗಳನ್ನು ನೇಮಕ ಮಾಡಿದ್ದೀರಿ. ಲೇಬರ್ ಇನ್‌ಸ್ಪೆಕ್ಟರ್ ಏನು ಕೆಲಸ ಮಾಡಿದ್ದಾರೆ ? ಮಾಡುವವರಿದ್ದಾರೆ. ಅವರು ಯಾರಾದರೂ ನನಗೆ ತಿಳಿದ ಪ್ರಕಾರ ಲೇಬರ್ ಇನ್‌ಸ್ಪೆಕ್ಟರುಗಳು ಇಂತಿಷ್ಟು ಸಾವಿರ ಕಲೆಕ್ಟ್ ಮಾಡ ಬೇಕು ಎಂದು ಇದೆಯಂತೆ. 10 ಸಾವಿರ 15 ಸಾವಿರ ಅವರು ಎಲ್ಲಿಂದ ಕೊಡುವುದು. ಅದನ್ನು ಸಮಯಬಂದಾಗ ಹೇಳುತ್ತೇನೆ. ನಮ್ಮ ಯಾಹ್ಯಾರವರು ಈ ಜನರ ಬಲೆಯೊಳಗೆ ಸಿಕ್ಕಿಕೊಂಡು ಒದ್ದಾಡುವ ಸ್ಥಿತಿ ಬಂದಿದ್ದರಿಂದ ನನಗೆ ಚಿಂತೆಯಾಗುತ್ತಿದೆ. ನಾನು ಅವರು 15 ವರ್ಷಗಳಿಂದ ಸ್ನೇಹಿತರು. ಒಂದೇ ಹಾಸ್ಟಲ್‌ನಲ್ಲಿ ಇದ್ದವರು. ಒಳ್ಳೆಯವರಿಗೂ ಕೂಡ ಕೆಟ್ಟ ಬುದ್ಧಿ ಬಂದು ಬಿಟ್ಟಿತು. ಅವರಿಗೆ ಒಳ್ಳೆಯ ಕೆಲಸಮಾಡತಕ್ಕ ಮನೋಭಾವ ಪ್ರಾಮಾಣಿಕವಾಗಿ ಇರುವುದನ್ನು ನಾನು ಬಲ್ಲೆ. ಕಳೆದ 2, 3 ತಿಂಗಳಲ್ಲಿ ಅವರ ನಡೆ ನುಡಿ ಬಹಳ ನಿಧಾನವಾಗಿ ನಡೆಯುತ್ತಿದೆ. ಈ ನಿಧಾನ ಸಾಲದು. ನಮ್ಮ ಜಿಲ್ಲೆಯ ವಿಷಯಕ್ಕೆ ಹೋಗೋಣ. ನಾನು ಹೋಗಿ ಬಂದಿದ್ದೇನೆ. ನೀವು ಹೋಗಿಬಂದಿದ್ದೀರಿ. ನಿಮಗೂ ನಮಗೂ ಗೊತ್ತಿದೆ. ಮೇಲೆ ಕುಳಿತಿರತಕ್ಕ ಅಧ್ಯಕ್ಷರಿಗೂ ಗೊತ್ತಿದೆ. ಕಾರವಾರ ಜಿಲ್ಲೆಯಲ್ಲಿ ತಿಸಲ್ ಕಂಪೆನಿ ಇದೆ. ಅಲ್ಲಿ ಏನು ದೌರ್ಜನ್ಯ ನಡೆಯುತ್ತಿದೆ ? ಸರ್ಕಾರ ಇದೆಯೋ ಅಥವಾ ಇಲ್ಲವೋ ಅನುಮಾನವಾಗಿದೆ. ಶ್ರೀ ಚನ್ನಬಸಪ್ಪನವರ ಸರ್ಕಾರ ಇರುವುದೋ ಯಾರ ಸರ್ಕಾರ ಇರುವುದು ? ಪೋಲೀಸರನ್ನು ಉಪಯೋಗಿಸಿ ಕಾರ್ಮಿಕರ ಮೇಲೆ ದೌರ್ಜನ್ಯ ಮಾಡುತ್ತಿದ್ದಾರೆ. ಶ್ರೀ ತಿಮ್ಮಪ್ಪನವರು ಮತ್ತು ಇತರರು ಹೋಗಿ ನೋಡಿಕೊಂಡು ಬಂದಿದ್ದಾರೆ. ನಮ್ಮ ಕಾರ್ಮಿಕ ಮುಖಂಡರು ಸಂಘಟನೆ ಮಾಡುತ್ತಾ ಇದ್ದಾರೆ. ಅವರ ಮೇಲೆ ಇಷ್ಟೊಂದು ದೌರ್ಜನ್ಯ ಜೈಲಿನಿಂದ ಹೊರಗಡೆಯಾಗಲಿ ಅಥವಾ ಒಳಗಡೆಯಾಗಲಿ ಇವತ್ತಿಗೂ ನಡೆಯುತ್ತಿದೆ. ಯಾಹ್ಯಾರವರು ಕಣ್ಣುಮುಚ್ಚಿಕೊಂಡು ಕೂತಿರುವುದಕ್ಕೆ ನಾನು ಇಂದು ಕ್ಷಮಿಸು ವುದಕ್ಕೆ ಸಾಧ್ಯವಿಲ್ಲ. ಉಂಗಾರದಲ್ಲಿ ಒಬ್ಬ ಇನ್‌ಸ್ಪೆಕ್ಟರ್ ಕಾರ್ಮಿಕ ಹೆಂಗಸರನ್ನು ಮಕ್ಕಳನ್ನು ಬೇಕಾದಷ್ಟು ರೀತಿಯಲ್ಲಿ ಹಿಂಸೆ ಕೊಟ್ಟಿರುವುದನ್ನು ಕಂಡಿದ್ದೇವೆ, ನಾವು ನೋಡಿದ್ದೇವೆ. ಈ ಸಭೆ ಯಲ್ಲಿ ಆ ಇನ್‌ಸ್ಪೆಕ್ಟರ್ ಹೆಸರನ್ನು ಹೇಳುವುದಕ್ಕೆ ವೈಯಕ್ತಿಕವಾಗಿ ಹೇಳುವುದಕ್ಕೆ ಇಷ್ಟಪಡುವು ದಿಲ್ಲ. ಈ ಸಬ್‌ಇನ್‌ಸ್ಪೆಕ್ಟರನ್ನು ತೆಗೆದು ಕಾರ್ಮಿಕ ವರ್ಗದವರಿಗೆ ಉಸಿರಾಡುವುದಕ್ಕೆ ಸಾಧ್ಯ ವಾಗದೆ ಹೋದರೆ ಸರ್ಕಾರ ಜೀವಂತ ಇದೆಯೋ ಇಲ್ಲವೋ ಎಂದು ಕೇಳಬೇಕಾಗುತ್ತದೆ. ಅಲ್ಲಿ ಲೇಬರ್ ಇನ್‌ಸ್ಪೆಕ್ಟರ್ ಯಾರಾದರೂ ಅಲ್ಲಿ ಇದ್ದಾರೆಯೋ ಎಂದು ಗಮನಿಸಬೇಕು. ಅವರೆಲ್ಲಾ ತಿಸಲ್ ಕಂಪೆನಿಯ ಮ್ಯಾನೇಜರ್ ಜೊತೆಗೆ ಇರುತ್ತಾರೆ. ತಮ್ಮ ಅಧಿಕಾರಿಗಳು ಸಬ್ ಇನ್‌ಸ್ಪೆಕ್ಟರ್ ಯಾರಾದರೂ ಕಾರ್ಮಿಕ ಇಲಾಖೆಯಲ್ಲಿ ತಿಸಲ್ ಕಂಪೆನಿ ಜೀಪಿನೊಳಗೆ ತಿರುಗಾಡಿ ದಬ್ಬಾಳಿಕೆ ನಡೆಸಿ ಕೊಂಡು ಬಂದಿದ್ದಾರೆ. ಆ ಜೀಪಿನ ನಂಬರು ಎಂ.ಎ. ಡಬ್ಲ್ಯು 9947. ಸಬ್‌ಇನ್‌ಸ್ಪೆಕ್ಟರ್ ನಾನು ಆ ತಿಸಲ್ ಕಂಪೆನಿ ಟ್ರಕ್ಸ ಮತ್ತು ವ್ಯಾನು ಕಾರ್ಮಿಕ ಇಲಾಖೆ ಅಧಿಕಾರಿಗಳು ಉಪಯೋಗಿಸಿ ಕೊಳ್ಳುತ್ತಿದ್ದಾರೆ. ಕಾರ್ಮಿಕರಿಗೆ ನೀರು ಇಲ್ಲ, ಶೌಚಗೃಹ ಇಲ್ಲ, ವೈದ್ಯರಿಲ್ಲ, ಡಾಕ್ಟರ್ ಇಲ್ಲ, ಔಷಧಿ ಇಲ್ಲ ಏನು ಮನುಷ್ಯರಿಗೆ ಮಿನಿಮಮ್ ಅನುಕೂಲ ಬೇಕೋ ಅಂಥದ್ದು ಏನು ಇಲ್ಲ.

ಸಬ್‌ಇನ್‌ಸ್ಪೆಕ್ಟರ್, ಸರ್ಕಲ್‌ಇನ್‌ಸ್ಪೆಕ್ಟರ್, ಲೇಬರ್‌ಇನ್‌ಸ್ಪೆಕ್ಟರ್, ಇಂಜಿನಿಯರುಗಳು ಅವರೇ ಬೇನಾಮಿ ಹೆಸರಿನಲ್ಲಿ ಕಂಟ್ರಾಕ್ಟ್ ಮಾಡುತ್ತಾ ಇದ್ದಾರೆ. ಅವರೇ ಕಂಟ್ರಾಕ್ಟರುಗಳು ಆಗಿದ್ದಾರೆ. ನೀವು ಅವರನ್ನು ಕೆಲಸದಿಂದ ಟ್ರಾನ್ಸ್‌ಫರ್‌ಮಾಡಿದರೂ ಅವರು ಜಾಗ ಬಿಡುವುದಿಲ್ಲ. ಅಷ್ಟು ಚೆನ್ನಾಗಿ ವ್ಯವಸ್ಥೆ ಮಾಡಿಕೊಂಡಿದ್ದಾರೆ. ತಿಸಲ್ ಕಂಪನಿಯವರು ನಮ್ಮ ಚುನಾವಣೆಗೆ ಲಕ್ಷಗಟ್ಟಲೆ ಕೊಟ್ಟಿಲ್ಲ. ಗುಲ್ಬರ್ಗ ಚುನಾವಣೆಯಲ್ಲಿ ಕೊಟ್ಟಿದ್ದಾರೋ ಇಲ್ಲವೋ ಗೊತ್ತಿಲ್ಲ. ಸಂಕೇಶ್ವರಕ್ಕೆ ಕೊಟ್ಟಿರಬಹುದು. ಅಲ್ಲಿ ಅವರ ಜೀಪುಗಳು ಬಂದಿದ್ದುವು. ಅದು ಎಲ್ಲಾ ತಮಗೆ ಗೊತ್ತಿದೆ. ಆ ರೀತಿಯ ಆಸಕ್ತಿ ನಮಗೇನೂ ಇಲ್ಲ. ನಮಗೆ ಇರುವುದು ಕಾರ್ಮಿಕರಿಗೆ ಅನುಕೂಲ ಆಗಬೇಕು. ಅಗ್ರಿಮೆಂಟ್‌ನಲ್ಲಿ ಇರತಕ್ಕ ನಿಯಮಾವಳಿಗಳನ್ನು ಅನುಷ್ಠಾನಕ್ಕೆ ತಾರದೇ ಅಲ್ಲಿರತಕ್ಕ ಕಂಪನಿಗಳು ಜನರನ್ನು ಸುಲಿಗೆ ಮಾಡುತ್ತಾ ಇದ್ದರೆ ಸರ್ಕಾರ ಕಣ್ಣುಮುಚ್ಚಿಕೊಂಡು ಕೂತಿದೆ. ಅದಕ್ಕೆ ಏನು ಹೇಳಬೇಕು ? ಅಗ್ರಿಮೆಂಟ್‌ನಲ್ಲಿರುವ ಕಂಡಿಷನ್ಸ್ ರೀತ್ಯಾ ಕಾರ್ಮಿಕರಿಗೆ ಸೌಲಭ್ಯಗಳನ್ನು ಒದಗಿಸಿಕೊಡಬೇಕು. ಅವರು ಅಗ್ರಿಮೆಂಟನ್ನು ಅನುಸರಿಸದೆ ಇರತಕ್ಕದ್ದು ಒಂದು. ಇನ್ನೊಂದು ನಮಗೆ ಗೊತ್ತಿರುವ ಪ್ರಕಾರ ಕಂಪನಿಯವರಿಗೆ ಯಾವ ಕೆಲಸವನ್ನು ಕೊಟ್ಟಿದ್ದೀರಿ, ಅವರಿಗೆ

(ಶ್ರೀ ಕೋಣಂದೂರು ಲಿಂಗಪ್ಪ)

ಅನುಭವವೇ ಇಲ್ಲ. ಅದು ಏನೇ ಇರಲಿ ಈವತ್ತು ಪರಿಸ್ಥಿತಿ ಏನಾಗಿದೆ ಎಂದರೆ ಅಲ್ಲಿ 3 ದಿವಸಕ್ಕೆ, 8 ದಿವಸಕ್ಕೆ ನೂರಾರು ಜನರನ್ನು ತಂದು ಅವರಿಂದ ಹಗಲುರಾತ್ರಿ ಕೆಲಸ ಮಾಡಿಸುವುದು, 8 ಆಣೆ, ಒಂದು ರೂಪಾಯಿ ಕೊಟ್ಟು ಓಡಿಸುವುದು. ಇನ್ನೊಂದು 15 ದಿವಸಕ್ಕೆ ಬೇರೆ ಜನರನ್ನು ಟ್ರಕ್‌ನಲ್ಲಿ ಕರೆದುಕೊಂಡು ಬರುವುದು ಹಗಲುರಾತ್ರಿ ದುಡಿಸುವುದು ನಂತರ ಓಡಿಸುವುದು. ಅಲ್ಲಿ ಕೋಳಿ ಗೂಡುಗಳು ಇದ್ದಹಾಗೆ ಮನೆಗಳು ಇವೆ. ಆದರೆ ಲಕ್ಷಗಟ್ಟಲೆ ದುಡ್ಡನ್ನು ಮನೆ ಕಟ್ಟಿಸಿ ಕೊಡುತ್ತೇವೆಂದು ಹೇಳಿ ಸರ್ಕಾರದಿಂದ ತೆಗೆದುಕೊಂಡಿದ್ದಾರೆ. ಒಟ್ಟು ಎಷ್ಟು ಮನೆಗಳನ್ನು ಕಟ್ಟಿಸಿದ್ದಾರೆ ಎಂಬುದನ್ನು ಕಣ್ಣಾರೆ ನೋಡಿಕೊಂಡು ಬರೋಣ ಬನ್ನಿ. ಇದನ್ನು ನಾವು ಸಾರಿ ಸಾರಿ ಹೇಳಿದರೂ ಸರ್ಕಾರ ಕಂಡರೂ ಕಾಣದಹಾಗೆ ಕೇಳಿದರೂ ಕೇಳದಹಾಗೆ ಕಣ್ಣು ಮುಚ್ಚಿ ಕೊಂಡು ಇದ್ದರೆ ಅದಕ್ಕೆ ಏನು ಹೇಳಬೇಕು ಇದನ್ನು ತಾವು ವಿಚಾರ ಮಾಡಬೇಕು. ಇನ್ನು ಮಿನಿಮಮ್ ವೇಜಸ್ ಆಕ್ಟ್. ಈ ಮಿನಿಮಮ್ ವೇಜಸ್ ಆಕ್ಟನ್ನು ತಾವು ಪುಸ್ತಕದಲ್ಲಿ ಬರೆದು ಜನರ ಎದುರಿಗೆ ಆಕ್ಟ್ ಮಾಡುತ್ತೀರಿ, ಪಿ. ಡಬ್ಲ್ಯು. ಡಿ. ಮಂತ್ರಿಗಳು ನಟಶೇಖರರು. ವರ್ಕ್ ಚಾರ್ಜ್ಡ್ ಎಸ್ಟಾಬ್ಲಿಷ್‌ಮೆಂಟಿನಲ್ಲಿಯು 16 ಸಾವಿರ ಜನರು 15—20 ವರ್ಷಗಳಿಂದ ಸರ್ವೀಸ್ ಮಾಡಿಕೊಂಡು ಬಂದಿದ್ದಾರೆ. ಅವರಿಗೆ ದಿಕ್ಕುದೆಸೆ ಇಲ್ಲ, ಇವರಿಗೆ ಕೆಲಸ ಪರ್ಮನೆಂಟ್ ಮಾಡಿಕೊಡಿ, ರೆಗ್ಯುಲರೈಸ್ ಮಾಡಿಕೊಡಿ ಎಂದು ಬೆಳಿಗ್ಗೆ ಕೇಳಿದರೆ ಅದಕ್ಕೆ ಕಿವಿ ಕೊಡುವುದಿಲ್ಲ. ನಾವು ಸತ್ಯ ಹೇಳುವುದು ದೊಡ್ಡ ಅಪರಾಧ. ಅದಕ್ಕೆ ಪರಿಣತರು ಹಾಗೆ ಹೀಗೆ ಎಂದು ವ್ಯಾಖ್ಯಾನ ಮಾಡುತ್ತಾರೆ. ನಮ್ಮ ರಾಜ್ಯದಲ್ಲಿ ಕಾರ್ಮಿಕರಿಗೆ ಕೆಲಸ ಕೊಡುವ ಬಗ್ಗೆ 500 ರೂಪಾಯಿ ಸಂಬಳದವರೆಗೆ ನಮ್ಮ ರಾಜ್ಯದಲ್ಲಿರುವವರಿಗೆ ಕೆಲಸ ಕೊಡಬೇಕೆಂದು ಕೇಂದ್ರ ಸರ್ಕಾರದವರು ಹೇಳಿದ್ದಾರೆ. ಎಚ್. ಎಂ ಟಿ., ಎಚ್. ಎ. ಎಲ್, ಐ. ಟಿ. ಐ. ನಲ್ಲಿ ಕಸ ಗುಡಿಸುವವರಿಗೆ 150 ರೂಪಾಯಿ ಕೊಡುತ್ತಾರೆ. ಇಂತಹ ಕೆಲಸಗಾರರನ್ನು ಮತ್ತು ಕಾವಲುಗಾರರನ್ನು ಬೇರೆ ಪ್ರಾಂತ್ಯಗಳಿಂದ ತಂದು ಕೆಲಸ ಕೊಟ್ಟಿರುವುದನ್ನು ನೋಡಿದರೆ, ಸರ್ಕಾರದ ಆಜ್ಞೆಗಳಿಗೆ ಬೆಲೆ ಇಲ್ಲ, ನಮ್ಮ ರಾಜ್ಯದಲ್ಲಿ ಕೈಗಾರಿಕೆಗಳು ಬೆಳೆಯಬೇಕು ಎಂದು ಹೇಳುತ್ತಾರೆ. ಕೈಗಾರಿಕೆಗಳು ನಮ್ಮ ರಾಜ್ಯದಲ್ಲಿ ಬೆಳೆಯಬೇಕು ಎಂದರೆ ರಾಜ್ಯದ ಜನರ ಹಿತದೃಷ್ಟಿಯಿಂದ ಬೆಳೆಯಬೇಕು. ಕಿರ್ಲೋಸ್ಕರ್ ಕಂಪನಿಯವರು ಅಥವಾ ಇನ್ನೊಂದು ಕಂಪನಿಯವರು ಅವರ ಊರಿನ ಲೇಬರರ್ಸ್ ತೆಗೆದುಕೊಂಡು ಬಂದು ಕೆಲಸ ಮಾಡುವುದಾದರೆ ಅದು ನಮ್ಮ ರಾಜ್ಯದ ಕೈಗಾರಿಕೆ ಆಗುವುದಿಲ್ಲ. ನಮ್ಮ ರಾಜ್ಯದ ಕೈಗಾರಿಕೆ ಆಗಬೇಕಾದರೆ ಬಂಡವಾಳ ಅವರದ್ದು, ಜನ ನಮ್ಮದು ಆದರೆ ಆಗ ನಮ್ಮ ರಾಜ್ಯದ ಕೈಗಾರಿಕೆ ಆಗುತ್ತದೆ. ಹೀಗೆ ಕರ್ನಾಟಕ ಜನರಿಗೆ ಪ್ರಯೋಜನ ಆಗದೆ ಇರತಕ್ಕ ಯಾವುದೇ ಕಾರ್ಖಾನೆಗಳು ನಮಗೆ ಬೇಕಿಲ್ಲ, ಕೇಂದ್ರಸರ್ಕಾರದವರದ್ದೇ ಆಗಲಿ ಖಾಸಗೀಯವರದ್ದೇ ಆಗಲಿ ನಮ್ಮದೇ ಆಗಲೀ ನಮ್ಮ ರಾಜ್ಯದ ಜನರಿಗೆ ಪ್ರಯೋಜನ ಆಗತಕ್ಕ ಮತ್ತು ನಮ್ಮ ರಾಜ್ಯದ ಜನರಿಗೆ ಉದ್ಯೋಗವನ್ನು ಒದಗಿಸಿಕೊಡತಕ್ಕ ನೀತಿಯನ್ನು ಕಟ್ಟುನಿಟ್ಟಾಗಿ ತಾವು ಒದಗಿಸಿಕೊಡಬೇಕು. ಈ ಸಂದರ್ಭದಲ್ಲಿ ಒಂದು ಮಾತನ್ನು ತಮ್ಮ ಗಮನಕ್ಕೆ ತರುತ್ತೇನೆ. ಮಹಾರಾಷ್ಟ್ರ ಹೈಕೋರ್ಟ್‌ನಲ್ಲಿ ಒಂದು ಜಡ್ಜ್‌ಮೆಂಟ್ ಆಗಿದೆ. ಮಹಾರಾಷ್ಟ್ರದಲ್ಲಿ ಮರಾಠಿ ಜನರಿಗೆ ರಾಜ್ಯದಲ್ಲಿ ಕೆಲಸ ಕೊಡತಕ್ಕದ್ದು ನ್ಯಾಯ. ಅವರಿಗೆ ಕೆಲಸ ಕೊಡಬೇಕು ಎಂದು ಹೇಳಿ ಹೈಕೋರ್ಟಿನವರು ಜಡ್ಜ್‌ಮೆಂಟ್ ಕೊಟ್ಟಿರುವುದನ್ನು ನಾನು ಮೊನ್ನೆ ಓದಿದೆ.

ಉಪಾಧ್ಯಕ್ಷರು.—ಮಹಾರಾಷ್ಟ್ರದಲ್ಲಿ ಇದ್ದವರಿಗೆ ಕೆಲಸಕೊಡಬೇಕು ಎಂದು ಹೇಳಿದ್ದಾರೆ. ತಮ್ಮ ಹೇಳಿಕೆ ಪ್ರಕಾರ ಕರ್ನಾಟಕದಲ್ಲಿ ಕನ್ನಡ ಮಾತನಾಡುವವರಿಗೆ ಕೊಡಿ ಎಂದು ಹೇಳುತ್ತೀರಿ. ಬಾಕಿ ಭಾಷೆಯನ್ನೂ ಮಾತನಾಡುವಂಥವರೂ ಇಲ್ಲಿ ಇದ್ದಾರೆ.

ಶ್ರೀ ಕೋಣಂದೂರು ಲಿಂಗಪ್ಪ.—ಕರ್ನಾಟಕದಲ್ಲಿ ಇರುವ ಪ್ರತಿಯೊಬ್ಬರೂ ಕನ್ನಡಿಗರ . ಬರೇ ಮರಾಠಿ ಜನರಿಗೆ ಕೊಡಬೇಕು ಎಂದು ಹೇಳಲು ಶಿವಸೇನೆ ಅಂತಹ ಜನರು ನಾವಲ್ಲ. ನಮ್ಮದಾದ ಕರ್ನಾಟಕದಲ್ಲಿ ಇರತಕ್ಕ ಯಾರೇ ಆಗಲಿ ಅವರಿಗೆ ಕೆಲಸ ಕೊಡಬೇಕು. ಕರ್ನಾಟಕದಲ್ಲಿ ಇರುವ ಯಾರೇ ಆಗಲಿ ಕನ್ನಡ ಕಲಿಯಬೇಕು. ಇಷ್ಟೇ ನಮ್ಮ ಆಗ್ರಹ.

ಉಪಾಧ್ಯಕ್ಷರು.—ಅದರ ಜೊತೆಗೆ ಹಿಂದಿ, ಇಂಗ್ಲೀಷ್, ಮರಾಠಿ ಕಲಿಯಬಹುದು.

ಶ್ರೀ ಕೋಣಂದೂರು ಲಿಂಗಪ್ಪ.—ಕನ್ನಡವನ್ನು ಕಲಿಯುವುದರ ಜೊತೆಗೆ ಜಗತ್ತಿನ 60 ಭಾಷೆಗಳನ್ನು ಕಲಿತರೂ ನನ್ನ ಅಭ್ಯಂತರ ಇಲ್ಲ ಕೈಗಾರಿಕೆಯ ದೃಷ್ಟಿಯಿಂದ, ಮೆಡಿಕಲ್ ವಿಜ್ಞಾನ ದೃಷ್ಟಿಯಿಂದ ರಷ್ಯನ್ ಭಾಷೆ ಅವಶ್ಯಕತೆ ಇದೆ, ಜರ್ಮನ್ ಭಾಷೆಯನ್ನು ಕಲಿಯುವ

ಅವಶ್ಯಕತೆ ಇದೆ. ಅವಶ್ಯಕತೆ ಇರುವ ಎಲ್ಲಾ ಜಗತ್ತಿನ ಭಾಷೆಗಳನ್ನು ಯಾರು ಬೇಕಾದರೂ ಕಲಿಯಬಹುದು. ಕಲಿಯುವುದಕ್ಕೆ ಸಂಪೂರ್ಣವಾದ ಅವಕಾಶಗಳನ್ನೆಲ್ಲಾ ಏರ್ಪಾಡು ಮಾಡ ಬೇಕಾದುದು ಸರ್ಕಾರದ ಕರ್ತವ್ಯ. ಆದುದರಿಂದ ಈಗ ನಮ್ಮ ರಾಜ್ಯದಲ್ಲಿ ಬರತಕ್ಕ ಕಾರ್ಖಾನೆ ಗಳಲ್ಲಿ ನಮ್ಮ ಕರ್ನಾಟಕದ ಜನರಿಗೆ ಕೆಲಸವನ್ನು ನೂರಕ್ಕೆ 90-95 ರಷ್ಟು ತಾವು ಒದಗಿಸಿಕೊಡ ತಕ್ಕಂಥ ಕಠೋರವಾದ ನೀತಿಯನ್ನು ಅನುಸರಿಸದೆ ಇದ್ದರೆ, ನಮ್ಮ ರಾಜ್ಯ ಕೈಗಾರಿಕೆಯ ರಾಜ್ಯ ಎಂದು ಹೇಳಿಕೊಳ್ಳುವುದಕ್ಕೆ ಯಾವ ಅರ್ಥವೂ ಇಲ್ಲ. ಮಿನಿಮಮ್ ವೇಜಸ್ ಆಕ್ಟ್ ಪ್ರಕಾರ ಅಗ್ರಿಕಲ್ಚರಲ್ ಲೇಬರರ್ಸ್ ಕೂಡ ಕನಿಷ್ಟ ಕೂಲಿಯನ್ನು ನಿಗದಿ ಮಾಡಬೇಕು ಎಂದು ಹೇಳುತ್ತೇನೆ. ಈವತ್ತಿನ ದಿವಸ ಎಷ್ಟು ಜನ ಭೂಮಾಲೀಕರು ಕಾನೂನು ಪ್ರಕಾರ ಬೇಸಾಯ ಕೂಲಿಗಾರರಿಗೆ ಕನಿಷ್ಟ ಕೂಲಿ ಕೊಟ್ಟಿಲ್ಲ ಎಂದು ಅವರ ಮೇಲೆ ಎಷ್ಟು ಕೇಸ್ ಹಾಕಿದ್ದೀರಾ ಎಂದು ತೋರಿಸಬೇಕು. ನಮ್ಮಲ್ಲಿ ದೊಡ್ಡ ದೊಡ್ಡ ಜಮೀನ್ದಾರರು ಲೇಬರ್ ಉಪಯೋಗಿಸಿಕೊಂಡೇ ನೂರಾರು ಎಕರೆ ಸಾಗುವಳಿ ಮಾಡುತ್ತಾ ಇದ್ದಾರೆ. ಅವರು ರಿಜಿಸ್ಟರ್ ಇಟ್ಟು ವ್ಯವಸಾಯ ಕೂಲಿಗಾರರಿಗೆ ಸರಿಯಾಗಿ ಕೆಲಸ ಕೊಡುತ್ತಿದ್ದಾರೆಯೇ ? ಎಷ್ಟು ಜನ ಭೂಮಾಲೀಕರ ಮೇಲೆ ಕೇಸ್ ಹಾಕಿದ್ದೀರಿ? ಅದನ್ನು ಲೆಕ್ಕ ಕೊಡಬೇಕು ಎಂದು ಹೇಳುತ್ತೇನೆ.

ಇನ್ನು ಎಂಪ್ಲಾಯ್‌ಮೆಂಟ್ ಎಕ್ಸ್‌ಚೆಂಜ್ ಬಗ್ಗೆ ಒಂದು ಮಾತನ್ನು ಹೇಳಿ ಮುಗಿಸುತ್ತೇನೆ ಈವತ್ತು ನಮ್ಮ ಸರ್ಕಾರದವರು ಮಾಲೀಕರು ಅಥವಾ ಓನರ್ ಆಗಿರತಕ್ಕವರ ಮೇಲೆ ಕಾರ್ಮಿಕ ವರ್ಗದ ಹಿತದೃಷ್ಟಿಯಿಂದ ಕೇಸ್ ಹಾಕಿದರೆ ಅದನ್ನೂ ವಾಪಸ್ಸು ತೆಗೆದುಕೊಂಡಿದ್ದಾರೆ. ಉದಾಹರಣೆಗೆ ಸೆಕ್ಷನ್ 27ರ ಪ್ರಕಾರ ಕೇಸನ್ನು ಮಾಲೀಕ ವರ್ಗದ ಮೇಲೆ ಹಾಕಿ ಆ ಕೇಸನ್ನು ವಾಪಸ್ ತೆಗೆದುಕೊಂಡಿದ್ದೀರಿ. ಸಿ. ಸಿ. ನಂ. 14 : 119 ಹಿಂದೂಸ್ಥಾನ್ ಸ್ಟೀಲ್ ಡ್ಯೂರಿಂಗ್ ಲಿಮಿಟೆಡ್ ಅವರ ಮೇಲೆ 1971ರಲ್ಲಿ ಹಾಕಿದ ಕೇಸು ಮತ್ತು ಸೆಂಟ್ರಲ್ ಟಾಕೀಸ್ ಬೆಂಗಳೂರು ಇವರ ಮೇಲೆ ಹಾಕಿದ ಕೇಸನ್ನು ವಾಪಸ್ ತೆಗೆದುಕೊಂಡಿದ್ದೀರಿ.

(MADAM SPEAKER in the Chair)

ರಾಜಾಜಿನಗರದ ಕೇಸನ್ನು ವಾಪಸ್ ತೆಗೆಸಿದ್ದೀರಿ. ಹೀಗೆ ಒಂದು ಪುರಾಣವೇ ಇದೆ. ಇದರಲ್ಲಿ ನಮಗೆ ಅರ್ಥವಾಗುವದೇನೆಂದರೆ, ಸರ್ಕಾರ ಮಾಲೀಕರ ಪರವಾಗಿದೆಯೇ ಹೊರತು ಕಾರ್ಮಿಕರ ಪರವಾಗಿ ಇರತಕ್ಕಂಥ ಸರ್ಕಾರವಲ್ಲ. ಕಾರ್ಮಿಕರಿಗೆ, ಬಡವರಿಗೆ ವಂಚನೆಮಾಡು ವುದಕ್ಕೆ ಘೋಷಣೆಮಾಡುವ ಸರ್ಕಾರ, ನಿಜವಾಗಿ ಮಾಲೀಕರನ್ನು, ಬಂಡವಾಳಶಾಹಿಗಳನ್ನು ರಕ್ಷಣೆ ಮಾಡುವ ಸರ್ಕಾರವೇ ಹೊರತು ನಿಜವಾಗಿ ಕಾರ್ಮಿಕರಿಗೆ ಪ್ರಯೋಜನಕಾರಿಯಾದ ಸರ್ಕಾರವಲ್ಲ.

5-00 P. M.

ಇನ್ನು ಎಂಪ್ಲಾಯಮೆಂಟ್ ಎಕ್ಸ್‌ಛೇಂಜ್ ವಿಷಯ. ಇದನ್ನು ಏಕೆ ಇಟ್ಟಿದ್ದೀರಿ ? ಯಾವುದೇ ನೌಕರಿಗೆ ತೆಗೆದುಕೊಳ್ಳುವಾಗ ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್ ಮೂಲಕ ಹೆಸರುಗಳನ್ನು ತೆಗೆದುಕೊಳ್ಳಬೇಕು ಎಂದು ಇದೆ. ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜಿಗೆ ಹೆಸರುಗಳನ್ನು ಕೊಡಿ ಎಂದು ಕೇಳದೆ ಅಪಾಯಿಂಟ್ ಮಾಡಿರತಕ್ಕ ಉದಾಹರಣೆ ಇದೆ. ಉದಾಹರಣೆಗೆ ಹೇಳುವುದಾದರೆ, ಕೆ.ಎಸ್.ಆರ್.ಟಿ.ಸಿ., ಎಂ.ಎಸ್.ಆರ್.ಟಿ.ಸಿ., ಪಿ.ಡಬ್ಲ್ಯು, ಎಸ್.ಟಿ. ಮುಂತಾದ ಕೆಲವು ಸಂಸ್ಥೆ ಗಳು ತಾವೇ ನೇರವಾಗಿ ನೇಮಕಗಳನ್ನು ಮಾಡುತ್ತಿವೆ. ಹಾಗಾದರೆ ಎಂಪ್ಲಾಯ್‌ಮೆಂಟ್ ಇರಬೇಕಾದ ಅವಶ್ಯಕತೆ ಏನು ? ತೆಗೆದುಬಿಡಿ. ಸರ್ಕಾರದ ಅಂಗಸಂಸ್ಥೆಗಳು ಅಪಾಯಿಂಟ್ ಮಾಡುವಾಗ ಎಂಪ್ಲಾಮೆಂಟ್ ಎಕ್ಸ್‌ಚೇಂಜ್ ಮೂಲಕ ಹೆಸರುಗಳನ್ನು ತರಿಸಿಕೊಂಡು ಮಾಡಬೇಕು. ಹಳ್ಳಿಗಳಲ್ಲಿರುವವರು ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜಿನಲ್ಲಿ ರಿಜಿಸ್ಟರ್ ಮಾಡಿದರೆ ಇವತ್ತಲ್ಲ, ನಾಳೆ ಸಿಗುತ್ತದೆ ಎಂದು ರಿಜಿಸ್ಟರ್ ಮಾಡಿಸಿ ಬಾಯಿಬಿಡುತ್ತಾ ಕೂತಿರುತ್ತಾರೆ. ಸರ್ಕಾರದ ಅಂಗ ಸಂಸ್ಥೆಗಳು ನೇಮಕಗಳನ್ನು ಮಾಡುವಾಗ, ರೆಕ್ರೂಟ್‌ಮೆಂಟ್ ಕಮಿಟಿಗಳನ್ನು ಮಾಡಿಕೊಂಡಿರು ತ್ತಾರೆ, ಅವರು ಎಂಪ್ಲಾಯ್‌ಮೆಂಟ್ ಎಕ್ಸ್‌ಚೆಂಜನ್ನು ಕೇಳುವುದೇ ಇಲ್ಲ, ಅಲ್ಲಿ ಬರತಕ್ಕ ಅರ್ಜಿ ಗಳನ್ನು ಕನ್ಸಿಡರ್ ಮಾಡುತ್ತಾರೆಯೇ ಹೊರತು ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್ ಮೂಲಕ ತರಿಸುವುದಿಲ್ಲ. ಹಲವಾರು ಜನರು ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜನ್ನು ನಂಬಿಕೊಂಡು ಕೆಲಸ

(ಶ್ರೀ ಕೋಣಂದೂರು ಲಿಂಗಪ್ಪ)

ವಿಲ್ಲದೆ ಇದ್ದಾರೆ. ಆದುದರಿಂದ ಒಂದು ಕ್ರಮವನ್ನನುಸರಿಸಿ, ಯಾವುದೇ ಇಲಾಖೆಯಲ್ಲಿ ನೇಮಕ ಮಾಡುವಾಗ ಎಂಪ್ಲಾಯ'ಮೆಂಟ' ಎಕ್ಸ್‌ಚೇಂಜ್ ಮೂಲಕ ಬರಬೇಕು ಎಂದು ಕಟ್ಟುನಿಟ್ಟಾಗಿ ಜಾರಿಗೆ ತರಬೇಕು ಎಂದು ಕೇಳಿಕೊಳ್ಳುತ್ತೇನೆ.

ಬೇಸಾಯ ಕೂಲಿಗಾರರ ಬಗ್ಗೆ ಸಾಕಷ್ಟು ಹೇಳಿದ್ದಾರೆ. ದಕ್ಷಿಣಕನ್ನಡ ಜಿಲ್ಲೆಯಲ್ಲಿ ಟ್ಯಾಪರ್ಸ್ ವಾರ್ತೆದಾರರು ಇದ್ದಾರೆ. ಅವರು ಮರದ ತುದಿಯಲ್ಲಿ ಕೆಲಸಮಾಡುತ್ತಾರೆ. ಅಕಸ್ಮಾತ್ ಅವರು ಕಾಲು ಜಾರಿ ಬಿದ್ದ ಅನೇಕ ಘಟನೆಗಳಿವೆ. ಅವರ ಜೀವಕೆ ಯಾವ ಭರವಸೆ ಇಲ್ಲ. ಒಂದು ಸೀಸೆ ಇಳಿಸಿದರೆ, 50 ರಿಂದ 75 ಪೈಸೆವರೆಗೆ ಕೊಡಬೇಕು ಎಂದು ಹೋರಾಟ ನಡೆಯುತ್ತಿದೆ. ಒಂದು ಸೀಸೆ 50 ರಿಂದ ಪೈಸೆಗೆ ತೆಗೆದುಕೊಂಡು ಅಂಗಡಿಯಲ್ಲಿ $1\frac{1}{3}$, 2, 3 ರೂಪಾಯಿವರೆಗೆ ಮಾರಾಟ ವಾಗುವುದು ಬೇಕಾದಷ್ಟು ಕಡೆ ನಡೆಯುತ್ತೆ. ಯಾರು ನಿಜವಾಗಿ ಕಷ್ಟಪಡುತ್ತಾರೆ, ಅವರಿಗೆ ಯಾವರೀತಿಯಾದ ಪ್ರಯೋಜನವಾಗುತ್ತಾ ಇಲ್ಲ. ಅವರು ಜೀವ ಒತ್ತೆ ಇಟ್ಟು ಕೆಲಸಮಾಡುತ್ತಾರೆ ಅಷ್ಟೆ. ಮಾರ್ತೆದಾರರು ಸರಿಯಾದಂಥ ವೇಜಸ್ ಕೊಡತಕ್ಕ ನೀತಿಯನ್ನು ಕಟ್ಟುನಿಟ್ಟಾಗಿ ಅನುಸರಿಸಬೇಕು. ಲೇಬರ್ ಇನ್‌ಸ್ಪೆಕರ್', ಕಂಟ್ರಾಕ್ಟರ್', ಅವರ ಆಫೀಸಿನಲ್ಲೇ ಕುಳಿತುಕೊಂಡು ಎಲ್ಲದಕ್ಕೂ ಋಜು ಮಾಡುತ್ತಾರೆ. ಈ ಬಗ್ಗೆ ಕಮಿಷನರನ್ನು ನೇಮಕವಾಡಿದ್ದೀರಿ, ಆ ಕಮಿಷನರು ಕೂಡ ವರದಿ ಕೊಟ್ಟಿರುವುದು ತಮ್ಮ ಗಮನಕ್ಕೆ ಬಂದಿರಬಹುದು. ವರದಿಗಳು ವರದಿಗಳು ಎಂದು ಒರಗಿಕೊಂಡು ಕೂತಿರುತ್ತೀರಿ. ವರದಿ ಬಂದರೆ ಶಿಫಾರಸು ನೋಡಿ ಅದನ್ನು ಕಾರ್ಯಗತ ಮಾಡುವುದಕ್ಕೆ ಯಾವರೀತಿ ಕಾರ್ಯಕ್ರಮ ಹಾಕಿಕೊಳ್ಳದೇ ಇರುವುದನ್ನು ವಿಷಾದದಿಂದ ಹೇಳಬೇಕಾಗಿದೆ. ಪೀಣ್ಯಾ ದಲ್ಲಿ ಕಾರ್ಮಿಕರಿಗೆ ಮೀಸಲಾದಂಥ ಇ.ಎಸ್.ಐ. ಆಸ್ಪತ್ರೆ ಇದೆ. ಅದನ್ನು ಕಣ್ಣುಬಿಟ್ಟು ನೋಡಬೇಕು. ಆ ಆಸ್ಪತ್ರೆಗೆ ಔಷಧೋಪಚಾರ ಕೂಡ ಕೊಡದೇ ಇರತಕ್ಕ ನಿಷ್ಕರುಣೆ ಸರ್ಕಾರ ಎಂದು ಇಷ್ಟು ಮಾತ ಹೇಳಬಲ್ಲೆ.

†ಶ್ರೀ ಕೆ. ಎಂ. ರುದ್ರಪ್ಪ (ಸಕಲೇಶಪುರ).—ಸನ್ಮಾನ್ಯ ಸಭಾಧ್ಯಕ್ಷಿಣಿಯವರೇ, ನಾನು ಡಿಮ್ಯಾಂಡ್ ನಂಬರ್, 33, 56, 59 ಇವುಗಳನ್ನು ಸಮರ್ಥನೆ ಮಾಡುತ್ತಾ, ಪ್ರವಾಸೋದ್ಯಮದ ಮೇಲೆ ಮಾತನಾಡಬೇಕು ಎಂದು ಇಚ್ಛೆ ಇದೆ. ಈಗ ಮಾತನಾಡಿದಂಥ ಸದಸ್ಯರು ಲೇಬರ್ ಸಮಸ್ಯೆ ಮೇಲೆ ಮಾತನಾಡಿದ್ದಾರೆ. ಟೂರಿಸಂ ಮೇಲೆ ಮಾತನಾಡಿಲ್ಲ. ಬಹುಮುಖ್ಯವಾಗಿ ಕರ್ನಾಟಕ ಪ್ರದೇಶದಲ್ಲಿ ಪ್ರವಾಸಿಗರನ್ನು ಆಕರ್ಷಣೆ ಮಾಡುವ ಅನೇಕ ಸ್ಥಳಗಳಿವೆ. ಕರ್ನಾಟಕ ರಾಜ್ಯ ಶಿಲ್ಪಕಲೆಗೆ ಹೆಸರುವಾಸಿಯಾಗಿದೆ. ಹೊರದೇಶದವರು ಹೆಚ್ಚಾಗಿ ಉತ್ತರ ಭಾರತದಲ್ಲಿ ಪ್ರವಾಸ ಮಾಡುತ್ತಾರೆ. ದಕ್ಷಿಣ ಭಾರತಕ್ಕೆ ಬಂದರೆ ಬೇಲೂರು, ಹಳೇಬೀಡು, ಶ್ರವಣಬೆಳಗೊಳ ಮುಂತಾದ ಕೆಲವು ಸ್ಥಳಗಳಿಗೆ ಬರುತ್ತಾರೆ. ಅಲ್ಲಿ ಪ್ರವಾಸಿಗರನ್ನು ಯಾವರೀತಿ ಆಕರ್ಷಣೆ ಮಾಡಬೇಕೋ ಆ ರೀತಿ ಮಾಡುತ್ತಾ ಇಲ್ಲ. ಹೆಚ್ಚಿಗೆ ಸೌಲಭ್ಯ ಮಾಡಿಕೊಡುತ್ತಾ ಇಲ್ಲ. ಈ ಇಲಾಖೆಗೆ ರಾಜ್ಯದಲ್ಲಿ 7 ಲಕ್ಷ 27000 ರೂಪಾಯಿಗಳನ್ನು ಮಾತ್ರ ಖರ್ಚುಮಾಡುತ್ತೀರಿ, ಕನಿಷ್ಟಪಕ್ಷ 50 ಲಕ್ಷ ರೂಪಾಯಿ ಗಳನ್ನಾದರೂ ಖರ್ಚುಮಾಡಿದ್ದರೆ ಚೆನ್ನಾಗಿತ್ತು ಎಂದು ನನ್ನ ಸಲಹೆ. ನೀವು ಏನು ಬಂಡವಾಳ ಹಾಕುತ್ತೀರೋ, ಅದಕ್ಕೆ ಪ್ರತಿಫಲ ಬರುತ್ತದೆ. ಪ್ರವಾಸಿಗರು ಬಂದರೆ ವಿದೇಶೀವಿನಿಮಯ ಹೆಚ್ಚಾಗಿ ಬರುತ್ತದೆ, ನಮ್ಮ ಸಂಸ್ಕೃತಿ ಪರದೇಶಗಳಲ್ಲಿ ಪ್ರಚಾರವಾಗಿ ಅದರಿಂದ ನಮಗೆ ಹೆಚ್ಚಿನ ಪ್ರಯೋಜನ ಮತ್ತು ಲಾಭ ಬರುತ್ತದೆ. ಈ ದೃಷ್ಟಿಯಿಂದ ಈ ಇಲಾಖೆ ಖರ್ಚುಮಾಡತಕ್ಕ ಹಣ, ಒದಗಿಸಿರತಕ್ಕಂತ ಸೌಲಭ್ಯ ಕಡಿಮೆ. ಹಾಸನ ಜಿಲ್ಲೆ ಬಗ್ಗೆ ಪ್ರಸ್ತಾಪಮಾಡುವುದಾದರೆ ಪ್ರವಾಸಿಗರಿಗೆ ಏನು ಸೌಕರ್ಯ ಮಾಡಿಕೊಟ್ಟಿದ್ದೀರಿ ಅದು ಏನೇನೂ ಸಾಲದು, ಅಲ್ಲಿ ಒಂದು ಸಬ್ ಆಫೀಸ್ ಇದೆ. ಸೆಟ್ಟಿನ ಸಲಕರಣೆ ಗಳು ಇಲ್ಲ, ಯಾವ ಒಂದು ಅನುಕೂಲವೂ ಇಲ್ಲ. ಪ್ರವಾಸಿಗರಿಗೆ ಸರಿಯಾಗಿ ಇನ್‌ಫರ್ಮೇಷನ್ ಕೊಡದೇ ಇರುವುದು ನಮ್ಮ ಗಮನಕ್ಕೆ ಬಂದಿದೆ. ಅಲ್ಲಿ ಒಂದು ಹೋಟೆಲ್ ಇದೆ. ಅದು ದುಬಾರಿ ವೆಚ್ಚದ್ದು. ಅಲ್ಲಿ ಜನಸಾಮಾನ್ಯರು ಇಳಿದುಕೊಳ್ಳುವುದಕ್ಕೆ ಬಹಳ ಕಷ್ಟವಾಗುತ್ತದೆ. ಅಲ್ಲಿ ಒಂದು ದಿವಸಕ್ಕೆ ಕನಿಷ್ಟಪಕ್ಷ 50 ರೂಪಾಯಿ ಖರ್ಚು ಬರುತ್ತದೆ ಎಂದು ನಾನು ತಿಳಿದಿದ್ದೇನೆ. ಬೇಲೂರು ಹಳೇಬೀಡು, ಶ್ರವಣಬೆಳಗೊಳ ಅಷ್ಟೇ ಅಲ್ಲದೇ, ಹಾಸನ ಜಿಲ್ಲೆಯಲ್ಲಿ ಶಿಲ್ಪಕಲೆಗೆ ಹೆಸರಾದ ಅನೇಕ ದೇವಸ್ಥಾನಗಳಿವೆ. ಅರಸೀಕೆರೆ, ಹಾರನಹಳ್ಳಿ, ಕೋರಮಂಗಲ, ಕೆಂಚೋಡಿಗಳಲ್ಲಿ ಹೊಯ್ಸಳರ ಕಟ್ಟಿಸಿದ ದೇವಸ್ಥಾನಗಳಿವೆ ನಾವು ನೋಡಿದ್ದೇವೆ. ಬೇಲೂರಿನಲ್ಲಿರುವಂಥ ದೇವಸ್ಥಾನ ಇಡಿ, ಪ್ರಪಂಚದಲ್ಲೇ ಇಲ್ಲ, ಶಿಲ್ಪಕಲೆಗೆ ಅಷ್ಟು ಹೆಸರುವಾಸಿಯಾದುದು. ಅಲ್ಲಿಗೆ ಪ್ರವಾಸಿಗರು ಬಂದರೆ ಅರ್ಧ ಗಂಟೆ ಇರುವುದಿಲ್ಲ, ಒಂದು ಗಂಟೆ ಇರುವುದಿಲ್ಲ, ಅಲ್ಲಿ ಕ್ಯಾಂಟೀನ್ ವ್ಯವಸ್ಥೆ ಇಲ್ಲ. ಹಳೇಬೀಡ್ ನಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಇಲ್ಲ, ಪ್ರೊಟೆಕ್ಟ್ ವಾಟರ್ ಇಲ್ಲ, ನೀರು ಚೊಕ್ಕಟವಾಗಿರು ವುದಿಲ್ಲ. ಆದುದರಿಂದ ಪ್ರವಾಸಿಗರು ಕುಡಿಯುವುದಿಲ್ಲ.

ಇನ್ನು ಒಂದು ವಿಚಾರವೇನೆಂದರೆ ಅಲ್ಲಿರತಕ್ಕಂಥ ಗೈಡ್ಸ್‌ಗಳಿಗೆ ಹರಕುಮುರಕು ಇಂಗ್ಲೀಷ್ ಬರುತ್ತದೆ. ಅವರು ಅಲ್ಲಿಯ ಚರಿತ್ರೆಯನ್ನು ಸರಿಯಾಗಿ ತಿಳಿದುಕೊಂಡಿರುವುದಿಲ್ಲ. ಅಲ್ಲಿಗೆ ಹಿಂದಿ ಬರತಕ್ಕ ಗೈಡ್ಸ್‌ಗಳನ್ನು ಹಾಕಬೇಕು. ಅಲ್ಲಿಗೆ ಉತ್ತರ ಭಾರತದಿಂದ ಮತ್ತಿತರ ಕಡೆಗಳಿಂದ ಪ್ರವಾಸಿಗರು ಬರುವುದರಿಂದ ಇಂಗ್ಲೀಷ್ ಮತ್ತು ಹಿಂದಿ ತಿಳಿದಿರತಕ್ಕಂಥ ಗೈಡ್ಸ್‌ಗಳನ್ನು ಮತ್ತು ಅಲ್ಲಿಯ ಸ್ಥಳದ ಚಾರಿತ್ರ್ಯವನ್ನು ತಿಳಿದುಕೊಂಡಿರುವಂಥವರನ್ನು ಹಾಕಬೇಕು. ಅಂಥವರಿದ್ದರೆ ಪ್ರವಾಸಿಗರಿಗೆ ಅಲ್ಲಿಯ ಮಾಹಿತಿ ಸರಿಯಾಗಿ ಅರ್ಥವಾಗುತ್ತದೆ.

ಹಾಸನದಲ್ಲಿ ಒಂದು ಟೂರಿಸ್ಟ್ ರಿಸೆಪ್ಷನ್ ಸೆಂಟರ್ ಮಾಡಬೇಕು ಎಂದು ಈ ಸಂದರ್ಭದಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಏತಕ್ಕೆ ಎಂದರೆ ಬೆಂಗಳೂರಿನಲ್ಲಿರತಕ್ಕ ರೀತಿಯಲ್ಲಿ ರಿಸೆಪ್ಷನ್ ಸೆಂಟರ್ ಮಾಡುವುದರಿಂದ, ಹಾಸನವನ್ನು ಕೇಂದ್ರವಾಗಿ ಉಪಯೋಗಿಸಿಕೊಂಡು ಎಲ್ಲಾ ಕಡೆಗೂ ಹೋಗಿ ಬರುವುದಕ್ಕೆ ಅನುಕೂಲವಾಗುತ್ತದೆ. ಮಡಿಕೇರಿ, ಕೊಡಗು, ಭಾಗಮಂಡಲ, ನಾಗರಹೊಳೆ ಇನ್ನು ಮುಂತಾದ ಕಡೆಗಳಿಗೆ ಪ್ರವಾಸಿಗರು ಹೋಗಿಬರಲು ಅನುಕೂಲವಾಗುತ್ತದೆ. ಈ ನಗರ ದಲ್ಲಿರತಕ್ಕ ಸೌಲಭ್ಯ ಸಾಲದು. ಅದಕ್ಕಾಗಿ ಕೇಂದ್ರದಿಂದ ಹೆಚ್ಚಿನ ಹಣವನ್ನು ತೆಗೆದುಕೊಂಡು 5ನೆ ಪಂಚವಾರ್ಷಿಕ ಯೋಜನೆಯಲ್ಲಿ ಕನಿಷ್ಟ ಪಕ್ಷ 5 ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕೆಂದು ರಾಜ್ಯ ಸರ್ಕಾರದವರು ಯೋಚನೆ ಮಾಡಿದ್ದರು, ಆದರೆ ಕೇಂದ್ರದವರು ಕೊಟ್ಟಿರತಕ್ಕಂಥದ್ದು ಕೇವಲ ಒಂದು ಕೋಟಿ ರೂಪಾಯಿಗಳು. ಅವರು ಕೊಟ್ಟಿರತಕ್ಕದ್ದು ಏನೇನು ಸಾಲದು. ಆದುದರಿಂದ ಕೇಂದ್ರದಮೇಲೆ ನಿಮ್ಮ ಪ್ರಭಾವವನ್ನು ಬೀರಿ ಕರ್ನಾಟಕದಲ್ಲಿರತಕ್ಕ ಶಿಲ್ಪಕಲೆ ಮತ್ತು ರಮಣೀಯವಾದ ಸ್ಥಳವನ್ನು ಪ್ರವಾಸಿಗರಿಗೆ ತೋರಿಸುವುದಕ್ಕೆ ಏರ್ಪಾಡು ಮಾಡಬೇಕು. ಹಾಸನ ಜಿಲ್ಲೆ ಒಂದೇ ಅಲ್ಲ ಅದೇರೀತಿ ಬೇಕಾದಷ್ಟು ಡ್ಯಾಮ್ ‌ಸೈಟ್‌ಗಳು ಇವೆ ಉದಾಹರಣೆಗೆ ತುಂಗಭದ್ರ ಡ್ಯಾಮ್, ವಾಣಿವಿಲಾಸ ಸಾಗರ, ಮಲಪ್ರಭಾ ಅಂತ ಕಡೆ ರಮಣೀಯವಾದ ದೃಶ್ಯವಿದೆ, ಅಲ್ಲಿ ಜನಗಳು ತಂಗುವ ವಿಚಾರವಿರುತ್ತದೆ ಅಂಥ ಕಡೆ ಒಳ್ಳೆಯ ಸೌಕರ್ಯವಿರುವುದಿಲ್ಲ. ಆದ್ದರಿಂದ ಅಂಥ ಕಡೆ ಹೆಚ್ಚಿನ ಸೌಕರ್ಯ ಮಾಡಬೇಕಾಗಿದೆ.

ಇನ್ನು ಮೈಸೂರಿನಲ್ಲಿ ಲಲಿತ ಮಹಲ್‌ನ್ನು ಇಂಟರ್ ನ್ಯಾಶನಲ್ ಲೆವಲ್‌ನಲ್ಲಿ ಒಂದು ಹೋಟೆಲ್‌ಆಗಿ ಮಾಡಬೇಕೆಂದು ಮಾಡಿದ್ದಾರೆ. ಅಲ್ಲಿಗೆ ಹೋಗಿ ನೋಡಿದರೆ ಹೆಚ್ಚಿನ ಸೌಕರ್ಯ ಕಾಣುವುದಿಲ್ಲ. ಅಲ್ಲದೆ ಮೈಸೂರು ಸಿಟಿಗೆ ಬಹಳ ದೂರದಲ್ಲಿ ಇದೆ. ಅದಕ್ಕೆ ಏನು ಸೌಕರ್ಯ ಮಾಡಿದ್ದೀರಿ ? ಅದರ ಪಕ್ಕದಲ್ಲಿ ನೆಹರು ಲೋಕವನ್ನು ಮಾಡಬೇಕೆಂದು ಯೋಚನೆ ಮಾಡಿದ್ದೀರಿ ಎಂದು ತಿಳಿದು ಬಂದಿತು. ಕೇಂದ್ರ ಸರ್ಕಾರದಿಂದ ಬೇಗ ಹಣವನ್ನು ತೆಗೆದುಕೊಂಡು ನೆಹರೂ ಲೋಕವನ್ನು ಪ್ರಾರಂಭ ಮಾಡಬೇಕು ಮಾಡಿದಾಗ ಎಲ್ಲಾ ಜನರಿಗೂ ಆಕರ್ಷಣೀಯ ಸ್ಥಳವಾಗು ವಂತೆ ಮಾಡಬೇಕು. ಹಾಸನದ ಪಕ್ಕದಲ್ಲಿ ಬೂವನ ಹಳ್ಳಿಯಲ್ಲಿ ಏರ್‌ಸ್ಟ್ರಿಪ್ ಕೆಲಸ ಅರ್ಧ ಮುಕ್ಕಾಲು ಆಗಿ ಕೆಲಸ ನಿಂತಿದೆ. ಇದನ್ನು ಪೂರೈಸಿದರೆ ವಿಮಾನಗಳು ಬಂದು ನಿಲ್ಲುವುದಕ್ಕೆ ಅವಕಾಶ ವಾಗುತ್ತದೆ. ಮುಂದೆ ಮಂಗಳೂರಿನ ಕಡೆಗೆ ಹೋಗುವುದಕ್ಕೆ ಅನುಕೂಲವಾಗುತ್ತದೆ. ಈ ಕಾರ್ಯವನ್ನು ತುರ್ತು ಗೊಳಿಸಬೇಕು ಎಂದು ಈ ಸಮಯದಲ್ಲಿ ಬಿನ್ನವಿಸಿಕೊಳ್ಳುತ್ತೇನೆ. ಮತ್ತೇ ಅದೇ ರೀತಿ ಬಸವ ಕಲ್ಯಾಣ, ಬಿಜಾಪುರ, ನಂದಿಬೆಟ್ಟ. ಕೆಮ್ಮಣ್ಣಗುಂಡಿ, ಇಂಥ ಎಲ್ಲಾ ಪ್ರೇಕ್ಷಣೀಯ ಸ್ಥಳಗಳಲ್ಲಿ ಜನರು ತಂಗುವುದಕ್ಕೆ ಇಳಿದು ಕೊಳ್ಳುವುದಕ್ಕೆ ಅವಕಾಶ ಮಾಡಿಕೊಡಬೇಕು. ಸೊಳ್ಳೆಗಳ ಕಾಟ ಕೂಡ ಜಾಸ್ತಿಯಾಗಿದೆ. ಎಲ್ಲೆಲ್ಲಿ ಪ್ರವಾಸಿಗರು ಬರುತ್ತಾರೆ ಅಂಥ ಕಡೆಗಳಲ್ಲಿ ಸೊಳ್ಳೆಗಳ ನಿವಾರಣೆಯನ್ನು ಮಾಡುವುದಕ್ಕೆ ನೀವು ಕಾರ್ಯಕ್ರಮವನ್ನು ಹಾಕಿಕೊಳ್ಳಬೇಕಾಗಿದೆ. ಬಹು ಮುಖ್ಯವಾಗಿ ವಿದೇಶಿಯರು ನಮ್ಮ ರಾಜ್ಯಕ್ಕೆ ಬಂದಾಗ ಅವರಲ್ಲಿ ಒಂದು ಸದ್ಭಾವನೆ ಹೊಂದುವಂತೆ ನಮ್ಮ ಜನಗಳು ವರ್ತಿಸಬೇಕು. ಅವರ ಹತ್ತಿರ ಒಳ್ಳೆಯ ಮಾತನ್ನು ಆಡಬೇಕು, ಮತ್ತು ಅವರಿಗೆ ಏನಾದರೂ ಸಣ್ಣಪುಟ್ಟ ಸಹಾಯ ಬೇಕಾಗಿದ್ದರೆ ಮಾಡಿಕೊಡಬೇಕು. ಕೆಲವು ಸಮಯದಲ್ಲಿ ಪ್ರವಾಸಿಗರು ಬರುತ್ತಾರೆ ಸರಿಯಾದ ಗೈಡ್ಸ್ ಇರುವುದಿಲ್ಲ, ಆಗ ಕೆಲವು ಸಂದರ್ಭದಲ್ಲಿ ಕೆಲವು ಜನರು ಬಹಳ ತಾತ್ಸಾರ ಮನೋಭಾವನೆಯಿಂದ ಅವರಿಗೆ ಸರಿಯಾದ ಉತ್ತರವನ್ನೂ ಕೊಡುವುದಿಲ್ಲ, ಅವರಿಗೆ ದಾರಿಯನ್ನು ಸಹ ತೋರಿಸುವುದಿಲ್ಲ ಅಂಥ ಸಮಯದಲ್ಲಿ ಅವರಿಗೆ ನಮ್ಮ ಮೇಲೆ ಒಳ್ಳೆಯ ಭಾವನೆ ಬರುವುದಿಲ್ಲ. ಆ ರೀತಿ ಭಾವನೆ ಬಂದರೆ ಅವರು ಪರದೇಶಗಳಿಗೆ ವಾಪಸ್ಸು ಆದ ಮೇಲೆ ಅಪಪ್ರಚಾರವನ್ನು ಮಾಡುತ್ತಾರೆ. ಆದುದರಿಂದ ಗೈಡ್ಸ್ ಮತ್ತು ಅಲ್ಲಿಯ ಸ್ಥಳದ ಜನಗಳು ಸರಿಯಾದ ಮಾಹಿತಿ ಕೊಡತಕ್ಕ ಏರ್ಪಾಡನ್ನು ಮಾಡಬೇಕೆಂದು ತಮ್ಮಲ್ಲಿ ಪ್ರಾರ್ಥನೆ ಮಾಡುತ್ತೇನೆ.

ಇನ್ನು ಲೇಬರ್ ಡಿಪಾರ್ಟ್‌ಮೆಂಟಿನ ಬಗ್ಗೆ ಒಂದೇ ಒಂದು ಮಾತನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ. ಅದರಲ್ಲಿ ಈ ಪ್ಲಾನ್‌ಟೇಷನ್ ಲೇಬರ್ ಬಹಳ ಮುಖ್ಯವಾದದ್ದು. ಈ ಪ್ಲಾನ್‌ಟೇಷನ್ ಲೇಬರ್‌ನಲ್ಲಿ 25 ಲಕ್ಷಕ್ಕೂ ಮೇಲ್ಪಟ್ಟು ಇರತಕ್ಕ ಕಾಫಿ ಮತ್ತು ಏಲಕ್ಕಿ, ಟೀ

(ಶ್ರೀ ಕೆ. ಎಂ. ರುದ್ರಪ್ಪ)

ಪ್ಲಾನ್‌ಟೇಷನ್ ರಿಜಿಸ್ಟರ್ ಸಂಸ್ಥೆಯಾಗಿದೆ, ಲೇಬರ್ ಆಕ್ಟ್ ಅನ್ವಯವಾಗುತ್ತದೆ. ಎರಡು ಲಕ್ಷಕ್ಕೂ ಮೇಲ್ಪಟ್ಟು ಲೇಬರ್ ಪಾಪುಲೇಷನ್ ಈ ಪ್ಲಾನ್‌ಟೇಷನ್ನಿನಲ್ಲಿ ಇದೆ. ಅವರಿಗೆ ಹೆಚ್ಚಿನ ಸೌಕರ್ಯವನ್ನು ಮಾಡಿಕೊಡುತ್ತಿದ್ದೀರಾ ? ಏತಕ್ಕೆ ಈ ವಿಚಾರವನ್ನು ಹೇಳುತ್ತಿದ್ದೇನೆ ಎಂದರೆ, ಲೇಬರ್ಸ್‌ಗೆ ನ್ಯಾಯವನ್ನು ಒದಗಿಸುವುದಕ್ಕೆ, ಸೌಕರ್ಯಗಳನ್ನು ಒದಗಿಸುತ್ತೇವೆಂದು ಕೆಲವು ಮುಖಂಡರುಗಳು ಸೇರಿಕೊಂಡು ಪ್ಲಾಂಟರ್ಸ್‌ನ್ನು ಹೆದರಿಸಿ ಸುಲಿಗೆ ಮಾಡಿ, ತೊಡಕನ್ನು ಉಂಟು ಮಾಡಿ, ಇಲ್ಲದೆ ಸ್ಟ್ರೈಕ್ ಮಾಡಿ ಕೆಲಸ ಕುಂಠಿತವಾಗುವ ರೀತಿಯಲ್ಲಿ ಮಾಡುತ್ತಿದ್ದಾರೆ. ಇದರಿಂದ ದೇಶಕ್ಕೆ ಬಹಳ ಹಾನಿಯಾಗುತ್ತಿದೆ. ಪ್ಲಾನ್‌ಟೇಷನ್ನಿನಿಂದ ಒಂದು ವರ್ಷಕ್ಕೆ ಸುಮಾರು 40 ಕೋಟಿ ರೂಪಾಯಿ ಫಾರಿನ್ ಎಕ್ಸ್‌ಚೇಂಜ್ ಬರುತ್ತಿದೆ ಮತ್ತು ಇದು ಬಹಳ ಪ್ರಾಮುಖ್ಯವಾದಂಥ ಇಂಡಸ್ಟ್ರಿ. ಇದು ಸಹ ಹಾಳಾಗುವಂಥ ಪರಿಸ್ಥಿತಿ ಬರುತ್ತಿದೆ ಆದುದರಿಂದ ಇತರ ಕೈಗೆ ಸಿಕ್ಕದೆ ಕಾನೂನಿಗೆ ಒಳಪಟ್ಟು ಐ.ಎನ್.ಟಿ.ಯು.ಸಿ. ಅವರೊಡನೆ ಸಮಾಲೋಚಿಸಿ ಯೂನಿಯನ್ ಮಾಡಿದರೆ ಒಳ್ಳೆಯ ದೆಂದು ಸಲಹೆ ಮಾಡುತ್ತೇನೆ.

ಇನ್ನು ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜಿನ ವಿಷಯವನ್ನು ಹೇಳಿ ನನ್ನ ಮಾತನ್ನು ಮುಗಿಸು ತ್ತೇನೆ. ಈ ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್ ಆಫೀಸಿನಿಂದ ನಮ್ಮ ಕರ್ನಾಟಕ ರಾಜ್ಯದವರಿಗೆ ಬಹಳ ಅನ್ಯಾಯವಾಗುತ್ತಿದೆ. ಕೇರಳದವರು, ತಮಿಳುನಾಡಿನಿಂದ ಬಂದವರು 6 ತಿಂಗಳು ಮಿನಿಮಂ ಇದ್ದರೆ ಅವರಿಗೆ ಲಂಚ ವಗೈರೆ ಕೊಟ್ಟು, ನಿನ್ನೆ ಮೊನ್ನೆ ಬಂದಂಥವರು ರಿಜಿಸ್ಟರ್ ಮಾಡಿಸುತ್ತಾರೆ. ಅವರ ಹೆಸರಿಗೆ ಕೆಲಸ ಬರುತ್ತದೆ. ಬೆಂಗಳೂರು, ಮೈಸೂರು, ಭದ್ರಾವತಿ ಕಡೆ ನೋಡಿದರೆ ಈ ಕೇರಳದವರು, ತಮಿಳುನಾಡಿನವರು ಹೆಚ್ಚು ಇದ್ದಾರೆ. ಇದಕ್ಕೆ ಏನು ಕಾರಣ ವೆಂದರೆ ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜಿನಲ್ಲಿರತಕ್ಕಂಥ ಆಫೀಸರ್‌ಗಳು ಪ್ರಾಮಾಣಿಕ ರೀತಿಯಲ್ಲಿ ವರ್ತನೆ ಮಾಡದೇ ಇರುವುದೇ ಕಾರಣವಾಗಿದೆ. ಅಂಥ ಸಮಯದಲ್ಲಿ ಮಾನ್ಯ ಅರ್ಥ ಮಂತ್ರಿಗಳು ಅನಿರೀಕ್ಷಿತವಾಗಿ ಕಛೇರಿಗಳಿಗೆ ಭೇಟಿ ಕೊಟ್ಟು ಅದನ್ನು ಸರಿಪಡಿಸಬೇಕೆಂದು ಹೇಳಿ, ಕನ್ನಡಿಗರಿಗೆ ಅನ್ಯಾಯ ಆಗದ ರೀತಿಯಲ್ಲಿ ನೋಡಬೇಕು ಎಂದು ಹೇಳಿ ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದ ಕ್ಕಾಗಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

†ಶ್ರೀಮತಿ ದಮಯಂತಿ ಬೋರೇಗೌಡ (ಶ್ರೀರಂಗ ಪಟ್ಟಣ).—ಮಾನ್ಯ ಅಧ್ಯಕ್ಷರೇ, ಇಂದಿನ ಬೇಡಿಕೆಗಳನ್ನು ಸ್ವಾಗತಿಸುತ್ತಾ, ಈ ವಿಚಾರಗಳನ್ನು ಸರ್ಕಾರದವರ ಗಮನಕ್ಕೆ ತರಬಯಸುತ್ತೇನೆ.

ಟೂರಿಸಂ ಬಗ್ಗೆ ಹೇಳುವುದಾದರೆ ಇನ್‌ಫರ್ಮೇಷನ್ ಅಂಡ್ ಪಬ್ಲಿಸಿಟಿ ಡಿಪಾರ್ಟ್‌ಮೆಂಟನ್ನು ಬೈಫರ್‌ಕೇಟ್ ಮಾಡಿ 7–8 ತಿಂಗಳುಗಳು ಆದರೂ ಸಹ ಇನ್ನು ಸರಿಯಾಗಿ ಕೆಲಸ ಮಾಡುತ್ತಿಲ್ಲ. ಟೂರಿಜಂ, ಡೆವಲಪ್‌ಮೆಂಟ್ ಕಾರ್ಪೊರೇಷನ್ ಎಂಬ ಎರಡು ಡಿಪಾರ್ಟ್‌ಮೆಂಟ್ ಆದರೂ ಸಹ ನಮ್ಮ ಕರ್ನಾಟಕ ರಾಜ್ಯದಲ್ಲಿ ಟೂರಿಜಂ ಬಗ್ಗೆ ಹೆಚ್ಚಿನ ಕೆಲಸಕಾರ್ಯಗಳು ಆಗಿಲ್ಲ. ಬೆಂಗಳೂರು ಮತ್ತು ಮೈಸೂರಿನಲ್ಲಿ 5 ಸ್ಟಾರ್ ಹೋಟಲ್‌ಗಳು ಆಗುವುದರಿಂದ ಮಾತ್ರ ಟೂರಿಜಂ ಡೆವಲಪ್‌ಮೆಂಟ್ ಆಗುವುದಿಲ್ಲ ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಇಡೀ ಕರ್ನಾಟಕದಲ್ಲಿ ತಿಲಕವಾಗಿ ಮೆರೆದಂಥ ಶ್ರೀರಂಗಪಟ್ಟಣಕ್ಕೆ ವರ್ಷವೆಲ್ಲಾ ಪ್ರವಾಸಿಗರಿಂದ ತುಂಬಿರುತ್ತದೆ. ಎಲ್ಲಾ ದೇಶದ ಜನರೂ ಎಲ್ಲಾ ಜಾತಿ ವರ್ಗದ ಜನ ಬರುವಂಥ ಸ್ಥಳಕ್ಕೆ ಸಾಕಷ್ಟು ಪ್ರಾಮುಖ್ಯತೆಯನ್ನು ಕೊಟ್ಟಿಲ್ಲ. 1972ನೇ ಇಸ್ವಿ ಜುಲೈ ತಿಂಗಳಿನಲ್ಲಿ ಅಲ್ಲಿಗೆ ಒಂದು ಹೋಟಲ್ ಸ್ಯಾಂಕ್ಷನ್ ಆಗಿದ್ದರೂ ಸಹ ಇಲ್ಲಿಯ ವರೆಗೆ ಕೆಲಸವನ್ನು ಏತಕ್ಕೆ ಪ್ರಾರಂಭ ಮಾಡಲಿಲ್ಲವೆಂದು ಕೇಳುತ್ತೇನೆ. ಆಯಾ ಇಲಾಖೆಯ ಮಂತ್ರಿಗಳು ಬಂದು ನೋಡಿ ಹೋಗುತ್ತಿದ್ದಾರೆ ಅನೇಕ ಅಧಿಕಾರಿಗಳು ಬಂದು ನೋಡಿ ಹೋಗುತ್ತಿದ್ದಾರೆಯೇ ವಿನಹ, ಒಳ್ಳೆಯ ದಿವಸದಲ್ಲಿ ಇಲ್ಲಿಯ ತನಕ ಗುದ್ದಲಿ ಪೂಜೆ ಮಾಡಿ ಕೆಲಸ ವನ್ನು ಏತಕ್ಕೆ ಪ್ರಾರಂಭ ಮಾಡಬಾರದು ಎಂದು ಕೇಳುತ್ತೇನೆ. 50 ಸಾವಿರ ರೂಪಾಯಿಗಳನ್ನು ಕಳೆದ ಸಾಲಿನಲ್ಲಿ ಇಟ್ಟಿದ್ದರೂ ಸಹ ಕೆಲಸವನ್ನು ಇನ್ನೂ ಪ್ರಾರಂಭ ಮಾಡಲಿಲ್ಲ. ಒಂದು ಕಡೆ ದುಡ್ಡು ಇಲ್ಲವೆಂದು ಹೇಳುವುದು ಮತ್ತೊಂದು ಕಡೆ ಅಲಾಟ್ ಆಗಿರತಕ್ಕ ದುಡ್ಡನ್ನು ಖರ್ಚು ಮಾಡುವುದಕ್ಕೆ ಸಾಕಷ್ಟು ಕಾರ್ಯಕ್ರಮವನ್ನು ತೆಗೆದುಕೊಳ್ಳದೇ ಇರುವಂಥದ್ದನ್ನು ನೋಡಿದರೆ, ಈ ಇಲಾಖೆಗೆ ಎಷ್ಟರ ಮಟ್ಟಿನ ಆಸಕ್ತಿ ಇದೆ ಎಂದು ಸ್ಪಷ್ಟವಾಗಿ ಗೊತ್ತಾಗುತ್ತದೆ. ಕೆ.ಆರ್.ಎಸ್.ನಲ್ಲಿ ಟೂರಿಸ್ಟ್ ಹೋಂ ಇದೆ. ಅಲ್ಲಿ ಸ್ವಚ್ಛವಾಗಿರತಕ್ಕ ಪೀಠೋಪಕರಣಗಳು, ಹಾಸಿಗೆಗಳು ಒಂದೂ ಸರಿಯಾಗಿಲ್ಲ. ಕಳೆದ ತಿಂಗಳು ಯು.ಕೆ.ಯಿಂದ ಒಬ್ಬ ಮಹಿಳೆ ಬಂದಿದ್ದರು ಅವರನ್ನು ಕರೆದುಕೊಂಡು ಹೋಗಿ ಅಲ್ಲಿ ಇರಿಸುವುದಕ್ಕೆ ಮನಸ್ಸು ಆಗದೆ ಇನ್‌ಸ್ಪೆಕ್ಷನ್ ಬಂಗಲೋನಲ್ಲಿ ಇರಿಸುವುದಕ್ಕೆ ವ್ಯವಸ್ಥೆ ಮಾಡ

ಬೇಕಾಗಿ ಬಂದಿತು. ಒಳ್ಳೆಯ ಹೋಟೆಲ್‌ಗಳನ್ನು ನೀವು ವೆಸ್ಟೆಡ್ ಇಂಟ್ರೆಸ್ಟ್‌ನವರಿಗೆ ಕೊಟ್ಟು ಬಿಟ್ಟು ನಮ್ಮ ರಾಜ್ಯಕ್ಕೆ ಬರತಕ್ಕ ಸಾವಿರಾರು ಪ್ರವಾಸಿಗರಿಗೆ ಬಹಳ ದುಬಾರಿಯಾಗುತ್ತದೆ. ಕೆ.ಆರ್.ಎಸ್ ಹೋಟಲ್‌ನಲ್ಲಿ ಡಬ್ಬಲ್ ರೂಂಗೆ 138 ರೂಪಾಯಿಗಳನ್ನು ಚಾರ್ಜ್ ಮಾಡುತ್ತಾರೆ. ಹೆಚ್ಚಿಗೆ ದಿನ ಇರುವುದಕ್ಕೆ ಸಾಧ್ಯವಿಲ್ಲ. ಟೂರಿಜಂ ಬಗ್ಗೆ ಮಾತನಾಡಬೇಕಾದರೆ, ಅದರಲ್ಲೂ ಫಾರಿನ್ ಟೂರಿಸ್ಟರ ಬಗ್ಗೆ ಮಾತನಾಡಬೇಕಾದರೆ ಮಲ್ಟಿ ಮಿಲಿಯನ್ಸ್ ದೃಷ್ಟಿಯಲ್ಲಿ ಇಟ್ಟುಕೊಂಡು ಕೆಲಸ ಮಾಡುವುದು ಅಲ್ಲ. ಬರತಕ್ಕ ಮಧ್ಯಮ ವರ್ಗದ ಪ್ರವಾಸಿಗರಿಗೂ ಸ್ವಲ್ಪ ಮಟ್ಟಿಗೆ ಸುಲಭ ರೀತಿಯಲ್ಲಿ ಕಡಿಮೆ ವೆಚ್ಚದಲ್ಲಿ ಎಲ್ಲಾ ಸೌಕರ್ಯಗಳನ್ನು ಮಾಡಿಕೊಡಬೇಕಾದಂಥ ಅವಶ್ಯಕತೆ ಇದೆ.

ಶ್ರೀರಂಗಪಟ್ಟಣ ಒಂದು ಐಲೆಂಡ್ ಇದ್ದಹಾಗೆ, ಅದು ತಮಗೆ ಗೊತ್ತಿರಬಹುದು. ಸುತ್ತಲೂ ಕಾವೇರಿ ಇದೆ. ಕಾವೇರಿ ನೀರು ಬೆಂಗಳೂರು, ಮೈಸೂರಿನವರಿಗೆ ಉಪಯೋಗವಾಗಿದೆ. ಆದರೆ ಅಲ್ಲಿಗೆ ಬರತಕ್ಕಂಥ ಪ್ರವಾಸಿಗರಿಗೆ ಸರಿಯಾದ ಕುಡಿಯುವ ನೀರಿನ ವ್ಯವಸ್ಥೆ ಸರಿಯಾಗಿಲ್ಲ. ಶ್ರೀರಂಗ ಪಟ್ಟಣದ ಅಭಿವೃದ್ಧಿ ಮಾಡದೇ ಇದ್ದ ಮೇಲೆ ಟೂರಿಜಂ ಬಗ್ಗೆ, ಹೇಳುವುದಾದರೆ ಕರ್ನಾಟಕದಲ್ಲಿ ನೀವು ಇನ್ನು ಏನು ತಾನೇ ಮಾಡಬಲ್ಲಿರಿ ಎಂದು ಕೇಳುವುದಕ್ಕೆ ಇಷ್ಟಪಡುತ್ತೇನೆ. ಆ ಕೆಲಸ ಈ ವರ್ಷವೂ ಪ್ರಾರಂಭವಾಗಲಿಲ್ಲ ಅದನ್ನು ಮುಂದಿನ ವರ್ಷವಾದರೂ ಮಾಡಿಕೊಡಬೇಕೆಂದು ಒತ್ತಾಯ ಪೂರ್ವಕವಾಗಿ ಹೇಳುತ್ತೇನೆ.

ಇನ್ನು ಲೇಬರ್ ವಿಚಾರದಲ್ಲಿ ಹೇಳುವುದಾದರೆ ಈವೊತ್ತಿನ ದಿವಸ ಕಾರ್ಮಿಕ ವರ್ಗದಲ್ಲಿ ಒಳ್ಳೆಯ ಮುಖಂಡತ್ವ ಅಭಾವ ಎದ್ದು ಕಾಣುತ್ತಾ ಇದೆ. ಅದರಲ್ಲೂ ಕೂಡ ಒಂದೆರಡು ವಿಷಯ ಗಳು ನನ್ನ ಗಮನಕ್ಕೆ ಬಂದಿದೆ. ಈವೊತ್ತಿನ ದಿವಸ ಮ್ಯಾನೇಜ್‌ಮೆಂಟಿನವರು 2-3 ಯೂನಿಯನ್ ಮಾಡುವುದಕ್ಕೆ ಉತ್ತೇಜನ ಕೊಟ್ಟಿರುವುದರಿಂದ ಆ ಕಾರ್ಮಿಕ ವರ್ಗದಲ್ಲೇ ಹೆಚ್ಚು ಹೆಚ್ಚು ಒಡಕನ್ನು ತಂದು ಅವರು ಸ್ವಾರ್ಥ ಸಾಧನೆಮಾಡಿಕೊಳ್ಳುವುದನ್ನು ನಾವು ನೋಡುತ್ತಾ ಇದ್ದೇವೆ. ಆದುದರಿಂದ ಕಾರ್ಮಿಕ ವರ್ಗದಲ್ಲಿ ಒಳ್ಳೆಯ ಮುಖಂಡತ್ವ ಬೆಳೆಸಬೇಕಾದುದು ನಮ್ಮೆಲ್ಲರ ಕರ್ತವ್ಯ. ಆ ಕೆಲಸ ಮಾಡುವಾಗ ನಾವಾಗಲಿ, ಕಾರ್ಮಿಕ ವರ್ಗದಲ್ಲಿ ಆಗಲಿ ಒಳ್ಳೆಯ ಮುಖಂಡತ್ವ ಬೆಳೆಸುವುದರ ಜೊತೆಗೆ ಈವೊತ್ತು ಆಗತಕ್ಕಂಥ ಮುಷ್ಕರ ಲಾಕ್‌ಔಟ್‌ಗಳಿಂದ ದೇಶದ ಉತ್ಪನ್ನ ಮತ್ತು ಕಾರ್ಮಿಕರ ಸಂಭಾವನೆ ಕಡಿಮೆ ಆಗದಂತೆ ನೋಡಿಕೊಳ್ಳುವುದೂ ಸಹ ನಮ್ಮೆಲ್ಲರ ಕರ್ತವ್ಯ. ಈ ಬಗ್ಗೆ ಅಂಕಿಅಂಶ ಹೇಳುವುದಾದರೆ 1973-74ನೇ ಸಾಲಿಗೆ ಒಟ್ಟು 73 ಸ್ಟ್ರೈಕ್ ಆಗಿದೆ. ಕಾರ್ಮಿಕರು ಅದರಲ್ಲಿ 21, 64, 684 ರೂಪಾಯಿಗಳಷ್ಟು ಕಳೆದುಕೊಂಡಿದ್ದಾರೆ ದೇಶದ ಉತ್ಪನ್ನ 7 ಕೋಟಿ 39 ಲಕ್ಷ 93 ಸಾವಿರ 217ರೂಪಾಯಿಯಷ್ಟು ಹೋಗಿದೆ. ಲಾಕ್‌ಔಟ್‌ನಿಂದ 26 ಲಕ್ಷ 92 ಸಾವಿರ ಚಿಲ್ಲರೆ ಹೋಗಿದೆ ಮತ್ತು ಪ್ರೊಡಕ್ಷನ್‌ನಿಂದ 33 ಕೋಟಿ 34 ಲಕ್ಷದ 78 ಸಾವಿರ ಚಿಲ್ಲರೆ ಕಳೆದುಕೊಂಡಿದ್ದೇವೆ. ಈರೀತಿಯಾಗಿ ಭಾರತ ದೇಶದಲ್ಲಿ ಉತ್ಪನ್ನಕ್ಕೆ ಧಕ್ಕೆ ಬರಬಾರದು, ದೇಶ ದಲ್ಲಿ ಕಾರ್ಮಿಕರ ಒಂದು ಅಶಾಂತಿಯಿಂದ ಅದನ್ನು ರಾಜಕೀಯವಾಗಿ ಉಪಯೋಗಿಸಿಕೊಂಡು ಅನೇಕ ಜನರು ನಾನಾ ತರಹವಾಗಿ ಸ್ವಾರ್ಥ ಮಾಡಿಕೊಂಡು ದೇಶದ ಉತ್ಪನ್ನವನ್ನು ಕಡಿಮೆ ಮಾಡಿಸುವುದು ಸರಿಯಲ್ಲ. ಏನೇ ಅತೃಪ್ತಿ ಇದ್ದರೂ ಸಹ ರಾಜ್ಯದಲ್ಲಿ ಉತ್ಪನ್ನಕ್ಕೆಧಕ್ಕೆ ಬಾರ ದಂತೆ ನೋಡಿಕೊಳ್ಳಬೇಕಾದುದು ನಮ್ಮೆಲ್ಲರ ಕರ್ತವ್ಯ. ಕಾರ್ಮಿಕರಿಗೆ ವಸತಿ ಮತ್ತು ಅವರ ಮಕ್ಕಳ ಕಲ್ಯಾಣಕ್ಕೆ ಬೇಕಾದ ಅನೇಕ ಕೇಂದ್ರಗಳನ್ನು ಶುರು ಮಾಡಬೇಕು. ಎಲ್ಲೆಲ್ಲಿ ಮಹಿಳಾ ಕಾರ್ಮಿಕರು ಇದ್ದಾರೆ ಅಲ್ಲಲ್ಲಿ ಮಕ್ಕಳನ್ನು ನೋಡಿಕೊಳ್ಳುವುದಕ್ಕೆ ಶಿಶುವಿಹಾರ ಕೇಂದ್ರಗಳನ್ನು ಪ್ರಾರಂಭ ಮಾಡಬೇಕು. ಒಳ್ಳೊಳ್ಳೆಯ ಕಾರ್ಮಿಕರಿಗೆ ಒಂದು ಇನ್‌ಸೆಂಟೀವ್ ಕೊಟ್ಟು ಉತ್ತೇಜನ ಮಾಡಬೇಕು. ಬೆಂಗಳೂರಿನ ಲಿಂಗರಾಜಪುರದಲ್ಲಿ ಫಿಸಿಕಲಿ ಹ್ಯಾಂಡಿಕ್ಯಾಪ್ಡ್ ಅಸೋಸಿಯೇಷನ್ ಟ್ರೈನಿಂಗ್ ಕಮ್ ರೀಹ್ಯಾಬಿಲಿಟೇಷನ್ ಅನ್ನುವ ಒಂದು ಸೆಂಟರ್ ಇದೆ. ನಾವು ಅಲ್ಲಿಗೆ ಹೋಗಿ ಭೇಟಿ ಮಾಡಿಕೊಂಡು ಬಂದಿದ್ದೇವೆ. ಯಾವ ಲಾಭವೂ ಇಲ್ಲದಂತೆ ಆ ಸಂಸ್ಥೆಯನ್ನು ನಡೆಸಿಕೊಂಡು ಹೋಗುತ್ತಿದ್ದಾರೆ. ಆ ಸಂಸ್ಥೆಯವರು ಹೊರ ದೇಶಗಳಿಂದ ಅಂದರೆ ಇಂಗ್ಲೆಂಡ್, ಅಮೇರಿಕಾ, ಸ್ವಿಟ್ಜರ್‌ಲೆಂಡ್ ದೇಶಗಳಿಂದ ಲಕ್ಷಾಂತರ ರೂಪಾಯಿ ಬೆಲೆಬಾಳುವ ಮೆಷಿನರಿಗಳನ್ನು ತರಿಸಿಕೊಂಡು ಯಾವ ಲಾಭವೂ ಇಲ್ಲವಂತೆ ಕೆಲಸ ಮಾಡುತ್ತಿದ್ದಾರೆ. ಆ ಸಂಸ್ಥೆಯವರು ಫಿಸಿಕಲಿ ಹ್ಯಾಂಡಿಕ್ಯಾಪ್ಡ್ ಜನಕ್ಕೆ ಟ್ರೈನಿಂಗ್ ಕೊಡುತ್ತಾರೆ. ಇಂಥಾ ಒಂದು ಸಂಸ್ಥೆಯಲ್ಲೂ ಕೂಡ ಏನಾಗಿದೆ ಎಂದರೆ ಅಲ್ಲಿ ಮ್ಯಾನೇಜ್‌ಮೆಂಟಿಗೂ ಮತ್ತು ಕಾರ್ಮಿಕರಿಗೂ ವೈಮನಸ್ಯ ಉಂಟಾಗಿ ಅಶಾಂತಿ ಇದೆ. ಅಲ್ಲಿರ ತಕ್ಕಂಥ ಮ್ಯಾನೇಜ್‌ಮೆಂಟ್‌ನವರು ಹೇಳುತ್ತಾರೆ. ಇಂತಹ ಸಮಸ್ಯೆಗಳನ್ನು ಪರಿಹಾರ ಮಾಡು ವುದು ಹೇಗೆ, ನಾವು ಯಾವ ಲಾಭವೃಷ್ಟಿಯೂ ಇಲ್ಲದೆ ಕೆಲಸ ಮಾಡುತ್ತಿದ್ದರೂ ಕೂಡ ಒಂದು ಚಳು ವಳಿ ಮನೋಭಾವವನ್ನು ಇವರು ಮಾಡಿದ್ದಾರೆ ಎಂದು ಅವರು ಬಹಳ ವ್ಯಥೆಪಟ್ಟುಕೊಂಡಿದ್ದಾರೆ.

(ಶ್ರೀ ಕೆ. ಎಂ. ರುದ್ರಪ್ಪ)

ಅದಕ್ಕೆ ನಾನಾದರೂ ಕೂಡ ಹೇಳುವುದು ಯಾವ ಲಾಭದೃಷ್ಟಿಯೂ ಇಲ್ಲದೆ ಇಂತಹ ಸೇವಾ ಸಂಸ್ಥೆಗಳು ಕೆಲಸ ಮಾಡುವಾಗ ಅಲ್ಲಿಯ ಕಾರ್ಮಿಕರು ಚಳುವಳಿ ಮಾಡುವುದಾದರೆ ಅದಕ್ಕೆ ಒಗೊಡಬಾರದು ಎಂದು ಹೇಳುತ್ತೇನೆ ಮತ್ತು ಆ ಕಾರ್ಮಿಕರಿಗೆ ಒಳ್ಳೆಯ ರೀತಿಯಲ್ಲಿ ಈ ವಿಚಾರವನ್ನು ತಿಳಿಸಬೇಕು ಎಂದು ನಾನು ಅಭಿಪ್ರಾಯ ಪಡುತ್ತೇನೆ.

ಇನ್ನು ಎಂಪ್ಲಾಯ್‌ಮೆಂಟ್ ಎಕ್ಸ್‌ಛೇಂಜ್ ಬಗ್ಗೆ ಹೇಳುವುದಾದರೆ ಅಲ್ಲಿ ಹೋಗಿ ನೋಡಿದರೆ ಕ್ಯೂ ನಿಂತಿರುತ್ತಾರೆ. ಈ ಬಗ್ಗೆ ಒಂದು ವಿಚಾರ ಹೇಳುತ್ತೇನೆ. ಫಿಸಿಕಲ್ ಹ್ಯಾಂಡಿಕ್ಯಾಫ್ಡ್ ಬಗ್ಗೆ ಹೇಳುವುದಾದರೆ ಇದಕ್ಕೇನೇ ಒಂದು ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್‌ನ್ನು ಇಟ್ಟಿದ್ದಾರೆ. ಆದರೆ ಅದರಿಂದ ಪ್ರಯೋಜನ ಮಾಡಿಕೊಂಡಿರುವವರು ಎಷ್ಟು ಎಂದು ನೋಡಿದರೆ ಅದರಿಂದ ಸಾಕಷ್ಟು ಪ್ರಯೋಜನ ಪಡೆದುಕೊಂಡಿಲ್ಲ. ನಮ್ಮ ದೇಶದಲ್ಲಿ ಇದರಿಂದ ಪ್ರಯೋಜನ ಮಾಡಿಕೊಂಡಿರುವರು ಹತ್ತಕ್ಕೆ ಒಬ್ಬರು ಮಾತ್ರ. ಅದರ ಒಂದು ರಿಪೋರ್ಟ್ ನೋಡಿ ಹೇಳುತ್ತೇನೆ. ಆದುದರಿಂದ ಈ ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್‌ನಿಂದ ಸಾಕಷ್ಟು ಪ್ರಯೋಜನವಾಗುತ್ತಾ ಇಲ್ಲ ಎಂದು ಹೇಳುತ್ತೇನೆ. ಅದಕ್ಕೆ ನನ್ನ ಸಲಹೆ ಏನೆಂದರೆ ಇದಕ್ಕೆ ಸರ್ಕಾರದವರು ಒಂದರಷ್ಟೋ ಅಥವಾ ಎರಡರಷ್ಟೋ ಕೆಲಸವನ್ನು ಇವರಿಗೆ ಮೀಸಲಾಗಿಟ್ಟರೆ ಪ್ರಯೋಜನವಾಗಬಹುದು ಎಂದು ನನ್ನ ಅಭಿಪ್ರಾಯ.

ಇನ್ನು ಇದೇ ವಿಷಯದಲ್ಲಿ ಹೇಳುವುದಾದರೆ ನಮ್ಮ ದೇಶದಲ್ಲಿ ಈಗ 2 ಲಕ್ಷದಷ್ಟು ವಿದ್ಯಾವಂತ ನಿರುದ್ಯೋಗಿಗಳು ಇದ್ದಾರೆ. ಇನ್ನು ಅವಿದ್ಯಾವಂತ ನಿರುದ್ಯೋಗಿಗಳ ಸಂಖ್ಯೆ ನೋಡಿದರೆ ಅದಕ್ಕಿಂತ ಜಾಸ್ತಿ ಎಂದು ಹೇಳಬಹುದು. ಆದುದರಿಂದ ಈ ಬಗ್ಗೆ ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್ ಒಂದು ಹೆಚ್ಚಿನ ರೀತಿಯಲ್ಲಿ ಕೆಲಸ ಮಾಡಬೇಕು ಎಂದು ಹೇಳಬಯಸುತ್ತೇನೆ.

ಇನ್ನು ಈಗ ಹಾ[illegible] ಎ[illegible]ಲಿಯನ್ ಜಾಬ್ ಅಂತ ಒಂದು ಸ್ಕೀಮು ಮಾಡಿದ್ದೀರಿ. ಆ ಬಗ್ಗೆ ಅನೇಕ ಪೋಸ್ಟುಗಳನ್ನು ಸ್ಯಾಂಕ್ಷನ್ ಮಾಡಿದ್ದರುಕೂಡ ಅದು ಡಿವಿಷನ್ ಮಟ್ಟದಲ್ಲಿ ಸರಿಯಾಗಿ ಮಾಡುತ್ತಾ ಇಲ್ಲ. ಆದುದರಿಂದ ಎಲ್ಲಾ ಜಿಲ್ಲೆಗಳಿಗೂ ಅದರ ಉಪಯೋಗ ಅಷ್ಟು ಆಗುತ್ತಾ ಇಲ್ಲ. ಮುಂದಾದರೂ ಕೂಡ ಈ ಸ್ಕೀಮಿಗೆ ಪೋಸ್ಟುಗಳನ್ನು ಸ್ಯಾಂಕ್ಷನ್ ಮಾಡುವಾಗ ಎಲ್ಲಾ ಜಿಲ್ಲೆಗಳಿಗೂ ಕೂಡ, ಆಯಾಯ ಜಿಲ್ಲೆಯ ಜನರಿಗೆ ಉಪಯೋಗವಾಗುವಂತೆ ಒಂದು ಅವಕಾಶವನ್ನು ಕಲ್ಪಿಸಿಕೊಡಬೇಕೆಂದು ಹೇಳಿ, ಅಧ್ಯಕ್ಷರು ನನಗೆ ಇಷ್ಟು ಮಾತನಾಡಲು ಕಾಲಾವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† ಶ್ರೀ ಎಸ್. ವೈ. ಪಾಟೀಲ್ (ಸಿಂಧ್ಗಿ).—

ಮಾನ್ಯ ಸಭಾಧ್ಯಕ್ಷರೇ, ನಾನು ಮೂರು ಮಾತುಗಳನ್ನಾಡಿಬಿಟ್ಟು ನನ್ನ ಮಾತನ್ನು ಮುಗಿಸುತ್ತೇನೆ. ಮೊದಲನೆಯದಾಗಿ ಹೇಳುವುದು ಹಾಸನ ಜಿಲ್ಲೆಯಲ್ಲಿ ಶ್ರವಣಬೆಳಗೊಳ; ಬೇಲೂರು ಹಳೇಬೀಡು ಹೇಗೆ ಪ್ರಸಿದ್ಧವಾಗಿದೆಯೋ ಅದೇರೀತಿ ನಮ್ಮ ಬಿಜಾಪುರ ಜಿಲ್ಲೆಯಲ್ಲಿರುವ ಬಾದಾಮಿ, ಗೋಳಗುಮ್ಮಟ ಇವು ಜಗತ್ಪ್ರಸಿದ್ಧವಾಗಿವೆ. ಆದುದರಿಂದ ಬೇರೆ ಯಾವುದಕ್ಕಾದರೂ ನಿಮ್ಮ ಗಮನ ಕಡಿಮೆ ಮಾಡಿ ಇದಕ್ಕೆ ಒಂದು ಹೆಚ್ಚಿನ ಮಾರ್ಜಿನ್ ಕೊಟ್ಟು ಇದಕ್ಕೆ ತಕ್ಕ ಸೌಲಭ್ಯವನ್ನು ಕಲ್ಪಿಸಿಕೊಟ್ಟು ಅಭಿವೃದ್ಧಿ ಪಡಿಸಬೇಕು ಎಂದು ಹೇಳುತ್ತೇನೆ.

ಇನ್ನು ಎರಡನೆಯದಾಗಿ ಕೂಲಿಗಾರರಲ್ಲಿ ಸಂಘಟಿತರು ಮತ್ತು ಸುಸಂಘಟಿತರ ಅಂತ ಎರಡು ತರಹ ಕೂಲಿಗಾರರು ಇದ್ದಾರೆ. ಇದರಲ್ಲಿ ಪಟ್ಟಣದಲ್ಲಿರುವವರು ಸಂಘಟಿತರಾಗಿರುವುದರಿಂದ ಅವರಿಗೆ ಸಹಾಯ ಮಾಡುವುದು ಸ್ತುತ್ಯವಾದ ಕಾರ್ಯವೇ. ಆದರೆ ಹಳ್ಳಿಗಳಲ್ಲಿ ಈ ಒಕ್ಕಲುತನವನ್ನೇ ಅವಲಂಬಿಸಿರುವ ಕೂಲಿಗಾರರು ಏನು ಇದ್ದಾರೆ ಅವರನ್ನು ಸುಸಂಘಟಿತರಾಗಿಲ್ಲ ಸಾಮಾನ್ಯವಾಗಿ ಅಂಗಹೀನರು ತಮ್ಮ ಜೀವನವನ್ನು ಮಾಡಿಕೊಳ್ಳುವುದಕ್ಕೆ ಭಿಕ್ಷೆಯನ್ನಾದರೂ ಮಾಡಿಕೊಂಡು ಜೀವನ ಮಾಡುತ್ತಾರೆ. ಆದರೆ ಹಳ್ಳಿಗಳಲ್ಲಿರತಕ್ಕಂಥ ಅಗ್ರಿಕಲ್‌ಚರರ್ ಲೇಬರರ್ಸ್ ಏನು ಇದ್ದಾರೆ ಅವರು ಈ ಒಕ್ಕಲುತನವನ್ನೇ ಒಂದು ಆಧಾರಸ್ತಂಭವನ್ನಾಗಿ ಇಟ್ಟುಕೊಂಡಿದ್ದಾರೆ. ಆದುದರಿಂದ ಅವರಿಗೆ ಒಂದು ಸ್ಕೈಟು ಕೊಡುವುದಾಗಲೀ ಅಥವಾ 20—30 ವರ್ಷದಿಂದ ಯಾರಿಗೆ ಜಮೀನು ಇಲ್ಲವೋ ಆ ಲ್ಯಾಂಡ್‌ಲೆಸ್ ಪೀಪಲ್‌ಗೆ ಜಮೀನು ಕೊಟ್ಟು ಅವರನ್ನು ಸುಸಂಘಟಿತರನ್ನಾಗಿ ಮಾಡಬೇಕು ಎಂದು ಹೇಳುತ್ತೇನೆ. ಈಪೊತ್ತು ತಾವು ಲ್ಯಾಂಡ್‌ಲೆಸ್ ಪೀಪಲ್‌ಗೆ 4 ಲಕ್ಷವಂತೆ ಜಮೀನು ಕೊಡುತ್ತೇವೆ ಎಂದು ಲೆಕ್ಕಾಚಾರ ಹಾಕಿಕೊಂಡಿದ್ದೀರಿ. ಈ ರೀತಿ ಹಂಚುವಾಗ

ಹರಿಜನರಿಗೆ ಯಾವರೀತಿ ಹಂಚುತ್ತಿರೋ ಅದೇ ರೀತಿ ಈ ಲ್ಯಾಂಡ್‌ಲೆಸ್ ಪೀಪಲ್ ಏನು ಇದ್ದಾರೆ, ಹಳ್ಳಿಯಲ್ಲಿ ಕೂಲಿಗಾರ ಜನ ಏನು ಇದ್ದಾರೋ ಅವರಿಗೂ ಈ ಒಂದು ಅವಕಾಶ ಮಾಡಿಕೊಡ ಬೇಕು ಎನ್ನುವುದು ಎರಡನೇ ಸೂಚನೆ.

ಇನ್ನು ಮೂರನೆಯದಾಗಿ ಹೇಳುವುದಾದರೆ ಎಂಪ್ಲಾಯ್‌ಮೆಂಟ್ ಪ್ರಶ್ನೆ. ಎಂಪ್ಲಾಯ್‌ಮೆಂಟ್ ಎಕ್ಸ್‌ಛೇಂಜ್ ಆಫೀಸಿಗೆ ಹೋಗಿ ನೋಡಿದರೆ ಈ ಅನ್ ಎಂಪ್ಲಾಯ್‌ಮೆಂಟ್ ಪ್ರಾಬ್ಲೆಮ್‌ನ್ನು ತಪ್ಪಿಸುವುದಕ್ಕೆ ನಿಮಗೆ ಶಕ್ಯ ಇಲ್ಲ ಎಂದು ಹೇಳುತ್ತೇನೆ. ಏತಕ್ಕೆಂದರೆ ನೀವು ಹತ್ತು ಜನಕ್ಕೆ ಕೆಲಸಕೊಟ್ಟರೆ ನೂರು ಜನ ವಿದ್ಯಾವಂತರಾಗಿ ತಯಾರಾಗುತ್ತಿದ್ದಾರೆ. ನೀವು ಆಫೀಸಿನಲ್ಲಿ ನೋಡಿದರೆ ಇದರ ತಪಸಾಣಿ ಸಿಕುತ್ತದೆ. 1957—58ರಿಂದ ಇದುವರೆಗೆ ಎಷ್ಟು ಜನಕ್ಕೆ ಕೆಲಸ ಕೊಟ್ಟಿದ್ದೀರಿ, ಇನ್ನು ಎಷ್ಟು ಜನಕ್ಕೆ ಕೆಲಸ ಸಿಕ್ಕಿಲ್ಲ ಈ ಬಗ್ಗೆ ಆಫೀಸಿನಲ್ಲಿರುವಲಿಸ್ಟ್ ನೋಡಿದರೆ ಗೊತ್ತಾಗುತ್ತದೆ. ಆದುದರಿಂದ ನಾನು ಹೇಳುವುದು ಏನೆಂದರೆ ವರ್ಷೇ ವರ್ಷೇ ವಿದ್ಯಾವಂತ ನಿರುದ್ಯೋಗಿಗಳ ಸಂಖ್ಯೆ ಜಾಸ್ತಿಯಾಗುತ್ತಾ ಇರುವುದರಿಂದ ಅವರಿಗೆ ಎಲ್ಲರಿಗೂ ಕೆಲಸ ಕೊಡುವುದಕ್ಕೆ ಶಕ್ಯವಾಗದೇ ಇರುವುದರಿಂದ ಒಂದು ಇಂಡಸ್ಟ್ರಿ ಸ್ಟಾರ್ಟ್ ಮಾಡಿ ಉದ್ಯೋಗ ಕೊಡಿ ಇಲ್ಲವೇ ಅದರ ಕೈಯಲ್ಲೇ ಮಾಡಿಸಿ. ಹಾಗೆ ಮಾಡದೇ ಹೋದರೆ ಅವರಿಗೆ ಉದ್ಯೋಗ ದೊರಸಿ ಕೊಡುವುದಕ್ಕಾಗುವುದಿಲ್ಲ. ಯಾವ ಸರ್ಕಾರವೇ ಬರಲಿ, ಯಾವ ಟ್ರೆಜರಿ ಬೆಂಚಸ್‌ನವರು ಕೂಡ ಅವರ ಪ್ರಾಬ್ಲೆಮ್‌ನ್ನು ಸಾಲ್ವ್ ಮಾಡುವುದಕ್ಕಾಗುವುದಿಲ್ಲ. ಈವೊತ್ತಿನ ದಿವಸ ಅನ್‌ಎಂಪ್ಲಾಯ್‌ಮೆಂಟ್ ಪ್ರಾಬ್ಲಮ್‌ನ್ನು ಸಾಲ್ವ್ ಮಾಡಬೇಕಾದರೆ ಒಂದು ಸಣ್ಣ ಸಣ್ಣ ತರಹ ಟ್ರೈನಿಂಗ್‌ನ್ನು ಸ್ಟಾರ್ಟ್ ಮಾಡಬೇಕು. ಒಂದು ಮರಗೆಲಸದ ಟ್ರೈನಿಂಗ್ ಆಗಲಿ, ಒಂದು ಕಬ್ಬಿಣ ಕೆಲಸದ ಟ್ರೈನಿಂಗ್ ಅಗಲಿ ಅಥವಾ ಒಂದು ಗಾರೆ ಕೆಲಸದ ಟ್ರೈನಿಂಗ್ ಆಗಲಿ ಪ್ರಾರಂಭಿಸಬೇಕು. ನಾನು ಎಲ್ಲೋ ಒಂದು ಹೊಳೆ ಕಡೆ ಹೋಗಿದ್ದೆ. ಅಲ್ಲಿ ಒಬ್ಬ ಕಲ್ಲು ಒಡೆಯುವವನ್ನು ನಿನ್ನ ಕೂಲಿ ಎಷ್ಟಪ್ಪಾ ಎಂದು ಕೇಳಿದೆ. ಅವನು 15 ರೂಪಾಯಿ ಕೂಲಿ ಕೊಡುತ್ತಾರೆ ಎಂದು ಹೇಳಿದ. ಆದರೆ ಇಲ್ಲಿ ನೋಡಿದರೆ ಒಬ್ಬ ಎಸ್. ಎಸ್. ಎಲ್. ಸಿ. ಪಾಸಾಗಿರುವವನು ಡೈಲಿ ವೇಜಸ್‌ನಲ್ಲಿ 2—2 ರೂಪಾಯಿ ಕೂಲಿ ತೆಗೆದುಕೊಂಡು 9-6 ವರ್ಷದಿಂದಲೂ ದುಡಿಯುತ್ತಿದ್ದಾರೆ. ದೇಶದ ಉತ್ಪತ್ತಿ ಆಗಲಿ ಹೋಗಲಿ ತಿಂಗಳಿಗೆ ಒಂದು ಸಾರಿ ಸಹಿ ಹಾಕಿಬಿಟ್ಟು ಅವನು ತಿಂಗಳ ಪಗಾರ ತೆಗೆದುಕೊಂಡು ಹೋಗಲೇಬೇಕು. ಅವನಿಗೆ ಮಿನಿಮಮ್ ವೇಜಸ್ ಬರಲೇಬೇಕು. ಇದುದರಿಂದ ನಾನು ಹೇಳುವುದು ಈ ರೀತಿ ಅವರಿಗೆ ಪಗಾರ ಕೊಡುವುದು ಸಾಧ್ಯವಿಲ್ಲ. ಆ ಬಗ್ಗೆ ಎಂಪ್ಲಾಯ್‌ಮೆಂಟ್ ಎಕ್ಸ್‌ಛೇಂಜ್‌ನಿಂದ ಲಿಸ್ಟ್ ತರಿಸಿ ಅವರಿಗೊಔದ್ಯೋಗಿಕವಾಗಿ ಒಂದು ಕೆಲಸದ ಯೋಜನೆ ಹಾಕಿ ಟ್ರೈನಿಂಗ್ ಕೊಟ್ಟು ಅವರಿಗೆ ಉದ್ಯೋಗ ಸಿಗುವಂಥ ಒಂದು ವ್ಯವಸ್ಥೆ ಮಾಡಬೇಕು ಎಂದು ಹೇಳುತ್ತೇನೆ. ಇನ್ನು ನೀವು ಏನು ಮಾಡುತ್ತೀರೋ ಮಾಡಿ. ಇಷ್ಟು ಹೇಳಿ ಮಾನ್ಯ ಅಧ್ಯಕ್ಷರು ನನಗೆ ಮಾತನಾಡಲು ಇಷ್ಟು ಕಾಲಾವಕಾಶ ಕೊಟ್ಟಿದ್ದಕ್ಕಾಗಿ ಅವರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

† 5-30 P.M.

ಶ್ರೀ ಎಸ್. ಎಂ. ಯಾಹ್ಯಾ (ಕಾರ್ಮಿಕ ಹಾಗೂ ಪ್ರವಾಸೋದ್ಯಮ ಖಾತಾ ಸಚಿವರು).—ಮಾನ್ಯ ಅಧ್ಯಕ್ಷರೇ, ನನ್ನ ಇಲಾಖೆಯ ಬೇಡಿಕೆಗಳ ಮೇಲೆ ಮಾನ್ಯ ಸದಸ್ಯರು ಬಹಳ ಒಳ್ಳೆಯ ಸಲಹೆಗಳನ್ನು ಕೊಟ್ಟಿದ್ದಾರೆ. ಇದಕ್ಕಾಗಿ ನಾನು ಅವರೆಲ್ಲರನ್ನೂ ಅಭಿನಂದಿಸುತ್ತೇನೆ. ಕಾರ್ಮಿಕ ಶಾಖೆಯ ಮೇಲೆ ಏಳೆಂಟು ಮಾನ್ಯ ಸದಸ್ಯರುಗಳು ಮಾತನಾಡಿದ್ದಾರೆ. ಮೂರು ಸದಸ್ಯರು ಟೂರಿಸಂ ಮೇಲೆ ಮಾತನಾಡಿದ್ದಾರೆ. ಆದರೆ ಪೋರ್ಟುಗಳ ಮೇಲೆ ಯಾರೂ ಇಲ್ಲಿ ಮಾತನಾಡಲಿಲ್ಲ. ಪೋರ್ಟುಗಳ ಡಿಪಾರ್ಟುಮೆಂಟು ಬಹಳ ಪ್ರಾಮುಖ್ಯದಾದ ಡಿಪಾರ್ಟುಮೆಂಟು. If you want to bring new life in soc o-economic objective of Karnataka, we have to develop our ports. Therefore, I may speak one or two words about ports. Ports Department gets very low priority. It should get top priority. In the fifth Five Year Plan, we have asked for 27 crores of Rupees, This year's expenditure over this woul l be 80 lakhs. but the allocation is 2.5 crores of rupees. There are 19 ports . Apart from the Mangalore Harbour, the other ports should be developed. Especially Karwar port should be developed as a major port because it is a natural port. Further it is close to the

(ಶ್ರೀ ಎಸ್. ಎಂ. ಯಾಹ್ಯ)

Hospet Ores and Bellary and other mining areas. Instead of taking these ores to Madras or Goa, we could take it to these places. The distance from Hospet to Karwar is very much less-not even half of the distance between Hospet and Madras. Thereby, we can save not one or to lakhs of rupees but crores of rupees. This will provide more employment opportunities in the State and fetch more money to the State also. We require seven crores of rupees—five crores for mining because of shipment of ores and another two crores for carrying general cargo for the development of ports. If we can get railways, it can change the entire economic structure of Karnataka, because the cost of railways from Hbbli to Karwar is much less than that of the Rail ways from Hospet to Goa. Or, if we want to take ores from Hospet to Madras, it is double the distance, The benefit that will be derived by the Government and the public by this means of transport will be so enormous to the tune of crores of rupees—and, if we spend seven crores of rupees, within seven years, we can recover the entire amount. These are the aspects I wanted to emphasize, Development of ports and linking the ports with Railways would be tremendous task but this task will be a worthwhile undertaking. If this is done, it will be a landmark in the history of Karnataka. I appeal to all the Hon. Members to bestow their attention and support this, so that we can do something very tangible in this respect.

(MADAM SPEAKER in the Chair)

ಶ್ರೀ ಕೆ. ಎಫ್. ಪಾಟೀಲ್.—ಈ ವಿಷಯದಲ್ಲಿ ಮಂತ್ರಿಗಳ ಗಮನಕ್ಕೆ ತರಲು ಒಂದು ಮಾತನ್ನು ಹೇಳಲು ಇಚ್ಛೆಪಡುತ್ತೇನೆ.

ಅಧ್ಯಕ್ಷರು.—ಅವರ ಭಾಷಣ ಮುಗಿದ ನಂತರ ತಾವು ಕೇಳಬಹುದು.

ಶ್ರೀ ಎಸ್. ಎಂ. ಯಾಹ್ಯಾ.—ಮಾನ್ಯ ಸದಸ್ಯರು ಎಸ್ಟಿಮೇಟ್ ಕಮಿಟಿಯ ರಿಪೋರ್ಟ್‌ನಲ್ಲಿ ಬಹಳ ಚೆನ್ನಾಗಿ ಪೋರ್ಟುಗಳ ಬಗ್ಗೆ ತಿಳಿಸಿದ್ದಾರೆ. ಅದಕ್ಕಾಗಿ ನಾನು ಅವರನ್ನು ಅಭಿನಂದಿಸುತ್ತೇನೆ.

ಶ್ರೀ ಕೆ. ಎಫ್. ಪಾಟೀಲ್.—ಇದರಲ್ಲಿ ಯಾರೂ ಸೀರಿಯಸ್ ಆಗಿ ಇಲ್ಲಿ ಮಾತನಾಡಲಿಲ್ಲ ಎಂದರು. ಬಂದರುಗಳಿಗಾಗಿ ಸುಮಾರು 25 ಕೋಟಿ ರೂಪಾಯಿಗಳಷ್ಟಾದರೂ ಖರ್ಚು ಮಾಡಬೇಕಾಗುತ್ತದೆ ಎಂದು ಹೇಳಿ ಒಂದು ವರ್ಷಕ್ಕೆ ಸುಮಾರು ಎಂಟು ಕೋಟಿ ರೂಪಾಯಿಗಳಷ್ಟು ನಾವು ವೆಚ್ಚ ಮಾಡಬೇಕೆಂದು ಇದೆ. ಇದರಂತೆ ನಾಲ್ಕು ವರ್ಷಗಳು ಬಂದರುಗಳಿಗೆ ವೆಚ್ಚ ಮಾಡಬೇಕೆಂದು ಇದರಲ್ಲಿ ಬಂದಿದೆ. ಸರಕಾರ ಇದರ ಖರ್ಚಿನ ವಿಚಾರಕ್ಕೆ ಹೆಚ್ಚು ಚಿಂತೆ ಮಾಡಬಾರದು. ಇದಕ್ಕೆ ಎಷ್ಟೇ ಖರ್ಚು ಮಾಡಿದರೂ ಆ ಖರ್ಚು ಮಾಡಿದ ಹಣವನ್ನು ನಾಲ್ಕು ವರ್ಷಗಳೊಳಗೇ ವಾಪಸು ಪಡೆಯಬಹುದು. ಅಂತಹ ಉತ್ತಮವಾದ ಈ ಯೋಜನೆಯನ್ನು ಸರಕಾರ ತೆಗೆದುಕೊಂಡು ಇದನ್ನು ಬೇಗನೇ ಕಾರ್ಯಗತವಾಗುವ ಹಾಗೆ ಮಾಡಬೇಕೆಂದು ಹೇಳುತ್ತೇನೆ. ಇದಲ್ಲದೆ ಹುಬ್ಬಳ್ಳಿ ಕಾರವಾರದ ರೈಲ್ವೆ ಲಿಂಕ್ ಮಾಡುವುದರ ಬಗ್ಗೆ ಅನೇಕ ಅಂಕೆ ಸಂಖ್ಯೆಗಳನ್ನು ಸರಕಾರ ಕೊಡಿಸಿಟ್ಟಿದೆ, ಕಾರವಾರ ಹುಬ್ಬಳ್ಳಿ ರೈಲ್ವೆ ಸರ್ವೇ ಮಾಡಬೇಕೆಂದು ಒಂದು ಕಮಿಷನ್ ಕೂಡ ಮಾಡಿದೆ. ಈಗ ರೈಲ್ವೆಯಲ್ಲಿ ನಮಗೆ ಎಲ್ಲೆಲ್ಲೂ ಮೀಟರು ಗೇಜುಗಳು ಇರುವ ಕಡೆಗಳಲ್ಲಿ ಬ್ರಾಡ್‌ಗೇಜುಗಳನ್ನಾಗಿ ಮಾಡಬೇಕೆಂದು ಕೆಲಸಗಳಾಗುತ್ತಿವೆ. ಆದರೆ ಇದರ ಕೆಲಸಗಳೇನಾಗುತ್ತಿವೆ ಎಂದು ನೋಡಿದರೆ ಮೀಟರು ಗೇಜು ಇರುವ ಕಡೆ ಇದ್ದ ಹಳೇ ಕಂಬಿಗಳನ್ನು ತೆಗೆದು ಅಲ್ಲೇ ಬ್ರಾಡ

ಗೇಜು ರೈಲ್ವೆ ಕಂಬಿಗಳನ್ನೂ ಹಾಕುತ್ತಿದ್ದಾರೆ. ಆದರೆ ಇದರಲ್ಲಿ ಹಿಂದೆ ಯಾವ ರೀತಿಯಾದ ಅನುಕೂಲಗಳಿದ್ದವು ಈಗ ಯಾವ ರೀತಿಯ ಅನುಕೂಲಗಳು ಸಿಗಬಹುದು ಎನ್ನುವುದರ ಕಡೆ ಸರಿಯಾಗಿ ವಿಚಾರ ಮಾಡದೆ ಇದರ ಕೆಲಸಗಳನ್ನು ಮಾಡುತ್ತಿದ್ದಾರೆ. ಇದರಿಂದ ಸಾಕಷ್ಟು ಹಾನಿಯಾಗುತ್ತದೆ. ಈ ದೃಷ್ಟಿಯಿಂದ ಇಲ್ಲಿ ಕೆಲಸಗಳನ್ನು ಮಾಡುವಾಗ ಆದಷ್ಟು ಪ್ರಯಾರಿಟಿ ಬೇಸಿಸ್ ಮೇಲೆ ಬ್ರಾಡ್ ಗೇಜು ರೈಲ್ವೆಯ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕು ಮತ್ತು ಇದರ ಬಗ್ಗೆ ಪರಿಣತರೊಡನೆ ಸರಿಯಾಗಿ ವಿಚಾರ ವಿನಿಮಯ ಮಾಡಿ ಸೂಕ್ತವಾದ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ನನ್ನ ಅಭಿಪ್ರಾಯ.

ಶ್ರೀ ಎಸ್. ಎಂ. ಯಾಹ್ಯಾ.—ಶ್ರೀ ಕೆ. ಎಫ್. ಪಾಟೀಲ್‌ರವರು ಎಸ್ಟಿಮೇಟ್ ಕಮಿಟಿಯಲ್ಲಿ ಬಹಳ ಒಳ್ಳೆಯ ಸೂಚನೆಗಳನ್ನು ಕೊಟ್ಟಿದ್ದಾರೆ. ಅವರು ಹೇಳಿರುವಂತಹ ಸಲಹೆಗಳನ್ನು ನಾವು ಕೂಡ ಪರ್ಯಾಲೋಚನೆ ಮಾಡುತ್ತಿದ್ದೇವೆ, ಇಂತಹ ಬಂದರಗಳ ವಿಚಾರದಲ್ಲಿ ಈ ಸಭೆಯ ಸದಸ್ಯರೂ ತೀವ್ರವಾಗಿ ವಿಚಾರ ಮಾಡಬೇಕೆಂದೂ ಸಲಹೆ ಮಾಡುತ್ತೇನೆ. ತಾವೆಲ್ಲರೂ ಇದಕ್ಕೆ ತಕ್ಕ ಪ್ರೋತ್ಸಾಹವನ್ನು ಕೊಡುವುದಾದರೆ ನಾನು ಮಂತ್ರಿಯಾಗಿರುವುದರಿಂದ ನನ್ನ ಕೈಲಾಗದಷ್ಟು ಪ್ರಯತ್ನ ಮಾಡುತ್ತೇನೆ. ನಾನೂ ಕೂಡ ಕೇಂದ್ರದ ಮಂತ್ರಿಗಳೊಡನೆ ಅಲ್ಲಿಗೆ ಹೋದಾಗ ಇದರ ವಿಚಾರ ವಿನಿಮಯ ಮಾಡಿದ್ದೇನೆ. ಇದರಲ್ಲಿ ಪ್ಲಾನಿಂಗು ಯೋಜನೆಗಳಿಗಿಂತ ಇದಕ್ಕೆ ಟಾಪ್ ಪ್ರಯಾರಿಟಿ ಕೊಡಬೇಕೆಂದು ಎಸ್ಟಿಮೇಟ್ಸ್ ಕಮಿಟಿಯವರ ರಿಪೋರ್ಟಿನಲ್ಲಿ ಹೇಳಿ ಮತ್ತು ಇದರ ಬಗ್ಗೆ ಇನ್ನೂ ಹೆಚ್ಚು ವಿಚಾರಗಳನ್ನ ಅದರಲ್ಲಿ ತಿಳಿಸಿರುವುದರಿಂದ ಮಾನ್ಯ ಸದಸ್ಯರು ಆ ಕಮಿಟಿಯವರ ವರದಿಯನ್ನು ಪೂರ್ತಿಯಾಗಿ ಓದಬೇಕೆಂದು ಸಲಹೆ ಮಾಡುತ್ತೇನೆ. ಇಲ್ಲಿ ಟೂರಿಸಂ ಬಗ್ಗೆ ಮಾತ್ರ ಒಂದೆರಡು ಮಾತುಗಳನ್ನು ಹೇಳುತ್ತೇನೆ ಟೂರಿಜಂ ಫಾರಿನ್ ಎಕ್ಸ್‌ಚೇಂಜನ್ನು ತರುವಂತಹ ಒಂದು ಶಾಖೆ. ಇದಕ್ಕಾಗಿ ಟೂರಿಸಂ ಬಗ್ಗೆ ಎಷ್ಟು ಕೆಲಸಗಳು ಮಾಡಬೇಕೋ ಅಷ್ಟು ಕೆಲಸಗಳನ್ನೂ ಮಾಡಬೇಕು. ಇಷ್ಟು ಕೆಲಸಗಳನ್ನು ಮಾಡಲು ಕೇವಲ ಏಳು ಲಕ್ಷ ರೂಪಾಯಿಗಳನ್ನು ಮಾತ್ರ ಅಂದಾಜಿನಲ್ಲಿ ಒದಗಿಸಿರುವುದರಿಂದ ಎಲ್ಲ ಕೆಲಸಗಳನ್ನೂ ಇದರಲ್ಲಿ ಮಾಡಲು ಸಾಧ್ಯವಿಲ್ಲ. ಆದರೆ ಇಧಕ್ಕೆ ಸೆಂಟ್ರಲ್ ಅಸಿಸ್ಟೆನ್ಸ್ ಬರುತ್ತಿರುವುದರಿಂದ ಇದಕ್ಕಾಗಿ ಒಂದು ಪ್ರತ್ಯೇಕವಾದ ಡಿಪಾರ್ಟುಮೆಂಟು ಮಾಡಿ ಇದಕ್ಕೆ ಪ್ರತ್ಯೇಕವಾಗಿ ಒಬ್ಬರು ಡೈರೆಕ್ಟರೆಂದು ಮಾಡಿ ಇದರ ಇಲಾಖೆಯನ್ನು ಬೈಫರುಕೇಟು ಮಾಡಿ ಟೂರಿಸಂ ಇಲಾಖೆಯನ್ನೇ ಸ್ಪೆಷಲ್ ಆಗಿ ಮಾಡಲಾಗಿದೆ. ಇದಕ್ಕೆ ಈಗ ಹೊಸದಾಗಿ ಈಚೆಗೆ ಡೈರೆಕ್ಟರು ಬಂದಿರುವುದರಿಂದ ಅವರು ಮುಂದೆ ಕೊಡುವ ವರದಿ ನೋಡಿಕೊಂಡು ತಕ್ಕ ಕ್ರಮಗಳನ್ನು ತೆಗೆದುಕೊಳ್ಳಲು ಪ್ರಯತ್ನ ಮಾಡುತ್ತೇನೆ. ಇದೂ ಅಲ್ಲದೆ ಮಾನ್ಯ ಸದಸ್ಯರಾದ ಶ್ರೀಮಾನ್ ರುದ್ರಪ್ಪನವರು ಒಳ್ಳೆಯ ಸಲಹೆಗಳನ್ನು ಕೊಟ್ಟಿದ್ದಾರೆ. ಅವರು ಹೇಳುವಂತೆ ನಮ್ಮ ರಾಜ್ಯದಲ್ಲಿ ಎಲ್ಲ ಕಡೆ ಟೂರಿಸಂ ಡೆವಲಪ್ ಮಾಡಲು ಅವಕಾಶಗಳಿವೆ ಮತ್ತು ಚರಿತ್ರಾರ್ಹವಾದ ಪ್ರಸಿದ್ಧವಾದ ಸ್ಥಳಗಳಿವೆ. ಇಂತಹ ಸ್ಥಳಗಳು ಎಂದರೆ ಹಳೇಬೀಡು, ಬೇಲೂರು ಶ್ರವಣಬೆಳಗೊಳ ಇತ್ಯಾದಿಗಳಿಗೆ ಬರುವ ಪ್ರವಾಸಿಗರಿಗೆ ಸಾಕಷ್ಟು ಸೌಲಭ್ಯಗಳನ್ನು ಒದಗಿಸಿಕೊಡಬೇಕು ಇದಕ್ಕಾಗಿ ಕೆಲವು ಕಡೆ ಟೂರಿಸಂ ಸೆಂಟರುಗಳನ್ನು ತೆರೆಯಬೇಕು. ಇದಕ್ಕೆ ಹಾಸನದ ಕಾಂಪ್ಲೆಕ್ಸ್ ಎಂದು ಮಾಡಿ ಇದರಲ್ಲಿ ಮೂರು ನಾಲ್ಕು ಸ್ಥಳಗಳು ಎಂದರೆ ಹಳೇಬೀಡು, ಬೇಲೂರು ಶ್ರವಣಬೆಳಗೊಳ ಇಂತಹ ಸ್ಥಳಗಳನ್ನು ನೋಡಬರುವ ಪ್ರವಾಸಿಗರಿಗೆ ಎಲ್ಲ ಸೌಕರ್ಯಗಳನ್ನೂ ಹಾಸನದಲ್ಲಿ ಒದಗಿಸಿಕೊಡಬೇಕು. ಇದೇ ರೀತಿ ಉತ್ತರ ಕರ್ಣಾಟಕದಲ್ಲಿ ಪ್ರಸಿದ್ಧವಾದ ಹಂಪೆ ಇದೆ, ಇದರಂತೆ ಬಿಜಾಪುರದಲ್ಲಿ ಮಾನ್ಯ ಶ್ರೀ ಎಸ್. ವೈ. ಪಾಟೀಲರವರು ಹೇಳಿದಂತೆ ಗೋಳ ಗುಂಬಸ ಇದೆ, ಇವನ್ನೆಲ್ಲಾ ಅಭಿವೃದ್ಧಿ ಮಾಡಬಹುದು.

ಶ್ರೀ ಕೆ. ಹೆಚ್. ಹನುಮೇಗೌಡ.—ನಾನು ಹಂಪೆಗೆ ಹೋಗಿದ್ದೆ. ಟೂರಿಸಂ ಬಗ್ಗೆ ಇಷ್ಟೊಂದು ಮಾತನಾಡಿದಿರಿ. ಬೇಕಾದ ಜಾಗಗಳಲ್ಲಿ ಲಕ್ಷಾಂತರ ರೂಪಾಯಿ ಖರ್ಚು ಮಾಡಿ ಹಿಂದೆ ಇದ್ದ ವೈಭವವನ್ನು ಹಾಗೆಯೇ ಉಳಿಸುವ ಪ್ರಯತ್ನ ನಡೆದಿದೆ. ಆದರೆ ಹಂಪೆ 200—300 ವರ್ಷಗಳ ಕಾಲ ಹೆಮ್ಮೆಯಿಂದ ಮೆರೆದಂತಹ ರಾಜಧಾನಿ. ಅದನ್ನು ನೋಡಿ ಪ್ರತಿಯೊಬ್ಬ ಭಾರತೀಯನೂ ಕಣ್ಣೀರು ಇಡಬೇಕು. ಇದು ಯಾವ ದೌರ್ಭಾಗ್ಯವೋ ಕಾಣೆ. ನಾನು ಅಲ್ಲಿಗೆ ಹೋಗಿ ನೊಂದುಕೊಂಡು ಬಂದೆ. ಅಲ್ಲಿ ಹೋಗಿ ನೋಡಲು ಸರಿಯಾದ ರಸ್ತೆಗಳಿಲ್ಲ. ಅಲ್ಲಿ ಕೋಟ್ಯಾಂತರ ರೂಪಾಯಿ ಖರ್ಚು ಮಾಡಿ ಕಟ್ಟಿದಂತಹ ಭವ್ಯ ಕಟ್ಟಡಗಳು ಬಿದ್ದು ಹೋಗುತ್ತಿವೆ. ವಿಜಯನಗರದ ಹಿಸ್ಟರಿ ಓದಿ, ಬಹಳ ಜನ ನೋಡೋಣ ಎಂದು ಬಂದರೆ ಹಾಳು ಹಂಪೆಯಾಗಿದೆ. ಬೇರೆ ಕಡೆ ಕೋಟ್ಯಾಂತರ ರೂಪಾಯಿ ಖರ್ಚು ಮಾಡುತ್ತಿರುವಾಗ ಇದರ ಬಗ್ಗೆ ಏತಕ್ಕೆ ಗಮನ ಹರಿಸಲಿಲ್ಲ ? ಇದನ್ನೆಲ್ಲಾ ಸರಿಪಡಿಸಬೇಕು.

ಶ್ರೀ ಎಸ್. ಎಂ. ಯಾಹ್ಯಾ.—ಕೆಲವು ಪ್ರಸಿದ್ಧವಾದ ಟೂರಿಸ್ಟ್ ಸೆಂಟರ್‌ಗಳನ್ನು ಡೆವಲಪ್ ಮಾಡಬೇಕೆಂದು ನಮ್ಮ ಇಚ್ಛೆ ಇದೆ. ಮಾನ್ಯ ಸದಸ್ಯರು ಬಹಳ ಒಳ್ಳೆಯ ಸಲಹೆ ಕೊಟ್ಟಿದ್ದಾರೆ. ಲಲಿತಮಹಲ್ ವಿಷಯದಲ್ಲಿ ಕೆಲಸ ತೆಗೆದುಕೊಂಡಿದ್ದೇವೆ. ಆ ಕೆಲಸ ಬೇಗ ಮುಗಿಯುವಂತಹದ್ದಲ್ಲ. ಕೆ. ಆರ್. ಎಸ್. ನಲ್ಲಿ ಈಗ ತಾನೇ ಸರಿಯಾಗಿ ಫರ್ನಿಷ್ ಮಾಡುವಂತೆ ವ್ಯವಸ್ಥೆಯನ್ನು ಮಾಡುತ್ತಾ ಇದ್ದೇವೆ. ಶ್ರೀಮತಿ ದಮಯಂತಿ ಬೋರೇಗೌಡರವರು ಶ್ರೀರಂಗಪಟ್ಟಣದ ಬಗ್ಗೆ ಹೇಳಿದರು. ಅದು ಚರಿತ್ರಪ್ರಸಿದ್ಧವಾದ ಸ್ಥಳ. ಅದು ಟಿಪ್ಪು ಸುಲ್ತಾನನ ರಾಜಧಾನಿ ಆಗಿತ್ತು. ಅದನ್ನು ಡೆವಲಪ್ ಮಾಡಬೇಕೆಂದು ಹೇಳಿದರು. ಗುದ್ದಲಿ ಪೂಜೆಯನ್ನು ಈವರೆಗೆ ಮಾಡಿಲ್ಲ. ಈ ವರ್ಷ ಖಂಡಿತ ಗುದ್ದಲಿ ಪೂಜೆ ಮಾಡುತ್ತೇವೆ ಎಂದು ಭರವಸೆ ಕೊಡುತ್ತೇನೆ. ಕಟ್ಟಡ ಬೇಗ ಬರುತ್ತದೆ.

ಶ್ರೀ ಎಂ. ಎಸ್. ಕೃಷ್ಣನ್.—ನಮ್ಮ ಮನೆಯ ಹತ್ತಿರ ತಿರುಪತಿ- ದೇವಸ್ಥಾನವನ್ನು ಕಟ್ಟಿಸುವ ಬಗ್ಗೆ ಆಂಧ್ರ ಮತ್ತು ಕರ್ನಾಟಕ ರಾಜ್ಯದ ಇಬ್ಬರು ಮಂತ್ರಿಗಳು ಬಂದು ಕಲ್ಲು ಹಾಕಿದ್ದಾರೆ. ಆದರೂ ಕೂಡ ತಿರುಪತಿ ದೇವಸ್ಥಾನ ಬರಲಿಲ್ಲ.

ಶ್ರೀ ಎಸ್. ಎಂ. ಯಾಹ್ಯಾ.—ನಾವು ಹಾಕಿದರೆ ಚೆನ್ನಾಗಿ ಕೆಲಸ ಮಾಡಿ ತೋರಿಸುತ್ತೇವೆ. ಕರಾವಳಿ ಪ್ರದೇಶದಲ್ಲಿ ಟೂರಿಸ್ಟ್ ಡೆವಲಪ್ ಮಾಡಬೇಕು ಎಂದು ಒಂದು ಸರ್ವೆ ಮಾಡಿಸಲಿಕ್ಕೆ ಹೇಳಿದ್ದೇನೆ. ಗೋಕರ್ಣದಲ್ಲಿ ಈ ವರ್ಷ ಸರ್ವೆ ಮಾಡಿ ಟೂರಿಸ್ಟ್ ಸೆಂಟರ್ ಮಾಡಬೇಕು ಎಂದು ಇದ್ದೇವೆ. ಅದು ಒಳ್ಳೆಯ ರಿಲಿಜಿಯಸ್ ಪ್ಲೇಸ್ ಆಗಿದೆ. ಇದೇ ರೀತಿಯಲ್ಲಿ ಮರಗುಂತೆ ಬೀಚನ್ನೂ ಡೆವಲಪ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತಾ ಇದ್ದೇವೆ. ಟೂರಿಸಂ ಚೆನ್ನಾಗಿ ಬೆಳೆಯಬೇಕು ಮತ್ತು ಟೂರಿಸ್ಟ್ಸ್ ಹೆಚ್ಚಿಗೆ ಬರಬೇಕು. ಇದರಿಂದ ನಮ್ಮ ಕರ್ನಾಟಕಕ್ಕೆ ಒಳ್ಳೆಯ ಲಾಭವಾಗುತ್ತದೆ. ಟೂರಿಸಂ ವಿಷಯದಲ್ಲಿ ಇಷ್ಟು ಮಾತ್ರ ಹೇಳುತ್ತೇನೆ.

ಇನ್ನು ಕಾರ್ಮಿಕ ಶಾಖೆಯ ವಿಷಯದಲ್ಲಿ ಮಾನ್ಯ ಸದಸ್ಯರು ಒಳ್ಳೆಯ ಸಲಹೆ ಮತ್ತು ಸೂಚನೆಗಳನ್ನು ಕೊಟ್ಟಿದ್ದಾರೆ. ಕಾರ್ಮಿಕರ ಶಾಖೆ ಬೆಳೆಯುವಂಥ ಶಾಖೆ· ಅದರ ಬೇಡಿಕೆ ಇಷ್ಟು. ಇದೆಯೋ ಅಷ್ಟು ಹಣವನ್ನು ಕೊಟ್ಟಿದ್ದಾರೆ. ಅಷ್ಟು ಸಾಲದು ಎಂದು ಮಾನ್ಯ ಶ್ರೀರಾಮುಲು ಅವರು ಹೇಳಿದ್ದಾರೆ. ಅವರು ಹೇಳುವಂಥಾದ್ದು ಸರಿಯಾದ ಮಾತು. ಹೆಚ್ಚು ಹಣ ದೊರಕಿದರೆ ಹೆಚ್ಚು ಸೌಕರ್ಯಗಳನ್ನು ಕಾರ್ಮಿಕರಿಗೆ ಕೊಡಬಹುದು. ಬಡ್ಜೆಟ್ ಮಾಡುವಾಗ ಇತರ ಇಲಾಖೆಗಳ ವಿಷಯವನ್ನು ತಿಳಿದುಕೊಂಡು ಯಾವ ಯಾವ ಇಲಾಖೆಗೆ ಎಷ್ಟೆಷ್ಟು ಆಗಬಹುದೆಂದು ಹೇಳಿ ಆ ವಿಚಾರವನ್ನು ಮನಗಂಡು 2 ಕೋಟಿ 87 ಲಕ್ಷ ರೂಪಾಯಿಗಳನ್ನು ಈ ಇಲಾಖೆಗೆ ಕೊಟ್ಟಿದ್ದೇವೆ. ಇನ್ನೂ ಹಣ ತೆಗೆದುಕೊಳ್ಳುವ ಪ್ರಯತ್ನ ಮಾಡುತ್ತೇವೆ ಎಂದು ಹೇಳುತ್ತೇನೆ. ಶ್ರೀಮಾನ್ ಎಂ. ಎಸ್. ಕೃಷ್ಣನ್‌ರವರು ಒಳ್ಳೆಯ ವಿಷಯವನ್ನು ಕಾರ್ಮಿಕರ ವಿಚಾರದಲ್ಲಿ ಹೇಳಿದ್ದಾರೆ. ಅವರ್ ಕಾರ್ಮಿಕರಂಗದಲ್ಲಿ not only experienced, he is an expert I can say. The Hon Member, Sri Krishnan has enumerated certain industries where there has been certain unrest, for instance, he said about the Andhra Steel Corporation and the Mangaram Biscuit Factory. But by and large, there has been industrial peace except of course, a few exceptions which he has mentioned. There are 5000 industries round about Bangalore itself and it is quite natural that there will be few cases of breach of peace and cases of just demands which were not conceded by the management and so on. But, what I feel is, that there is much industrial peace in Karnataka and we develop a new environment, almost a new outlook, a new orientation. As Mr. Krishna puts it, that the new orientation is the managementsAtleast nowthey come,sit, talk, negotiate and settle matters. This is a very good development. Now, both the labour and the management sit together, and settle the disputes. We have settled number of problems in this way and our labour leaders have been very much co-operating and the Management have also realised the new socio-economic objectives of the Government. This Government want a fair detl with the lebour and we provide all the amenities and convenience to the labourers. The hard

core we find is less now. Of course, there are few managements which are not so good, but, on the whole, they have also changed the outlook considering the socio-economic changes in the country. Our Labour Department also has been very helpful. Every settlement can be reached by negotiation, by discussion, and our Officers are working so hard in these matters. In fact, the hon. Member, Sri Krishnan knows that we have settled number of disputes in that way and he has referred also one or two of them. The progress is quite satisfactary because we feel that both the labour on the one hand and the Management on the other are not the warring groups. There is no perpetual rivalry between these two groups. Once this aspect is understood by both sides, we can settle amicably many of the outstanding problems. The only thing is, there must not be a suppressed hostility and bitterness. If that is not there, we can have a better industrial peace, better atmosphere and better environment.

Sri KAGODU THIMMAPPA,—Provided that the police interference is avoided.

Sri S. M. YAHYA.—Of course Police has to interfere wherever necessary, but they do not interfere when there is pure industtial dispute. When there is a semblance of violence, it is a question of law and order and they may have to interfere.

Sri M. S. KRISHNAN.—The Assistant Commissioner of Police takes people in the employers car. It it wise?

Sri S. M. YAHYA.—The new orientation cannot be got within a day or night.

The socialism could be achieved only by evolution but not by revolution as far as this Government is concerned. Therefore, the go-slow tactics or strikes or lock-outs and violence should be avoided. These violence, lock-outs and strikes are not only harmful to the management, but it will be a loss to the workers also. It is against the very national interest. Therefore, Smt. Indira Gandhi and the President Sri V. V. Giri advised that there should not be any lock-outs or strikes. It is with good intention that they have advised in that manner. In the interest of the workers as well as the national interest they have advocated that there should not be any lock-outs or strikes. Any violence in the country will harm the national property and prosperity, which will not take country towards progress.

ಇನ್ನು ಮಾನ್ಯ ಕೃಷ್ಣನ್ ಅವರು ಅಜ್ಯುಡಿಕೇಷನ್ ಟ್ರಿಬ್ಯುನಲ್‌ಗಳ ಬಗ್ಗೆ ಕೆಲವು ಮಾತುಗಳನ್ನು ಹೇಳಿದ್ದಾರೆ. ಈಗಿರುವ ಕಾನೂನು ಪ್ರಕಾರ ಹೈಕೋರ್ಟಿನವರು ಈ ಟ್ರಿಬ್ಯುನಲ್‌ಗಳಿಗೆ ಜಡ್ಜ್‌ಗಳನ್ನು ನೇಮಕ ಮಾಡುತ್ತಾರೆ. ಈ ರೀತಿ ನೇಮಕಗೊಳ್ಳುವವರು ಸೋಷಿಯೋ ಎಕನಾಮಿಕ್ ಆಬ್‌ಜೆಕ್ಟ್ಸ್ ಇಟ್ಟುಕೊಂಡು ಕೆಲಸ ಮಾಡುತ್ತಿಲ್ಲ ಮತ್ತು ಕೇಸ್‌ಗಳು ಜಾಗ್ರತೆ ತೀರ್ಮಾನವಾಗುತ್ತಿಲ್ಲ ಎಂದು ಜನರಲ್ ಆಗಿ ಕ್ರಿಟಿಸಿಸಮ್ ಮಾಡಿದರು. ಅವರು ಹೇಳುವ ಪ್ರಕಾರ ಒಳ್ಳೆಯ ಜಡ್ಜ್‌ಗಳು ಬಂದರೆ ಕೇಸ್‌ಗಳು ಜಾಗ್ರತ ತೀರ್ಮಾನವಾಗಬಹುದು ಮತ್ತು ಅದರಿಂದ ಕಾರ್ಮಿಕರಿಗೂ ಅನುಕೂಲವಾಗಬಹುದು; ನನ್ನ ದೃಷ್ಟಿಯಲ್ಲಿಯೂ ಸಹ ಕೇಸ್‌ಗಳು ಜಾಗ್ರತೆ ತೀರ್ಮಾನವಾದರೆ ಅದರಿಂದ ಕಾರ್ಮಿಕರಿಗೆ ಒಂದು ಕಾನ್‌ಫಿಡೆನ್ಸ್ ಬರುತ್ತದೆ, ಇಲ್ಲದಿದ್ದರೆ ಒಂದು ಕೇಸ್

(SRI S. M. YAHYA)

ತೀರ್ಮಾನವಾಗಲು 3 ರಿಂದ 5 ವರ್ಷಗಳ ಕಾಲ ಬೇಕಾದರೆ ಆಗ ಅದರಲ್ಲಿ ಕಾರ್ಮಿಕರಿಗೆ ನಂಬಿಕೆಯಿರುವುದಿಲ್ಲ. ಆದಕಾರಣ ಆದಷ್ಟು ಬೇಗ ಕೇಸ್‌ಗಳು ಇತ್ಯರ್ಥವಾಗುವುದು ಒಳ್ಳೆಯದು. ಇದನ್ನು ಯಾವ ರೀತಿ ಬಗೆಹರಿಸಬೇಕು ಎಂಬುದನ್ನು ನೋಡುತ್ತಿದ್ದೇವೆ.

ಇನ್ನು ಮಾನ್ಯ ಕೃಷ್ಣನ್ ಅವರು ಷಹಬಾದ್‌ನಲ್ಲಿ ನಡೆದಿರುವ ಮುಷ್ಕರದ ವಿಷಯ ಹೇಳಿದ್ದಾರೆ. ಅಲ್ಲಿ ಕಳೆದ 60 ದಿವಸಗಳಿಂದ ಮುಷ್ಕರ ನಡೆದಿದೆ. ಆ ಬಗ್ಗೆ ಮಾತುಕತೆ ನಡೆಸಿ ತೀರ್ಮಾನ ಮಾಡಬೇಕು ಎಂದು ನಾನು ಎರಡು ಮೂರು ಸಲ ಮೇನೇಜ್‌ಮೆಂಡ್‌ನವರನ್ನು ಮತ್ತು ಕಾರ್ಮಿಕರನ್ನು ಕರೆಸಿ ಮಾತನಾಡಿದೆ. ಗುಲ್ಬರ್ಗಾದಲ್ಲಿ ನಡೆದ ಚುನಾವಣೆಯ ಸಂಬಂಧದಲ್ಲಿ ನಮ್ಮ ಪಕ್ಷವನ್ನು ವಿರೋಧ ಮಾಡಬೇಕು ಎಂದುಕೊಂಡು ಅದರ ಮಾಲೀಕರು ಈ ರೀತಿ ಮುಷ್ಕರ ಮುಂದುವರೆಯುವುದಕ್ಕೆ ಅವಕಾಶ ಉಂಟುಮಾಡಿದರು ಎಂಬತಕ್ಕಂಥ ವಿಷಯ ನನಗೆ ಗೊತ್ತಿಲ್ಲ; ಅವರು ಆ ರೀತಿ ಮಾಡಿದ್ದರೆ ಅದು ತಪ್ಪಾಗುತ್ತದೆ. ನಾವು ಸಹ ಬಹಳವಾಗಿ ಇದನ್ನು ತೀರ್ಮಾನ ಮಾಡಬೇಕು ಎಂದು ಪ್ರಯತ್ನ ಪಟ್ಟರೂ ಸಹ ಅದು ಸಾಧ್ಯವಾಗದಿದ್ದರಿಂದ ಆ ಬಗ್ಗೆ ಒಂದು ಸ್ಪೆಷಲ್ ಟ್ರಿಬ್ಯುನಲ್‌ನ್ನು ಮಾಡಿ ಮೂರು ತಿಂಗಳೊಳಗೆ ಅವರ ಡಿಮ್ಯಾಂಡ್ಸ್ ಏನಿವೆ ಅವುಗಳನ್ನು ಬಗೆಹರಿಸಬೇಕು ಎಂದು ನಾವು ಅವರಿಗೆ ರೆಫರ್ ಮಾಡಿ ಆಗಿದೆ. ಆದರೆ ಅದಕ್ಕೆ ಹೈಕೋರ್ಟಿನ ಆಜ್ಞೆ ಬೇಕಾಗಿದೆ. For that the concurrence of the High Court is necessary. In fact it is in the hands of the High Court. As soon as we get the concurrence from them, we declare the strike as well as the lock-outs as illegal.

ಇನ್ನು ಬೀಡಿ ಮತ್ತು ಸಿಗಾರ್ ಆಕ್ಟ್ ವಿಷಯದಲ್ಲಿ ಸುಪ್ರೀಂ ಕೋರ್ಟಿನವರು ಅದು ಕಾನ್‌ಸ್ಟಿಟ್ಯೂಷನಲ್ ಮತ್ತು ವ್ಯಾಲಿಡ್ ಎಂದು ಹೇಳಿದ್ದಾರೆ. ಆ ರೀತಿ ಹೇಳಿ ಒಂದು ತಿಂಗಳಾಯಿತ್ತು. ಆದರೆ ಅದನ್ನು ಯಾವ ರೀತಿ ಇಂಪ್ಲಿಮೆಂಟ್ ಮಾಡಬೇಕು ಎಂಬುದನ್ನು ನೋಡಬೇಕಾಗಿದೆ. ಏಕೆಂದರೆ ಅದರಲ್ಲಿ ಕೆಲವು ಕಾಂಪ್ಲೆಕ್ಸ್ ಪ್ರಾಬ್ಲಮ್ಸ್ ಇವೆ. ಈ ಬಗ್ಗೆ ಮತ್ತು ಇನ್ನೂ ಕೆಲವು ಅಂಶಗಳನ್ನು ಬಗೆಹರಿಸುವ ಸಲುವಾಗಿ ಒಂದು ಲೇಬರ್ ಮಿನಿಸ್ಟರ್ಸ್ ಕಾನ್‌ಫರೆನ್ಸ್ ಕರೆಯಬೇಕೆಂದು ಕೇಂದ್ರದ ಕಾನೂನು ಮಂತ್ರಿಗಳಾದ ಶ್ರೀ ರಘುನಾಥರೆಡ್ಡಿಯವರಿಗೆ ಕಾಗದ ಬರೆದಿದ್ದೇವೆ. ಈಗ ನಾವು ಕೇರಳಾ ಬಿಟ್ಟರೆ ಬೀಡಿ ಕಾರ್ಮಿಕರಿಗೆ ಸಾವಿರ ಬೀಡಿ ಕಟ್ಟಲು 4-30 ರೂಪಾಯಿ ಕೂಲಿ ಕೊಡುತ್ತಿದ್ದೇವೆ. ಆಂಧ್ರ ಮಧ್ಯ ಪ್ರದೇಶದಲ್ಲಿಯೂ ಸಹ ಇಷ್ಟು ಕೂಲಿ ಕೊಡುತ್ತಿಲ್ಲ. ಮುಖ್ಯವಾಗಿ ನಮ್ಮ ಈ ಇಂಡಸ್ಟ್ರಿಗಳು ಬೆಳೆಯಬೇಕು, ಕಾರ್ಮಿಕರಿಗೆ ತೊಂದರೆಯಾಗಬಾರದು ಎಂದುಕೊಂಡು, ಈ ಬಗ್ಗೆ ಈಗ ಇರತಕ್ಕಂಥ ಕಾನೂನುಗಳನ್ನು ಯೂನಿಫಾರಮ್ ಆಗಿ ಇಂಪ್ಲಿಮೆಂಟ್ ಮಾಡಬೇಕು ಎಂದು ನಾವು ಕೇಂದ್ರದ ಮಂತ್ರಿಗಳಿಗೆ ಬರೆದು ತಿಳಿಸಿದ್ದೇವೆ.

ಇನ್ನು ಟೆಕ್ಸ್‌ಟೈಲ್ ವಿಷಯದಲ್ಲಿ ಹೇಳುವುದಾದರೆ, ಕಾರ್ಮಿಕರಿಗೆ ಕೆಲವು ಮಿಲ್‌ಗಳಲ್ಲಿ ವೇತನವನ್ನು ಹೆಚ್ಚು ಕೊಡುತ್ತಿದ್ದಾರೆ, ಮತ್ತೆ ಕೆಲವು ಕಡೆ ಕಡಿಮೆ ಕೊಡುತ್ತಿದ್ದಾರೆ. ಒಟ್ಟಿನಲ್ಲಿ ವೇತನದಲ್ಲಿ ಬಹಳ ಅಂತರವಿದೆ. ಈ ಒಂದು ವ್ಯತ್ಯಾಸವನ್ನು ಹೋಗಲಾಡಿಸಬೇಕು ಎಂದು ಮಾರ್ಚಿ 3 ಮತ್ತು 4ನೇ ತಾರೀಖುಗಳಲ್ಲಿ ಟ್ರೈ ಪಾರ್‌ಟೈಟ್ ಕಾನ್‌ಫರೆನ್ಸ್ ನಡೆದಾಗ ಮಿಲ್ ಮಾಲೀಕರುಗಳ ಹತ್ತಿರ ಮಾತನಾಡಿದೆ. ಅಂದು ಸುಮಾರು 30 ಮಿಲ್‌ಗಳ ಮಾಲೀಕರು ಬಂದಿದ್ದರು. ಮತ್ತು ಕಾರ್ಮಿಕರ ನಾಯಕರು ಸಹ ಬಂದಿದ್ದರು. ನಂತರ ಈ ಬಗ್ಗೆ ಒಂದು ಕಮಿಟಿಯನ್ನು ಮಾಡಿ ಅವರಿಗೆ ಒಂದು ತಿಂಗಳಲ್ಲಿ ಇಂಟೀರಿಯಮ್ ರಿಪೋರ್ಟ್ ಕೊಡಬೇಕೆಂದು ಹೇಳಿದ್ದೇವೆ. ಆ ಕಮಿಟಿಯವರು ಕೆಲಸ ಮಾಡುತ್ತಿದ್ದಾರೆ. ಅವರ ರಿಪೋರ್ಟ್ ಬಂದಮೇಲೆ ಸರ್ಕಾರ ಯಾವ ಕಾರ್ಯಕ್ರಮಗಳನ್ನು ಕೈಕೊಳ್ಳಬೇಕೋ ಅದನ್ನು ತೆಗೆದುಕೊಳ್ಳುತ್ತದೆ.

ಇನ್ನು ಮಿನಿಮಮ್ ವೇಜಸ್ ಆಕ್ಟ್ ವಿಷಯದಲ್ಲಿ ಮಾನ್ಯ ಕೋಣಂದೂರು ಲಿಂಗಪ್ಪನವರು ಹೇಳಿದರು. ಕಾನೂನುಗಳು ಕೇವಲ ಪುಸ್ತಕಗಳಲ್ಲಿವೆಯೇ ಹೊರತು ಜಾರಿಗೆ ಬಂದಿಲ್ಲ ಎಂದು ಹೇಳಿದರು. ಮತ್ತು ಈಗ 26 ಆಕ್ಟ್‌ಗಳು ಏನಿವೆ ಅವು ಬ್ರಿಟೀಷರ ಕಾಲದ್ದು ಎಂದು ಹೇಳಿದರು. ಆದರೆ ಅದು ಸರಿಯಲ್ಲ; 1948 ರಲ್ಲಿ ಇಂಡಸ್ಟ್ರಿಯಲ್ ಡಿಸ್‌ಪ್ಯೂಟ್ ಆಕ್ಟ್ ಜಾರಿಗೆ ಬಂತು. ಅನಂತರ ಜಾರಿಗೆ ಬಂದ ಕಾನೂನುಗಳು ಏನಿವೆ, ಅವುಗಳನ್ನು ಕೇಂದ್ರ ಸರ್ಕಾರದವರು ಮಾಡಿದ್ದು. ಷಾಪ್ಸ್ ಅಂಡ್ ಎಸ್ಟಾಬ್ಲಿಷ್‌ಮೆಂಟ್ ಆಕ್ಟ್ ಮತ್ತು ಇನ್ನೂ ಎರಡು ಕಾನೂನುಗಳನ್ನು ನಮ್ಮ ಕರ್ನಾಟಕ ರಾಜ್ಯದವರು ಮಾಡಿದ್ದು. ಆದಕಾರಣ ನಾವು ಯಾವ ಕಾನೂನುಗಳನ್ನು ಸಹ ಮಾಡಿಲ್ಲ ಎಂದು ಮಾನ್ಯ ಕೃಷ್ಣನ್ ಅವರು ಹೇಳಿದ್ದು ಸರಿಯಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ಅದನ್ನು ಯಾವಾಗ ಮಾಡಿದ್ದು ?

ಶ್ರೀ ಎಸ್. ಎಂ. ಯಾಹ್ಯಾ.—1961 ರಲ್ಲಿ.

ಶ್ರೀ ಎಂ. ಎಸ್. ಕೃಷ್ಣನ್.—ನಿಮ್ಮ ಕಾಲದಲ್ಲಿ ಯಾವುದನ್ನು ಮಾಡಿದ್ದೀರಿ ಎಂಬುದನ್ನು ಹೇಳಿ. ಹಿಂದೆ ಆದ ವಿಷಯ ಬೇಡ.

ಶ್ರೀ ಎಸ್. ಎಂ. ಯಾಹ್ಯಾ.—ಕೇಂದ್ರ ಸರ್ಕಾರದವರು ಏನು ಕಾನೂನು ಮಾಡುತ್ತಾರೋ ಅದನ್ನು ನಾವು ಇಂಪ್ಲಿಮೆಂಟ್ ಮಾಡುತ್ತೇವೆ. ಕಾನೂನಿನ ವಿಷಯದಲ್ಲಿ ಇಡೀ ದೇಶದಲ್ಲಿ ಒಂದು ಯೂನಿಫಾರಂ ಇರಲಿ ಎಂದುಕೊಂಡು ಕಾನೂನುಗಳನ್ನು ಈ ಬಗ್ಗೆ ಮಾಡಲು ಕೇಂದ್ರ ಸರ್ಕಾರಕ್ಕೇ ಬಿಡುತ್ತಿದ್ದೇವೆ.

ಇನ್ನು ಮಾನ್ಯ ಕೃಷ್ಣನ್ ಅವರು ಮಂಗಾರಾಮ್ ಬಿಸ್ಕಟ್ ಫ್ಯಾಕ್ಟರಿ ವಿಷಯ ಹೇಳಿದ್ದಾರೆ. ಈಗ ಅದು ನಮ್ಮ ಕೈಯಲ್ಲಿ ಇಲ್ಲ. ಲೇಬರ್ ಡಿಸ್‌ಪ್ಯೂಟ್ ಇರುವುದರಿಂದ ಅದನ್ನು ಟ್ರಿಬ್ಯೂನಲ್‌ಗೆ ರೆಫರ್ ಮಾಡಲಾಗಿದೆ. ಅದೇ ರೀತಿ ಅವರು ಆಂಧ್ರ ಸ್ಟೀಲ್ ವಿಚಾರವನ್ನು ಕೂಡ ರೆಫರ್ ಮಾಡುತ್ತಿದ್ದೇವೆ. ಆದರೆ ಮಾನ್ಯ ಕೃಷ್ಣನ್ ಅವರು ರಾ—ಮೆಟೀರಿಯಲ್ಸ್‌ನ್ನು ಅವರಿಗೆ ಕೊಡಬಾರದು, ವಿದ್ಯುಚ್ಛಕ್ತಿ ಸರಬರಾಜನ್ನು ನಿಲ್ಲಿಸಬೇಕು ಮತ್ತು ಪೋಲೀಸ್ ರಕ್ಷಣೆಯನ್ನು ಕೊಡಬಾರದು ಎಂದು ಹೇಳಿದರು. ಅವರಿಗೆ ಕಾನೂನು ಪ್ರಕಾರ ವಿದ್ಯುಚ್ಛಕ್ತಿ ಸಿಕ್ಕುವುದಾದರೆ, ಅದನ್ನು ತೆಗೆದು ಹಾಕಿದರೆ ಅದು ನಮ್ಮ ತಪ್ಪಾಗುತ್ತದೆ. ಇಂತಹ ವಿಚಾರಗಳನ್ನು ಅವರು ಈ ಸಭೆಯಲ್ಲಿ ಹೇಳಬಾರದು ; ಮುಖ್ಯವಾಗಿ ಕಾನೂನಿಗೆ ವಿರುದ್ಧವಾಗಿ ಯಾವ ಕೆಲಸವನ್ನು ಸಹ ಮಾಡುವುದಕ್ಕಾಗುವುದಿಲ್ಲ. ಮತ್ತು ಇದು ಬಹಿರಂಗವಾಗಿ ಹೇಳಿಕೊಂಡು ಮಾಡುವಂತಹ ವಿಷಯವಲ್ಲ ; ಆದಕಾರಣ ಇಂತಹ ವಿಷಯಗಳನ್ನು ಅಸೆಂಬ್ಲಿಯಲ್ಲಿ ಹೇಳಬೇಡಿ ಎಂದು ಅವರಿಗೆ ಹೇಳುತ್ತೇನೆ.

ಇನ್ನು ಕಾಂಟ್ರಾಕ್ಟ್ ಲೇಬರ್ ವಿಷಯ ಹೇಳಿದ್ದಾರೆ. ಸುಪ್ರೀಂ ಕೋರ್ಟಿನವರು ಅದು ಕಾನ್ಸ್‌ಟಿಟ್ಯೂಷನಲ್ ಎಂದು ಹೇಳಿರುವುದರಿಂದ ಅದನ್ನು ಇಂಪ್ಲಿಮೆಂಟ್ ಮಾಡುವುದಕ್ಕೆ ಎಲ್ಲ ಕಾರ್ಯವನ್ನು ಮಾಡುತ್ತಿದ್ದೇವೆ.

6-00 P. M.

ಆ ಬಗ್ಗೆ ರೂಲ್ಸ್ ಸೆಟ್ ಅಪ್ ಆಗುತ್ತಿದೆ. ಕಾಂಟ್ರಾಕ್ಟ್ ಲೇಬರ್ ಜಾರಿಗೆ ತರುತ್ತೇವೆ. ದಾಂಡೇಲಿ ಪೇಪರ್ ಮಿಲ್ಲಿನ ಕಾಂಟ್ರಾಕ್ಟ್ ಲೇಬರ್ ಇಷ್ಯೂ ಇತ್ತು. ಅದನ್ನು ಸೆಟ್ಲ್ ಮಾಡಿದ್ದೇವೆ. ಆಕ್ಟ್ ವಾಲೀಡ್ ಎಂದು ಬಂದಿರುವುದರಿಂದ ಅದನ್ನು ಇಂಪ್ಲಿಮೆಂಟ್ ಮಾಡುತ್ತೇವೆ. ಶ್ರೀಮಾನ್ ಕೃಷ್ಣನ್ ಅವರು ಸ್ಟ್ಯಾಟಿಸ್ಟಿಕ್ಸ್ ಸೆಲ್ ವಿಷಯ ಹೇಳಿದ್ದಾರೆ. ಇದು ಬಹಳ ಮುಖ್ಯ ವಾದದ್ದು. ಸ್ಟ್ಯಾಟಿಸ್ಟಿಕ್ಸ್ ಬೇಕಾಗುತ್ತದೆ. ಅದನ್ನ ಚೆನ್ನಾಗಿ ಮಾಡಬೇಕು. ಲೈಬ್ರರಿ ಮಾಡಬೇಕೆಂದು ಹೇಳಿದ್ದಾರೆ. ಅದನ್ನು ಖಂಡಿತವಾಗಿಯೂ ಯೋಚನೆ ಮಾಡುತ್ತೇವೆ.

ಮಾನ್ಯ ಸದಸ್ಯರಾದ ಶ್ರೀರಾಮುಲು ಅವರು ಕೆಲವು ಒಳ್ಳೆಯ ವಿಷಯಗಳನ್ನು ಹೇಳಿದ್ದಾರೆ. ಇದರಲ್ಲಿ ಟ್ರಿಬ್ಯೂನಲ್ ವಿಷಯ ಹೇಳಿದ್ದಾರೆ. ಆ ವಿಷಯವನ್ನು ನಾನು ರಿಪೀಟ್ ಮಾಡುವುದಕ್ಕೆ ಇಚ್ಛೆಪಡುವುದಿಲ್ಲ. ಡೆತ್. ರಿಲೀಫ್ ಫಂಡ್ ವಿಷಯವನ್ನು ಬಹಳ ಚೆನ್ನಾಗಿ ಹೇಳಿದ್ದಾರೆ. ಅದಕ್ಕೆ ನಾವು ಪ್ರಯತ್ನ ಮಾಡಿದ್ದೇವೆ. ಅದನ್ನು ಯಾವರೀತಿ ಮಾಡಬೇಕು ಎನ್ನುವುದರ ಬಗ್ಗೆ ಲಿಟಿಗೇಷನ್ ಬಂದು ಕೆಲವರು ಕೋರ್ಟಿಗೆ ಹೋಗಿ ಸ್ಟೇ ತಂದಿದ್ದಾರೆ. ಆದ್ದರಿಂದ ಇದು ಸ್ವಲ್ಪ ಕಷ್ಟವಾಗಿದೆ. ನಾವೇ ಕುಳಿತುಕೊಂಡು ಅದನ್ನು ಯಾವರೀತಿ ಪರಿಹರಿಸಬೇಕು ಎಂಬುದನ್ನು ನಿರ್ಧಾರ ಮಾಡಬೇಕು. ಎಲ್ಲಾ ವಿಷಯಗಳನ್ನೂ ಕೋರ್ಟಿಗೆ ತೆಗೆದುಕೊಂಡು ಹೋದರೆ ಕಷ್ಟವಾಗುತ್ತದೆ. ಇದನ್ನು ಮಾತನಾಡಿ ಸೆಟ್ಲ್ ಮಾಡುವುದಕ್ಕೂ ಕಷ್ಟವಾಗುತ್ತದೆ. ಆದ್ದರಿಂದ ಇಂಥಾ ವಿಷಯಗಳನ್ನು ಕೋರ್ಟಿಗೆ ಹಾಕದೇ ಇಲ್ಲೇ ಕುಳಿತುಕೊಂಡು ಬಗೆಹರಿಸಬೇಕು.

ಶ್ರೀಮಾನ್ ವೆಂಕಟಲಿಂಗಯ್ಯನವರು ಕಾರ್ಮಿಕರಿಗೆ ಫೆಸಿಲಿಟೀಸ್ ಕೊಡಬೇಕು, ಫೇರ್‌ಪ್ರೈಸ್ ಡಿಪೋಗಳನ್ನು ಮಾಡಬೇಕು ಎಂದು ಹೇಳಿದ್ದಾರೆ. ಅವರಿಗೆ ಹಲವಾರು ಕಡೆ ಕನ್‌ಜ್ಯೂಮರ್ಸ್ ಷಾಪುಗಳು ಚೆನ್ನಾಗಿ ನಡೆಯುತ್ತಿವೆ. ಕೆಲವು ಕಡೆ ದೊಡ್ಡ ದೊಡ್ಡ ಫ್ಯಾಕ್ಟರಿಗಳಲ್ಲಿ ಮ್ಯಾನೇಜ್‌ಮೆಂಟಿನವರು ಕಾರ್ಮಿಕರಿಗೆ ಕಡಿಮೆ ದರಕ್ಕೆ ಊಟವನ್ನೂ ಸಹ ಕೊಡುತ್ತಿದ್ದಾರೆ. ಒಂದು ರೂಪಾಯಿಗಿಂತ ಕಡಿಮೆ ಊಟವನ್ನು ಕೊಡತಕ್ಕಂಥಾ ಮ್ಯಾನೇಜ್‌ಮೆಂಟ್‌ಗಳೂ ಸಹ ಇವೆ.

(ಶ್ರೀ ಎಸ್. ಎಂ. ಯಾಹ್ಯಾ)

ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್ ಬಗ್ಗೆ ಕೂಡ ಮಾನ್ಯ ಸದಸ್ಯರು ಹೇಳಿದ್ದಾರೆ. ಎಂಪ್ಲಾಯ್‌ಮೆಂಟ್ ಎಕ್ಸ್‌ಚೇಂಜ್‌ಗಳು ಎಫಿಷಿಯೆಂಟ್ ಆಗಿ ನಡೆಯುತ್ತಿಲ್ಲ, ಅದರಲ್ಲಿ ಕರಪ್ಷನ್ ಇದೆ ಎಂದು ಹೇಳಿದ್ದಾರೆ. ಆದರೆ ಅದು ತೀರಾ ಎಫಿಷಿಯಂಟ್ ಆಗಿ ನಡೆಯುತ್ತದೆ, ತೀರಾ ಕರಪ್ಷನ್ ಇಲ್ಲ ಎಂದು ಹೇಳುವುದಕ್ಕೆ ಸಾಧ್ಯವಿಲ್ಲ. ಅದನ್ನು ಯಾವ ರೀತಿಯಲ್ಲಿ ಬದಲಾವಣೆ ಮಾಡಬೇಕು ಎಂದು ಯೋಚನೆ ಮಾಡಿ ಅದಕ್ಕೆ ಈಗ ಬೆಂಗಳೂರಿನಲ್ಲಿ ಕಂಪ್ಯೂಟರ್ ಮಾಡಬೇಕು ಎಂದು ಅದಕ್ಕಾಗಿ ಒಂದು ಲಕ್ಷ 23 ಸಾವಿರ ರೂಪಾಯಿಗಳನ್ನು ಮಂಜೂರು ಮಾಡಿದ್ದೇವೆ. ಅದನ್ನು ಕಾರ್ಡ್ ಫಾರಂನಲ್ಲಿ ಸೂಟಬಿಲಿಟಿ ನೋಡಿಕೊಂಡು ಕಂಪ್ಯೂಟರ್ ಮೂಲಕ ಮಾಡಬೇಕೆಂದಿದ್ದೇವೆ. ಅದು ಆದಷ್ಟು ಎಫಿಷಿಯೆಂಟಾಗಿ ಬರಬಹುದು. ಆದ್ದರಿಂದ ಕರಪ್ಷನ್ ಕಡಿಮೆಯಾಗಬಹುದು. ಇದನ್ನು ಬೆಂಗಳೂರಿನಲ್ಲಿ ಪ್ರಾಯೋಗಿಕವಾಗಿ ಮಾಡುತ್ತಿದ್ದೇವೆ.

ಶ್ರೀಮಾನ್ ಕೃಷ್ಣನ್ ಅವರು ಟ್ರಿಬ್ಯುನಲ್ ಬಿಟ್ಟಿಂಗ್ ವಿಷಯದಲ್ಲಿ ಹೇಳಿದ್ದಾರೆ. ಆ ವಿಚಾರವನ್ನು ಗಮನಿಸಿ ಆ ಬಗ್ಗೆ ಯಾವ ಸೂಕ್ತ ಕ್ರಮ ಮಾಡಬೇಕೋ ಅದನ್ನು ಮಾಡುತ್ತೇವೆ. ದಾಂಡೇಲಿ ಯೋಜನೆಯ ಬಗ್ಗೆ ಶ್ರೀಮಾನ್ ಕೋಣಂದೂರು ಲಿಂಗಪ್ಪನವರು ಬಹಳ ಹೇಳಿದ್ದಾರೆ. ಅವರಿಗೆ ತಿಳಿದಿರುವ ಹಾಗೆ ನಾಳೆ ಮೇ ತಿಂಗಳು ಒಂದನೇ ತಾರೀಖು ಬೆಂಗಳೂರಿನಲ್ಲಿ ಮಾನ್ಯ ಸದಸ್ಯರ ಪರವಾಗಿ ಶ್ರೀಮಾನ್ ಕಾಗೋಡು ತಿಮ್ಮಪ್ಪನವರು ಮತ್ತು ಶ್ರೀಮಾನ್ ಕದಂ ಸಾಹೇಬರನ್ನು ಕರೆದು ಮ್ಯಾನೇಜ್‌ಮೆಂಟ್ ಕಡೆ ಹೇಳುವ ಒಂದು ವಿಚಾರ, ಲೇಬರ್ ಕಡೆ ಹೇಳುವ ಒಂದು ವಿಚಾರ ಎಲ್ಲವನ್ನೂ ಡಿಸ್‌ಕಸ್ ಮಾಡಬೇಕೆಂದು ಒಂದು ಕಾನ್‌ಫರೆನ್ಸ್ ಕರೆದಿದ್ದೇವೆ. ಅದನ್ನು ಅವರು ಗಮನಿಸಬೇಕು. ಇಷ್ಟು ಹೇಳಿ ಮಾನ್ಯ ಸದಸ್ಯರು ಈ ಬೇಡಿಕೆಯ ಮೇಲೆ ಏನೇನು ಸಲಹೆಗಳನ್ನು ಕೊಟ್ಟಿದ್ದಾರೆಯೋ ಅವುಗಳನ್ನು ಪರಿಶೀಲನೆ ಮಾಡುತ್ತೇವೆ ಎಂದು ಹೇಳಿ ಈ ನನ್ನ ಇಲಾಖೆಗೆ ಸಂಬಂಧಪಟ್ಟ ಬೇಡಿಕೆಗಳಿಗೆ ಮಾನ್ಯ ಸದಸ್ಯರು ತಮ್ಮ ಸಂಪೂರ್ಣವಾದ ಬೆಂಬಲವನ್ನು ಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

Madam SPEAKER.—The question is :

"That the respective sums not exceeding the amount mentioned in the list of Demands be granted to Government to defray the charges which will come in course of payment during the financial year ending 31st day of March 1975 in respect of demand Nos. 33, 56 and 59."

The motion is adopted and the Demands are granted.

As Ordered by the Chair, the motion for Demands for Grants adopted by the House are reproduced below :

Demand No. 33—Labour and Employment

"That a sum not exceeding Rs. 2,89,57,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1975 in respect of 'Labour and Employment.'"

Demand No. 56—Ports and Civil Aviation

"That a sum not exceeding Rs. 84,69,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1975 in respect of 'Ports and Civil Aviation.'"

Demand No. 59—Tourism

" That a sum not exceeding Rs. 7,27,000 inclusive of the sum granted 'on account' be granted to the Government to defray the charges which will come in course of payment during the financial year ending 31st day of March 1975 in respect of " Tourism.' "

Madam SPEAKER.—Tomorrow morning from 9 A.M. to 12 NOON, we will take up financial business and again from 1 P.M. we will taken up the demands for grants pertaining to the Health Department.

The House now stands adjourned to meet again tomorrow morning at 9 A.M.

The House adjourned at Seven Minutes past Six of the Clock to meet again at Nine of the Clock on Wednesday the **1st** *May* **1974.**